UNIVERSAL LIBRARY
OU_200088
UNIVERSAL LIBRARY

**OSMANIA UNIVERSITY LIBRARY**

Call No. K83 K96V  Accession No. K 95

Author కృష్ణయ్యంగారు

Title వేదముల కాలనిర్ణయము

This book should be returned on or before the date last marked below.

# ಒಡೆಯರ ಕಾಲದ ಕಥೆಗಳು

ಕಂಧಾಡೆ ಕೃಷ್ಣಯ್ಯಂಗಾರ್ಯ, ಬಿ.ಎ.,
ದೇಶೀಯ ವಿದ್ಯಾಶಾಲೆ, ಬೆಂಗಳೂರು.

ಸತ್ಯಬೋಧನ ಪುಸ್ತಕ ಭಂಡಾರ
ಬೆಂಗಳೂರು ನಗರ.

ಕರ್ಣಾಟಕ ಸಾಹಿತ್ಯ ಪ್ರಕಟನ ಮಂದಿರ
ಬೆಂಗಳೂರು ನಗರ

[ಬೆಲೆ ೦–೮–೦]

# ಮುನ್ನುಡಿ

ಒಡೆಯರ ವಂಶದ ಚರಿತ್ರೆಯನ್ನೋದುವವರಿಗೆ ಕಾಲಚಿತ್ರವನ್ನು ಸೂಚಿಸಿಕೊಡುವುದರಲ್ಲಿ ಸಹಾಯವಾದೀತೆಂದು ಈ ಕಥೆಗಳನ್ನು ಸಂಗ್ರಹಿಸಿದೆ. ದೊರೆಯಬಹುದಾದ ಎಲ್ಲ ಕಥೆಗಳೂ ಇಲ್ಲಿಲ್ಲ; ಮತ್ತು ೧೭೬೦ ರ ತರುವಾಯದ ಕಥೆಗಳು ವಿಶೇಷವಾಗಿಯೇ ಇರುವುದರಿಂದ ಪುಸ್ತಕದ ಗಾತ್ರವು ಹೆಚ್ಚೀತೆಂಬ ಶಂಕೆಯಿಂದ ಅವುಗಳನ್ನು ಇಲ್ಲಿ ಸೇರಿಸಿಲ್ಲ.

ಪ್ರೌಢ ವಿದ್ಯಾರ್ಥಿಗಳನ್ನುದ್ದೇಶಿಸಿ ಇದನ್ನು ಬರೆದಿಲ್ಲ. ಆದರೂ ವಿಶೇಷ ವ್ಯಾಸಂಗವನ್ನೂ ವಿಚಾರವನ್ನೂ ನಡಸುವವರ ಅನುಕೂಲಕ್ಕಾಗಿ ಕಥೆಗಳ ಕೊನೆಯಲ್ಲಿ ಮುಖ್ಯಾಧಾರಗಳನ್ನು ಸೂಚಿಸಿದೆ.

ಇಲ್ಲಿರುವ ಕಥೆಗಳು ಪ್ರತ್ಯಂಶದಲ್ಲಿಯೂ ಸಿದ್ಧಾಂತವಾದವುಗಳಲ್ಲ. ಸಾಧ್ಯವಾದಷ್ಟು ಸಾಧಾರವಾಗಿ ಬರೆಯಲು ಯತ್ನಿಸಿದೆ; ಅನೇಕೆಡೆಗಳಲ್ಲಿ ಅನುಮಾನಾಸ್ಪದವಾಗಿಯೇ ಇರುತ್ತವೆ. ಅವುಗಳ ಚರ್ಚೆಯು ಇಲ್ಲಿ ಅಸಂಗತ. ಕೂಡಿದ ಮಟ್ಟಿಗೆ ಕಥೆಗಳು ಶುದ್ಧವಾಗಿರುವಂತೆ ಪ್ರಯತ್ನಿಸಲಾಗಿದೆ.

ಮೈಸೂರು ಚರಿತ್ರೆಯನ್ನೋದುವ ಬಾಲಕಬಾಲಕಿಯರಿಗೆ ಈ ಸಣ್ಣ ಪುಸ್ತಕದಿಂದ ಚರಿತ್ರೆಯ ಪಠನವು ಆಸಕ್ತಿಜನಕವೂ ಸುಲಭವೂ ಆಗಲೆಂದು ಹಾರೈಸುತ್ತೇನೆ.

ಕಂ. ಕೃ.

# ತಿದ್ದುಪಡೆ

**ಪುಟ ೪೬**

ಭಾಗ ೪, ಪುಟ....ಸಂ. V. ಎಂಬುದಕ್ಕೆ ಬದಲಾಗಿ ಪುಟ ೨೪೪೫ ಮತ್ತು ೨೪೬೭ ಭಾಗ ೫—ಎಂಬವಾಗಿ ಓದಿಕೊಳ್ಳಬೇಕು.

# ೧ ಮಾರನಾಯಕನ ವಧೆ

ಈಗ್ಗೆ ಸುಮಾರು ೬೦೦ ವರ್ಷಗಳಿಗೆ ಹಿಂದೆ ಯಾದವ ಕುಲಕ್ಕೆ ಸೇರಿದ ವಿಜಯ ಮತ್ತು ಕೃಷ್ಣರೆಂಬ ಅಣ್ಣತಮ್ಮಂದಿರು ರಾಜ್ಯಾಭಿಲಾಷೆಯಿಂದ ದೇಶಸಂಚಾರ ಮಾಡುತ್ತಿದ್ದರು. ಮೈಸೂರೆಂದು ಈಗ ಪ್ರಸಿದ್ಧವಾಗಿರುವ ರಾಜಧಾನಿಯ ಬಳಿ ಹದನವೆಂಬ ಹೆಸರಿನಿಂದಿದ್ದ ಚಿಕ್ಕ ಕೋಟೆಯ ಸಮೀಪಕ್ಕೆ ಅವರು ಬಂದರು. ಅಲ್ಲಿ ಕೆರೆ ಕಟ್ಟೆಯ ಮೇಲೆ ಅವರು ಇರುತ್ತಿರಲು, ವೀರಶೈವ ಕುಲದ ಕೆಲವು ಹೆಂಗಸರು ನೀರಿಗಾಗಿ ಅಲ್ಲಿಗೆ ಬಂದಿದ್ದು ಮಾತನಾಡಿಕೊಳ್ಳುತ್ತಿದ್ದುದನ್ನು ಕಿವಿಗೊಟ್ಟು ಕೇಳಿದರು. ಅವರ ಮಾತುಗಳಿಂದ ಅವರ ಕುಲದಲ್ಲಿ ಹುಟ್ಟಿ ಶ್ರೇಷ್ಠಳೆನಿಸಿದ್ದ ಕನ್ನಿಕೆಯೊಬ್ಬಳು ನೀಚಕುಲದವನೊಬ್ಬನನ್ನು ಮದುವೆ ಮಾಡಿಕೊಳ್ಳುವ ಸಂದರ್ಭವೊದಗಿತ್ತೆಂದು ತಿಳಿಯಬಂತು. ಸೋದರರು ಕುತೂಹಲದಿಂದ ಏನೆಂದು ವಿವರವನ್ನು ಕೇಳಿದರು; ಆ ಹೆಂಗಸರನ್ನು ಸಮಾಧಾನ ಮಾಡಿ ತಾವು ಸಹಾಯ ಮಾಡುವುದಾಗಿ ಮಾತು ಕೊಟ್ಟರು. ಮಾಡಿದ ವಿಚಾರದಲ್ಲಿ ಈ ವಿವರವು ತಿಳಿಯಬಂದಿತು.

ಆ ಪ್ರದೇಶದ ಒಡೆಯನಿಗೆ ಚಿತ್ತಸ್ವಾಸ್ಥ್ಯ ತಪ್ಪಿತ್ತು; ಆತನಿಗೆ ಒಬ್ಬಳೇ ಮಗಳಿದ್ದಳು. ಈ ಸ್ಥಿತಿಯನ್ನು ಕಂಡು ನೆರೆಯಲ್ಲಿದ್ದ ಕಾರುಗಹಳ್ಳಿಯ ಪಾಳಯಗಾರನಾಗಿದ್ದ ಮಾರನಾಯಕನೆಂಬ ಧೂರ್ತನು "ಆ ಕುಮಾರಿಯನ್ನು ನನಗೆ ವಿವಾಹಮಾಡಿಕೊಟ್ಟು ಹದನಾರನ್ನು ಬಿಟ್ಟುಕೊಡಲಿ; ಇಲ್ಲವಾದರೆ ಯುದ್ಧಕ್ಕೆ ಸಿದ್ಧನಾಗಲಿ" ಎಂದು ಹೇಳಿಕಳುಹಿಸಿದ್ದನು. ಬೇರೆ ಗತಿಯಿಲ್ಲದೆ ಹದನಾರಿನವರು ಆ ವಿವಾಹಕ್ಕೆ ಸಮ್ಮತಿ ಕೊಟ್ಟಿದ್ದರು. ಹೀಗಿರಲು ವಿಜಯ

ಕೃಷ್ಣರ ಔತ್ಸುಕತೆಯು ಮಾತು ತಿಳಿಯಿತು. ಆಗ ಅರಮನೆಯವರು ಅವಮಾನವನ್ನು ತಪ್ಪಿಸಿಕೊಳ್ಳುವ ಆಸೆಯಿಂದ ಆ ರಾಜಕುವರರನ್ನು ಕರೆಸಿ ಎಲ್ಲವನ್ನೂ ತಿಳಿಸಿದರು. ಸೋದರರಿಬ್ಬರು ಎಲ್ಲವನ್ನೂ ಅರಿತು ಕೋಟೆಯನ್ನು ರಕ್ಷಿಸಲು ಇದ್ದ ಅನುಕೂಲಗಳನ್ನೆಲ್ಲ ಪರೀಕ್ಷಿಸಿದರು. ಕಡೆಗೆ ಹೊರಗಡೆ ಏನನ್ನೂ ತೋರ್ಪಡಿಸದೆ ವಿವಾಹದ ಕೆಲಸವನ್ನು ಎಂದಿನಂತೆ ನಡೆಸುವ ಹಾಗೆ ನಟಿಸುತ್ತಿರಬೇಕೆಂದು ಹೇಳಿಕೊಟ್ಟರು.

ವಿವಾಹದ ದಿನವು ಸಮೀಪವಾಯಿತು. ಮಾರನಾಯಕನು ಅಟ್ಟಹಾಸದಿಂದಲೂ ಗರ್ವದಿಂದಲೂ ಒಂದು ಅರಮನೆಯನ್ನು ಹೊಕ್ಕು ಮದುವೆಯ ಔತಣಕ್ಕೆ ಸಿದ್ಧನಾದನು. ಮಾರನಾಯಕನೂ ಆತನ ಮುಖ್ಯಾಧಿಕಾರಿಗಳೂ ಒಂದು ತೊಟ್ಟಿಯಲ್ಲಿ ಊಟಕ್ಕೆ ಕುಳಿತರು. ಆತನ ಅನುಚರರಿಗೆ ಬೇರೊಂದು ತೊಟ್ಟಿಯಲ್ಲಿ ಅಣಿ ಮಾಡಿತ್ತು. ಅದೇ ವೇಳೆಯಲ್ಲಿ ಹದನಾರಿನ ಶೂರರನ್ನಾರಿಸಿಕೊಂಡು ಗೋಪ್ಯವಾಗಿ ಹೊಂಚುಹಾಕುತ್ತಿದ್ದ ವಿಜಯ ಕೃಷ್ಣರಿಬ್ಬರೂ ಒಳ್ಳೆ ಸಮಯ ಬಂದಕೂಡಲೆ ಅಕಸ್ಮಾತ್ತಾಗಿ ನುಗ್ಗಿ, ಮಾರನಾಯಕನ ಮೇಲೂ ಆತನ ಮುಖ್ಯಾಧಿಕಾರಿಗಳ ಮೇಲೂ ಹಾರಿಬಿದ್ದು ಇರಿದು ಕೊಂದುಬಿಟ್ಟರು. ಮಾರನಾಯಕನ ಇತರ ಅನುಚರರು ತಮ್ಮ ಧಣಿಯು ಹತನಾದುದನ್ನು ತಿಳಿದು ದಿಕ್ಕುತೋಚದವರಾಗಿ ನಿರ್ಬಂಧಕ್ಕೆ ಸಿಕ್ಕಿದರು.

ಕೂಡಲೆ ವಿಜಯ ಕೃಷ್ಣರಿಬ್ಬರು ಹದನಾರಿನ ಸೈನ್ಯವನ್ನು ಸಿದ್ಧಮಾಡಿಕೊಂಡು ಕಾರುಗಹಳ್ಳಿಯ ಕಡೆಗೆ ಹೊರಟು ಸುಲಭವಾಗಿ ಆ ಕೋಟೆಯನ್ನು ಹಿಡಿದುಕೊಂಡರು. ಏಕೆಂದರೆ ಅಲ್ಲಿದ್ದವರು ಹಠಾತ್ತಾಗಿ ಬಂದೊದಗಿದ ಈ ವಿಪತ್ತನ್ನು ಎದುರಿಸಲಾರದಿದ್ದುದಲ್ಲದೆ ಮಾರನಾಯಕನು ಮೃತನಾದನೆಂದು ತಿಳಿದು ಖಿನ್ನರಾಗಿದ್ದರು. ಕಾರುಗಹಳ್ಳಿಯನ್ನು ವಶಪಡಿಸಿಕೊಂಡ ಕೂಡಲೆ ರಾಜಕುವರರಿಬ್ಬರೂ ಹದನಾರಿಗೆ ಹಿಂತಿರುಗಿದರು. ಅಲ್ಲಿಯ ರಾಜ

ಕುಮಾರಿಯು ಸಂತೋಷದಿಂದ ವಿಜಯನ ಕೊರಳಿಗೆ ಹೂಮಾಲೆಯನ್ನು ಹಾಕಿ ವರಿಸಿ ಮದುವೆಯಾದಳು. ಈ ವಿಜಯನೇ ಒಡೆಯರ ವಂಶದ ಮೂಲಪುರುಷನಾದ ಯದು ಒಡೆಯರು.

[ವಿಲ್ಕ್ಸ್ ಸಾಹೇಬರ ಗ್ರಂಥದಾಧಾರ; ಈ ವೃತ್ತಾಂತದಲ್ಲಿ ವಂಶರತ್ನಾಕರ, ವಂಶಾವಳಿಗಳಿಗಿಂತಲೂ ವಿಲ್ಕ್ಸ್‌ರವರ ಲೇಖನದಲ್ಲಿಯೇ ಹೆಚ್ಚು ಸತ್ಯಾಂಶವಿರಬಹುದೆನ್ನುವ ಪಕ್ಷಕ್ಕೆ ಕಾರಣವುಂಟು. ಇದರ ವಿಮರ್ಶೆಗೆ ಹೊಸ ಗೆಜೆಟ್ಟಿಯರ್ ೨ನೇ ಸಂಪುಟದ ಕಡೆಯ ಭಾಗವು ಉಪಯುಕ್ತವಾದುದು.]

# ೨ ತಿಮ್ಮರಾಜ ಒಡೆಯರು

ಬೆಟ್ಟದ ಚಾಮರಾಜ ಒಡೆಯರಿಗೆ ಮೂವರು ಮಕ್ಕಳಿದ್ದರು. ಅವರಲ್ಲಿ ಹಿರಿಯರಾದ ತಿಮ್ಮರಾಜ ಒಡೆಯರಿಗೆ ಹೆಮ್ಮನಹಳ್ಳಿಯು ಲಭಿಸಿತು. ಈ ತಿಮ್ಮರಾಜ ಒಡೆಯರು ಒಂಭತ್ತು ಮೈಲು ದೂರದಲ್ಲಿದ್ದ ನಂಜನಗೂಡಿನ ಶ್ರೀಕಂಠೇಶ್ವರ ದೇವರಲ್ಲಿ ಬಹಳ ಭಕ್ತಿಯನ್ನಿಟ್ಟಿದ್ದರು. ಆದರೆ ನಂಜನಗೂಡಿಗೆ ಹೋಗುವ ಮಾರ್ಗದಲ್ಲಿಯೇ ಸ್ವತಂತ್ರರಾಗಿ ಇಬ್ಬರು ಪಾಳಯಗಾರರು ಆಳುತ್ತಿದ್ದರು. ಹೋದಾಗಲೆಲ್ಲ ಆ ಪಾಳಯಗಾರರ ಅನುಮತಿಯನ್ನು ಕೇಳಬೇಕಾಗಿತ್ತು.

ತಿಮ್ಮರಾಜರ ವೈಭವವನ್ನು ಆ ಪಾಳಯಗಾರರು ಸಹಿಸದೆ ಅಸೂಯೆ ಪಡುತ್ತಿದ್ದರು. ಒಂದು ಸಲ ತಿಮ್ಮರಾಜ ಒಡೆಯರು ಮುನ್ನೂರು ಭಟರನ್ನು ಮೈಗಾವಲಿಗೆ ಕರೆದುಕೊಂಡು ಅಟ್ಟಹಾಸದಿಂದ ನಂಜನಗೂಡಿಗೆ ಹೋಗಿ ಪೂಜೆ ಮಾಡಿಸಿ ಸಮಾರಾಧನೆ ಮಾಡಿಸಿದರು. ಆಗ ಅಸೂಯೆಯನ್ನು ತಾಳಲಾರದೆ ಆ ಪಾಳಯಗಾರರು ಕಾಲುಕೆರೆದು ಜಗಳವಾಡಿದರು. ಯುದ್ಧವೇ ಆಯಿತು. ಹೊಡೆದಾಟದಲ್ಲಿ ಅನೇಕರು ಸತ್ತರು. ಆದರೆ ತಿಮ್ಮರಾಜ ಒಡೆಯರು ಜಯಶೀಲರಾದರು. ಕೂಡಲೆ ತಮಗೆ ಶತ್ರುವಾಗಿದ್ದ ಉಮ್ಮತ್ತೂರಿನ ಒಡೆಯರಿಂದ ಕಪ್ಪಕಾಣಿಕೆಯನ್ನು ಸುಲಿದುಕೊಂಡು ತಮ್ಮ ಸಾಮ್ರಾಜ್ಯವನ್ನು ರಕ್ಷಿಸಿಕೊಂಡರು.

[ಏಸ್ಕ್ರ; ಸಂಪುಟ ೧—ಪುಟ ೩೨]

# ೩ ರಾಜಭಕ್ತ ಮೈಸೂರಿನ ಸೆಟ್ಟಿ

ಇಮ್ಮಡಿ ತಿಮ್ಮರಾಜಒಡೆಯರು ದೊರೆತನಮಾಡುತ್ತಿದ್ದ ಕಾಲದಲ್ಲಿ ಸಿಂಧುವಳ್ಳಿ, ಹುಣಸನಾಳುಗಳ ಪಾಳಯಗಾರರು ಅವರ ಆಶ್ರಿತರಾಗಿದ್ದರು.

ಒಂದುಸಲ ಸಂಜನಗೂಡಿನ ರಥೋತ್ಸವ ಕಾಲದಲ್ಲಿ ದೊರೆಗಳು ಅಲ್ಲಿಗೆ ಬಂದಿದ್ದರು. ಅಲ್ಲಿಗೆ ಕೆಲವರು ಪಾಳಯಗಾರರು ದೇವರ ಸೇವೆಗೆಂದು ಬಂದಿದ್ದರು. ಪಾಳಯಗಾರರು ಬಹಳ ಅಟ್ಟಹಾಸದಿಂದ ಮೆರೆಯುತ್ತಲಿದ್ದು 'ಬಿರುದೆಂತೆಂಬರಗಂಡ' ನೆಂದು ಹೊಗಳಿಸಿಕೊಳ್ಳುತ್ತ ತಮ್ಮ ಸಮಾನರಿಲ್ಲವೆಂಬ ಜಂಭವನ್ನು ತೋರುತ್ತಿದ್ದರು.

ಇದನ್ನು ಕಂಡು ಮೈಸೂರಿನವರು ಸಹಿಸಲಿಲ್ಲ. ಅವರಲ್ಲಿ ಮುಖ್ಯನೂ ರಾಜಭಕ್ತನೂ ಆಗಿದ್ದ ಮೈಸೂರ ಸೆಟ್ಟಿಯು ಸಾಹಸದಿಂದ ಅವರೆದುರಿಗೆ ಹೋಗಿ "ಬಿರುದೆಂತೆಂಬರಗಂಡನೆಂಬ ಬಿರುದು ನಮ್ಮ ಮೈಸೂರಿನ ಒಡೆಯರಿಗೇ ಅಲ್ಲದೆ ನಿಮ್ಮಂತಹವರಿಗೆ ಸಲ್ಲುವುದಿಲ್ಲ; ನೀವು ಆ ಬಿರುದನ್ನು ಬಿಟ್ಟುಬಿಡಬೇಕು" ಎಂದು ಗಂಭೀರವಾಗಿ ಹೇಳಿದನು. ಪಾಳಯಗಾರರಿಗೆ ಕೋಪ ಬಂತು; ಈ ಅಧಿಕಪ್ರಸಂಗಿ ಸೆಟ್ಟಿಯನ್ನು ಶಿಕ್ಷಿಸಬೇಕೆಂದು ಅವನನ್ನು ಸೆರೆ ಹಿಡಿಸಿ ಒಯ್ದರು.

ಈ ಸಮಾಚಾರವು ಒಡೆಯರಿಗೆ ತಲುಪಿತು; "ನಮ್ಮ ಧೀರ ಪ್ರಜೆಯಾದ ಸೆಟ್ಟಿಯನ್ನು ಹಿಡಿದುಕೊಂಡು ಹೋಗಲು ಆ ಪಾಳಯಗಾರರಿಗೆಷ್ಟು ಗರ್ವ! ನಮ್ಮ ಆಪ್ತನಾದ ಸೆಟ್ಟಿಯನ್ನು ಹಾಗೆ ಬಿಟ್ಟುಕೊಟ್ಟೇವೆಯೆ ನಾವು!" ಎಂದು ತಾನೇ ಸೈನ್ಯದೊಡನೆ

ಹೊರಟು ಪಾಳಯಗಾರರ ಶಿಬಿರಕ್ಕೆ ಹೋಗಿ ಕೂಗಿ ಹೇಳಿಸಿದರು : “ಪಾಳಯಗಾರರಲ್ಲಿ ಯಾರಾದರೂ ಧೀರರೂ ಸಾಹಸಿಗಳೂ ಇದ್ದರೆ ಯುದ್ಧಕ್ಕೆ ಬರಬಹುದು ; ಇಲ್ಲವಾದರೆ ಎಲ್ಲರೂ ಒಂದು ಸೆಟ್ಟಿಯನ್ನೊಪ್ಪಿಸಿ ತಪ್ಪಾಯಿತೆಂದು ದೊರೆಗಳ ಮನ್ನಣೆಯನ್ನು ಬೇಡಬಹುದು” ಎಂದು. ಮದಿಸಿದ್ದ ಪಾಳಯಗಾರರು ಯುದ್ಧಕ್ಕೆ ಬಂದರು. ಒಡೆಯರು ಅವರೆಲ್ಲರನ್ನು ಸೋಲಿಸಿ ಸೆರೆಯಲ್ಲಿದ್ದ ಸೆಟ್ಟಿಯನ್ನು ಕರೆತರಿಸಿ ಮರ್ಯಾದೆಯಿಂದ ಕಂಡು ಪ್ರಸಾದಿಗೆ ಜಯಶೀಲರಾಗಿ ಹಿಂತಿರುಗಿದರು. ಈ ಸಂಗತಿಯಿಂದ ರಾಜರಿಗೆ ‘ಪೊಸೆಗಾರ’ ನೆಂಬ ಬಿರುದು ಸಾರ್ಥಕವಾಯಿತು. ಅಂದಿನಿಂದ ಅರಮನೆಯಲ್ಲಿ ಸೆಟ್ಟಿಗೆ ಗೌರವವೂ ಹೆಚ್ಚಿತು.

[ವಂಶರತ್ನಾಕರ ಪುಟ ೧೯; ವಂಶಾವಳಿ ಸಂಪುಟ ೧ ಪುಟ ೧೫ ೧೬]

# ೪ ಬೋಳತಲೆ ಒಡೆಯರು

ದೊರೆಗಳಾಗಿದ್ದ ಚಾಮರಾಜಒಡೆಯರವರು ಬಹಳ ಭಕ್ತರಾಗಿದ್ದರು. ಮನೆ ದೇವತೆಯಾದ ಚಾಮುಂಡೇಶ್ವರಿಯಲ್ಲಂತೂ ಅವರಿಗೆ ಅತಿಶಯವಾದ ಭಕ್ತಿಯಿತ್ತು. ಪಟ್ಟವನ್ನೇರಿದಮೇಲೆ ಒಡೆಯರು ಒಂದು ಅಮಾವಾಸ್ಯೆಯ ರಾತ್ರಿ ಅಮ್ಮನವರ ಪೂಜೆಗೆಂದು ಪರಿವಾರದೊಡನೆ ಮುಡಿಯುಟ್ಟು ಬೆಟ್ಟಕ್ಕೆ ಹೊರಟರು. ಗಾಢಾಂಧಕಾರ; ಪಂಜುಗಳನ್ನು ಹಿಡಿಸಿಕೊಂಡು ದಾರಿಯನ್ನು ಕಳೆದು ಬೆಟ್ಟವನ್ನು ಹತ್ತಲು ದೊರೆಗಳು ಮೊದಲಿಟ್ಟರು. ಅದೇ ವೇಳೆಗೆ ಸರಿಯಾಗಿ ಆಕಾಶದಲ್ಲಿ ಕಾರ್ಮೋಡಗಳು ಕವಿದುಕೊಂಡು ಗುಡುಗೂ ಮಿಂಚೂ ಮೊದಲಾಯಿತು. ಬೆಟ್ಟವನ್ನು ಹತ್ತುತ್ತ ಗುಡುಗು ಇನ್ನೂ ಹೆಚ್ಚಾಯಿತು. ಕಿಬ್ಬಿಯೂ ಭಯಂಕರವಾಗಿತ್ತು. ಇದ್ದಕ್ಕಿದ್ದ ಹಾಗೆಯೇ ಗಗನವನ್ನು ಭೇದಿಸಿಕೊಂಡು ಪ್ರಳಯ ಕಾಲದಲ್ಲಿ ನಡೆಯುವಂತೆ ಬರಸಿಡಿಲು ರಾಜರ ಸಮೀಪದಲ್ಲಿಯೇ ಬಿತ್ತು. ಎಲ್ಲಿದ್ದವರು ಅಲ್ಲಿಯೇ ನೆಲಕ್ಕೆ ಬಿದ್ದುಬಿಟ್ಟರು; ಅನೇಕರು ಮೂರ್ಛಿತರಾದರು; ಸಿಡಿಲು ಬಿದ್ದುದು, ಹೋದುದು ಯಾರಿಗೂ ತಿಳಿಯಲಿಲ್ಲ. ಎಲ್ಲರೂ ನಿಶ್ಚೇಷ್ಟಿತರಾಗಿದ್ದರು ಎರಡು ತಾಸುಗಳ ಕಾಲ. ತರುವಾಯ ದೊರೆಗಳೆದ್ದು ಕುಳಿತು ಸುತ್ತಲೂ ನೋಡಿದರು. ಆಕಾಶವೇನೋ ಸ್ತಬ್ಧವಾಗಿತ್ತು; ಕಗ್ಗತ್ತಲು; ಮಳೆಯಿಲ್ಲ; ಆದರೂ ಗಿಡಬಳ್ಳಿಗಳು ಗಾಳಿಗೆ ಸಿಕ್ಕಿ ಸುಯ್ಯುಯ್ ಎಂದು ನಿಟ್ಟುಸಿರುಬಿಡುತ್ತಿದ್ದಂತಿದ್ದವು. ರಾಜರೆದ್ದು ಪಕ್ಕದಲ್ಲಿ ಬಿದ್ದಿದ್ದವನನ್ನು ಎಚ್ಚರಿಸಲು ಪ್ರಯತ್ನಿಸಿದರು. ಪ್ರಾಣವೇ ಇಲ್ಲ; ಒಬ್ಬೊಬ್ಬರನ್ನಾಗಿ ನೋಡುತ್ತಿರಲು ಕಡೆಗೆ ಒಬ್ಬನು ಮೂರ್ಛೆ ತಿಳಿದೆದ್ದು ಕುಳಿತು ಸ್ವಲ್ಪಕಾಲ ಬೆಪ್ಪಾಗಿ ನೋಡುತ್ತಲಿದ್ದು ಆಮೇಲೆ ಪಂ

ಜನ್ನು ಹೊತ್ತಿಸಿ ರಾಜರನ್ನು ಗುರುತಿಸಿ ಅಳುತ್ತ "ಏನಾಯಿತು! ಮಹಾಸ್ವಾಮಿ! ಏನಾಯಿತು!" ಎಂದು ಗದ್ಗದ ಸ್ವರದಿಂದ ಕೇಳಿದನು. ದೊರೆಗಳಿಗೆ ತಿಳಿಯಲಿಲ್ಲ; ಇವನು ಹೆದರಿದ್ದಾನೆಂದು "ಭಯಪಡಬೇಡವಯ್ಯ; ಇದು ದುರ್ಗಿಯ ಆಟ ಮಾತ್ರ! ಎಲ್ಲವೂ ಶಾಂತವಾಯಿತು. ಇನ್ನೇಕೆ ಅಳುಕು?" ಎಂದು ಸಮಾಧಾನಪಡಿಸಿದರು. ಅದಕ್ಕೆ ಅವನು "ಹೆದರಿಕೆಯಿಲ್ಲ, ಪ್ರಭು, ಆದರೆ ತಮ್ಮ.... ಜುಟ್ಟು, ಜುಟ್ಟು!" ಎಂದನು. ದೊರೆಗಳು ಆಗ ತಲೆಯನ್ನು ಸವರಿಕೊಂಡು ನೋಡಿಕೊಂಡರು—ತಲೆಯ ಕೂದಲೆಲ್ಲಾ ಉದುರಿಹೋಗಿ ಬೋಳಾಗಿಬಿಟ್ಟಿತ್ತು.

ಆಗ ರಾಜರು "ಇದಕ್ಕೇ ನಿನಗೆ ದುಃಖ! ಹೋಗಲಿ ಬಿಡು. ಅಮ್ಮನವರಿಗೆ ಇಷ್ಟಕ್ಕೆ ತೃಪ್ತಿಯಾಯಿತು! ಪ್ರಾಣಕ್ಕೆ ಹಾನಿಯಿಲ್ಲವಲ್ಲ" ಎಂದರು. ತರುವಾಯ ಇಬ್ಬರೂ ಪೂಜೆ ಮುಗಿಸಿಕೊಂಡು ಅನುಚರರೊಡನೆ ಹಿಂತಿರುಗಿದರು.

[ವಂಶರತ್ನಾಕರ, ಪುಟ ೨೦; ವಂಶಾವಳಿ, ಪುಟ ೧೭]

# ೫ ಸುಗುಣ ಗಂಭೀರ

ಬೋಳತಲೆ ಚಾಮರಾಜ ಒಡೆಯರ ಕಾಲದಲ್ಲಿ ಒಡೆಯರ ವಂಶಕ್ಕೆ ಅಧಿಕಾರವು ಹೆಚ್ಚಾಗಿರಲಿಲ್ಲ. ಅವರೂ ನೆರೆಹೊರೆಯಲ್ಲಿದ್ದ ಒಡೆಯರೂ ಪಾಳಯಗಾರರೊಂದಿಗೆ ಸೇರಿಕೊಂಡು ಶ್ರೀರಂಗ ಪಟ್ಟಣದ ಅಧಿಕಾರಿಗೆ ಪೊಗದಿ ಕೊಡಬೇಕಾಗಿತ್ತು.

ಶ್ರೀರಂಗಪಟ್ಟಣದಲ್ಲಿ ವಿಜಯನಗರದ ಅಧಿಕಾರಿಯಾಗಿ ರಾಮರಾಯನೆಂಬಾತನಿದ್ದನು. ಸುತ್ತಮುತ್ತಣ ಪಾಳಯಗಾರರನ್ನು ಆಳುತ್ತಿದ್ದ ಆತನು ತೊರೆಮಾವಿನಹಳ್ಳಿಯ ರೇವಟಿ ವೆಂಕಟಾದ್ರಿ ನಾಯಕನನ್ನು ಮೆಚ್ಚಿ ಆತನಿಗೆ ಹೆಚ್ಚು ಅಧಿಕಾರವನ್ನು ಕೊಟ್ಟನು. ಚಾಮರಾಜ ಒಡೆಯರಿಗೆ ಇದು ಸಹಿಸಲಿಲ್ಲ. ಆದರೆ ರಾಮರಾಯನ ಬೆಂಬಲವನ್ನು ಪಡೆದ ವೆಂಕಟಾದ್ರಿನಾಯಕನನ್ನು ಇದಿರಿಸುವುದು ಸುಲಭವಾಗಿರಲಿಲ್ಲ. ಬಂದ ಆದಾಯದಲ್ಲಿ ಸಾಕಾದಷ್ಟು ಸೈನ್ಯವನ್ನು ಕೂಡಿಸುವುದಕ್ಕೆ ಆಗುತ್ತಿರಲಿಲ್ಲ; ಮತ್ತು ಮೈಸೂರಿಗೆ ಕೋಟೆ ಕಟ್ಟುವುದಕ್ಕೂ ಅವಕಾಶವಿರಲಿಲ್ಲ. ಏಕೆಂದರೆ ಶ್ರೀರಂಗ ಪಟ್ಟಣದ ಪ್ರತಿನಿಧಿಯು ಹಾಗೆ ಮಾಡಿದಲ್ಲಿ ಕೋಪಗೊಳ್ಳುತ್ತಿದ್ದನು.

ಆಗ ಚಾಮರಾಜ ಒಡೆಯರು ಉಪಾಯವನ್ನು ಯೋಚಿಸಿದರು. ಹಣವನ್ನುಳಿಸಿಕೊಳ್ಳುವುದಕ್ಕೂ ಮೈಸೂರಿಗೆ ಕೋಟೆ ಕಟ್ಟುವುದಕ್ಕೂ ಅನುಕೂಲವಾಗುವ ಹಾಗೆ ರಾಮರಾಯನ ಬಳಿಗೆ "ನಮ್ಮ ಹೊಲಗಳಲ್ಲಿಯೂ ಮನೆಗಳ ಅಂಗಳದಲ್ಲಿಯೂ ಕಾಡುಹಂದಿಗಳ ಕಾಟ ಹೆಚ್ಚಾಗಿದೆ. ಕಾಡುಹಂದಿಗಳನ್ನು ತಡೆಯಲು ಊರನ್ನು ಕೋಟೆಯಿಂದ ಭದ್ರಪಡಿಸಬೇಕು; ಅದಕ್ಕೆ ಹಣವೂ ಬೇಕು. ಆದ್ದರಿಂದ ತಾವು ನಮ್ಮ ಪೊಗದಿಯ ಹಣವನ್ನು ಮನ್ನಿಸಿ ಕೋಟೆ

ಕಟ್ಟಲು ಅನುಮತಿ ಕೊಡಬೇಕು " ಎಂದು ಹೇಳಿ ಕಳುಹಿಸಿದರು. ಆತನು ಒಪ್ಪಲು ಪೊಗದಿಯ ಹಣದಿಂದ ಕೋಟೆಯನ್ನು ಕಟ್ಟಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು.

ಬಳಿಕ ಒಂದಾನೊಂದು ಸಲ ವೆಂಕಟಾದ್ರಿ ನಾಯಕನು ದಾಳ, ದಮಾಣ, ಅಂದಣ ಮುಂತಾದವುಗಳೊಡಗೂಡಿ ಶ್ರೀರಂಗಪಟ್ಟಣಕ್ಕೆ ಹೋಗುತ್ತಿದ್ದಾಗ ಚಾಮರಾಜ ಒಡೆಯರು ಆತನನ್ನು ಕಾಳಗಕ್ಕೆ ಕರೆದರು. ಮೈಸೂರಿನ ಭಟರು ಚೆನ್ನಾಗಿ ಕಾದಿ ದಾಳದಮಾಣ ಮುಂತಾದುವನ್ನು ಕಿತ್ತುಕೊಂಡರು. ಅಂದಿನಿಂದ ಚಾಮರಾಜ ಒಡೆಯರು ವೆಂಕಟಾದ್ರಿನಾಯಕನು ಒಪ್ಪಿಕೊಂಡಿದ್ದ "ಸುಗುಣಗಂಭೀರ" ನೆಂಬ ಬಿರುದನ್ನು ತಾವೇ ವಹಿಸಿದರು.

[ಹಿಂದಿನ ಕಥೆಗಿದ್ದಂತೆಯೇ]

# ೬ ಬೆಟ್ಟದ ಒಡೆಯರು

ಬೋಳತಲೆ ಚಾಮರಾಜ ಒಡೆಯರವರ ತರುವಾಯ ಬೆಟ್ಟದ ಒಡೆಯರೆಂದು ಪ್ರಸಿದ್ಧರಾದ ಒಡೆಯರು ಪಟ್ಟಕ್ಕೆ ಬಂದರು. ಇವರು ಶೂರರಾಗಿದ್ದರು ; ಆದರೆ ಮುಂದಾಲೋಚನೆಯಿಲ್ಲದೆ ದುಡುಕುತ್ತಿದ್ದರು. ಮೃದು ಸ್ವಭಾವವಿದ್ದರೂ ನಿದಾನವಿರಲಿಲ್ಲ. ಇವರು ಎರಡು ವರ್ಷಗಳಾಳ್ವಿಕೆಯಲ್ಲಿ ಬೊಕ್ಕಸದಲ್ಲಿದ್ದ ಹಣವೆಲ್ಲವನ್ನೂ ವೆಚ್ಚಮಾಡಿಬಿಟ್ಟರು. ಶ್ರೀರಂಗಪಟ್ಟಣಕ್ಕೆ ಸಲ್ಲಬೇಕಾಗಿದ್ದ ಪೊಗದಿಯು ಹಾಗೆಯೇ ಉಳಿದುಹೋಯಿತು. ಆಗ ಅರಮನೆಯ ಹಿರಿಯರು ಬೆಟ್ಟದ ಒಡೆಯರನ್ನು ಪಟ್ಟದಿಂದ ತಪ್ಪಿಸಿ ರಾಜ ಒಡೆಯರಿಗೆ ಪಟ್ಟವನ್ನು ಕಟ್ಟುವ ಆಲೋಚನೆ ಮಾಡಿದರು. ದೂರಾಲೋಚನಾಪರರಾದ ರಾಜ ಒಡೆಯರು ಸಾಲ ತೀರುವಂತೆಯೂ ಹಣ ಬರುವಂತೆಯೂ ಮುಖ್ಯಸ್ಥರಿಂದ ಮಾತು ತೆಗೆದುಕೊಂಡು ಪಟ್ಟಕ್ಕೊಪ್ಪಿದರು.

ಬೆಟ್ಟದ ಒಡೆಯರನ್ನು ಕೊಲೆಮಾಡಿಸಬೇಕೆಂದು ಯಾರೂ ಆಲೋಚಿಸಲಿಲ್ಲ. ರಾಜ ಒಡೆಯರಿಗೆ ಪಟ್ಟ ಕಟ್ಟುವ ನಿಶ್ಚಯವು ನಡೆಯುತ್ತಿದ್ದಾಗಲೇ ಬೆಟ್ಟದ ಒಡೆಯರು ಅಲ್ಲಿಗೆ ಬಂದರು. ಅಲ್ಲಿಯ ಪರಿವಾರದವರು ಕೂಡಲೆ ವಿನೀತರಾಗಿ ಆ ನಿಶ್ಚಯವನ್ನು ಅರಿಕೆ ಮಾಡಿ "ದೇಶದ ಸಾಲವನ್ನು ತೀರಿಸಲು ಈ ನಿಶ್ಚಯವು ಅವಶ್ಯವಾಯಿತು. ಇದರಿಂದ ತಾವು ಖಿನ್ನರಾಗಬಾರದು. ತಾವು ಶ್ರೀರಂಗಪಟ್ಟಣದಲ್ಲಿ ರಾಜಪ್ರತಿನಿಧಿಯ ಸಭೆಯಲ್ಲಿ ಮೈಸೂರಿನ ಗೌರವವನ್ನುಳಿಸುತ್ತ ಇರಬಹುದು ; ಅಥವಾ ತಮಗೆ ಸ್ವತಂತ್ರವಾಗಿರಲು ಇಷ್ಟವಾದರೆ ಮೈಸೂರಿನಲ್ಲಿಯೇ ತಾವೂ ಇರಬಹುದು" ಎಂದು ಸೂಚಿಸಿದರು. ಆಗ ಬೆಟ್ಟದ ಒಡೆಯರಿಗೆ ಕೋಪ ಬಂದಿತು.

"ನಾವು ಶ್ರೀರಂಗಪಟ್ಟಣದಲ್ಲಿಯೂ ಇರುವುದಿಲ್ಲ, ಮೈಸೂರಿನಲ್ಲಿಯೂ ಇರುವುದಿಲ್ಲ. ನಮಗೇನೂ ಬೇಡ" ಎಂದುಬಿಟ್ಟು ಆ ಸ್ಥಳದಿಂದ ಹೊರಟುಹೋದರು.

ಈ ಸಮಾಚಾರವನ್ನು ಕೇಳಿದಕೂಡಲೆ ಕಾರುಗಹಳ್ಳಿಯ ಪಾಳಯಗಾರನು ತನಗೆ ಒಳ್ಳೆ ಸಮಯ ಬಂದಿತೆಂದು ನೆನೆದು ಸೈನ್ಯವನ್ನು ನಡೆಸಿಕೊಂಡು ಮೈಸೂರಿನಮೇಲೆ ಅಕಸ್ಮಾತ್ತಾಗಿ ದಂಡೆತ್ತಿ ಬಂದು ಮುತ್ತಿದನು. ಬೆಟ್ಟದ ಒಡೆಯರು ಎಲ್ಲವನ್ನೂ ಬಿಟ್ಟವರಂತೆ ತಿರಸ್ಕಾರಭಾವದಿಂದ ಒಂದೆಡೆಯಲ್ಲಿ ಶತಪಥ ತಿರುಗುತ್ತಿದ್ದರು. ಕೋಟೆಯ ಒಳಗೆ ಗಜಿಬಿಜಿ, ಕೋಟೆಯ ಹೊರಗಡೆ ಶತ್ರುಗಳ ಹಾವಳಿ. ಆದರೂ ಬೆಟ್ಟದ ಒಡೆಯರು ತಟಸ್ಥರಾಗಿದ್ದುದನ್ನು ಕಂಡು ಹೆಂಗಸೊಬ್ಬಳು ಹತ್ತಿರ ಹೋಗಿ "ಇದೇನು ಈ ಕಾಲದಲ್ಲಿಯೂ ಒಡೆಯರ ವಂಶದಲ್ಲಿ ಹುಟ್ಟಿದವರು ತಟಸ್ಥರಾಗಿರುವುದೇ!" ಎಂದು ಮೂದಲಿಸಿದಳು. ತಕ್ಷಣವೇ ಬೆಟ್ಟದ ಒಡೆಯರು ಒಂದು ಗಂಡುಕೊಡಲಿಯನ್ನು ಎತ್ತಿಕೊಂಡು ತಮ್ಮ ಸೈನ್ಯವನ್ನು ಕೂಗಿ ಒಟ್ಟುಕೂಡಿಸಿ "ಹಿಂದೆ ಬನ್ನಿ" ಎಂದು ಕೋಟೆಯ ಬಾಗಿಲ ಕಡೆಗೆ ನುಗ್ಗಿದರು. ಬಾಗಿಲ ಅಗಣೆಯು ಹಾಕಿತ್ತು. ಬೆಟ್ಟದ ಒಡೆಯರು ತಮ್ಮ ಕೊಡಲಿಯಿಂದ ಒಂದೇ ಏಟು ಹೊಡೆದರು. ಬಾಗಿಲು ತೆರೆಯಿತು. ತರುವಾಯ ಒಡೆಯರು ತಮ್ಮ ಭಟರೊಡನೆ ಶತ್ರುಗಳ ಮಧ್ಯೆ ನುಗ್ಗಿದರು, ವೀರಾವೇಶದಿಂದ ಯುದ್ಧಮಾಡಿ ಅವರನ್ನು ಸೋಲಿಸಿ ಅಟ್ಟಿಬಿಟ್ಟರು. ಈ ರೀತಿಯಲ್ಲಿ ಮುತ್ತಲು ಬಂದ ಶತ್ರುಗಳು ತಾವೇ ಸೋತು ಪಲಾಯನರಾದರು.

[ವಿಲ್ಕ್ಸ್, ಸಂ. ೧; ಪುಟ ೨೫]

## ೭ ರಾಜ ಒಡೆಯರು ಆನೆಯನ್ನು ಬಿಟ್ಟಿದ್ದು

ಕಾರುಗಹಳ್ಳಿಯ ಪಾಳಯಗಾರರನ್ನು ಮೈಸೂರಿನಿಂದ ಓಡಿಸಿದನಂತರ ಬೆಟ್ಟದ ಒಡೆಯರು ಕತ್ತಿಯನ್ನು ಹಿಡಿದು ರಾಜ ಒಡೆಯರಿಗಾಗಿ ಅನೇಕ ಜಯಗಳನ್ನು ಪಡೆದರು. ರಾಜ ಒಡೆಯರ ಸಾಮ್ರಾಜ್ಯವನ್ನು ಶ್ರೀರಂಗಪಟ್ಟಣದ ಅಧಿಕಾರಿಯು ಸಹಿಸಲಿಲ್ಲ; ಅದನ್ನು ತಗ್ಗಿಸುವ ಯೋಚನೆಯಿಂದ ಮೈಸೂರಿನ ಬಳಿ ಇದ್ದ ಕೆಸರೆಯ ಕೋಟೆಯನ್ನು ಹಿಡಿಯಲು ಸೈನ್ಯವನ್ನು ಕಳುಹಿಸಿದನು. ಆ ಅಧಿರಾಜನ ಸೈನ್ಯವನ್ನು ಬೆಟ್ಟದ ಒಡೆಯರೇ ಎದುರಿಸಿ ಸೋಲಿಸಿದರು. ಕೆಸರೆಯ ಕೋಟೆಯನ್ನು ಕೊಳ್ಳೆಹೊಡೆದರು. ಕೊಳ್ಳೆಯಲ್ಲಿ ಉತ್ತಮವಾದ ಒಂದಾನೆಯು ಸಿಕ್ಕಿತು. ಆ ಆನೆಯನ್ನು ತಂದು ಬೆಟ್ಟದ ಒಡೆಯರು ರಾಜ ಒಡೆಯರಿಗೆ ಒಪ್ಪಿಸಿದರು.

ರಾಜ ಒಡೆಯರು ಆನೆಯನ್ನು ಸಾಕಿಕೊಳ್ಳುವುದು ಕಷ್ಟವಾಗಿತ್ತು. ಇಟ್ಟುಕೊಂಡರೆ ವೃಥಾ ವೆಚ್ಚವಾಗುವುದೆಂದು ಯೋಚಿಸುತ್ತ "ಈ ಆನೆಗಾಗಿ ವೆಚ್ಚ ಮಾಡತಕ್ಕ ಹಣದಿಂದ ಮೂವತ್ತು ಸೈನಿಕರ ಸಂಬಳಗಳನ್ನು ಕೊಡಬಹುದು. ಆದ್ದರಿಂದ ಮೂವತ್ತು ಸೈನಿಕರನ್ನು ಸೇನೆಯಲ್ಲಿ ಹೆಚ್ಚಿಸೋಣ. ಆನೆಯನ್ನು ಕರೆದುಕೊಂಡುಹೋಗಿ ಶ್ರೀರಂಗಪಟ್ಟಣದ ರಾಯನಿಗೆ ಕೊಟ್ಟುಬಿಡೋಣ" ಎಂದರು. ಈ ರೀತಿಯಲ್ಲಿ ಎದುರುಬಿದ್ದ ತಪ್ಪನ್ನು ತೊಡೆದುಹಾಕಲು ರಾಜ ಒಡೆಯರು ಸಂಧಾನಮಾಡಿ ತಮ್ಮ ಹಣವನ್ನು ವ್ಯರ್ಥವ್ಯಯಕ್ಕೆ ಕೊಡದೆ ಇದ್ದರು. ಶ್ರೀರಂಗಪಟ್ಟಣದ ರಾಯನು ಆನೆಯನ್ನು ಸ್ವೀಕರಿಸಿ ಸಮಾಧಾನಪಟ್ಟು ರಾಜ ಒಡೆಯರನ್ನು ಮನ್ನಿಸಿದನು. ತರುವಾಯ ತಮ್ಮ ಭೂಮಿಗಳಲ್ಲಿ ಇತರರ ತೊಂದರೆ ಹೆಚ್ಚಿ

ತೆಂದು ಜಾಣತನದಿಂದ ಹೇಳಿ ರಾಜ ಒಡೆಯರು ಕೊಡುತ್ತಿದ್ದ ಪೊಗದಿಯನ್ನು ನಿಲ್ಲಿಸಿದರು. ಮತ್ತು ಹೊಸದಾಗಿ ಒಂದೆರಡು ಹಳ್ಳಿಗಳನ್ನು ರಾಯನಿಂದ ಪಡೆದರು.

[ವಿಲ್ಕ್ಸ್, ಸಂ. ೧; ಪುಟ ೨೪]

# ೮ ಕಾರುಗಹಳ್ಳಿ ವೀರಾಜಯ್ಯ

ಹೆಸರುವಾಸಿಯಾದ ರಾಜ ಒಡೆಯರವರು ಶ್ರೀಕಂಠೇಶ್ವರ ಸ್ವಾಮಿಯ ರಥೋತ್ಸವಕ್ಕೆ ನಂಜನಗೂಡಿನಲ್ಲಿ ಬೀಡನ್ನು ಬಿಟ್ಟಿದ್ದರು. ಆ ಸಮಯದಲ್ಲಿ ಇವರ ಜ್ಞಾತಿಯೂ ಗರ್ವಿಷ್ಠನೂ ಆಗಿದ್ದ ಕಾರುಗಹಳ್ಳಿ ಪಾಳಯಗಾರ ವೀರಾಜಯ್ಯನೆಂಬಾತನು ರಾಜರೆದುರಿಗೆ ತನ್ನ ಅಟ್ಟಹಾಸವನ್ನು ತೋರಬೇಕೆಂಬ ದುರ್ಬುದ್ಧಿಗೊಳಗಾಗಿ ಪಲ್ಲಕ್ಕಿಯಲ್ಲಿ ಕುಳಿತು ಓಲಗ ತಾಳಮೇಳಗಳೊಡನೆ ಅಹಂಕಾರದಿಂದ ಬರುತ್ತ ಎದುರಾದನು. ಅವನನ್ನು ದೂರದಲ್ಲಿ ಕಂಡಕೂಡಲೇ ಮೈಸೂರಿನ ಸೈನಿಕರು ಕೆಲವರು "ಎಲಾ, ಈ ವೀರಾಜಯ್ಯನು ನಮ್ಮ ರಾಜರ ಬಳಿ ವಿನೀತನಾಗಿ ಬಾರದೆ ಕಡುಕೊಬ್ಬಿನಿಂದ ಬರುತ್ತಿದ್ದಾನಲಾ! ಇವನಿಗೆ ಸ್ವಲ್ಪ ಬುದ್ಧಿ ಹೇಳಿಸುವಾ!" ಎಂದುಕೊಂಡು ತಾವೇ ಮುಂದೆಬಿದ್ದು ವೀರಾಜಯ್ಯನ ಪರಿವಾರದವರನ್ನು ಹೊಡೆದೋಡಿಸಿ, ಪಲ್ಲಕ್ಕಿಯನ್ನು ನಿಲ್ಲಿಸಿ ಹಿಡಿದು, ವೀರಾಜಯ್ಯನನ್ನು ಬಲವಂತದಿಂದ ನೂಕಿಬಿಟ್ಟು ಪಲ್ಲಕ್ಕಿಯನ್ನು ತೆಗೆದುಕೊಂಡು ಬಂದು ಬಿಟ್ಟರು.

ವೀರಾಜಯ್ಯನಿಗೆ ತೇಜೋವಧೆಯಾಯಿತು. ಆದರೆ ಬುದ್ಧಿ ಬರಲಿಲ್ಲ. ಏನಾದರೂ ಮಾಡಿ ತನಗಾದ ಅಪಮಾನಕ್ಕೆ ಪ್ರತೀಕಾರವನ್ನು ಮಾಡಬೇಕೆಂದು ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡು ಸಮಯವನ್ನು ಹೊಂಚಲು ಮೊದಲಿಟ್ಟನು. ನೀಚರನ್ನು ಹತ್ತಿರ ಸೇರಿಸಿಕೊಂಡು ನೀಚವಾದ ಆಲೋಚನೆಯನ್ನು ಮಾಡಿದನು. ಇವನು ಯೋಚಿಸಿದ್ದೇನು? ರಾಜರಿಗೆ ವಿಷ ಕೊಡಿಸಬೇಕೆಂದು! ಅರಮನೆಯಲ್ಲಿ ಪ್ರಯತ್ನಪಡುವುದಕ್ಕಿಂತ ರಾಜರು ತಪ್ಪದೆ ಹೋಗಿಬರು

ತ್ತಿದ್ದ ಲಕ್ಷ್ಮೀರಮಣ ಸ್ವಾಮಿಯ ದೇವಾಲಯದಲ್ಲಿ ಪ್ರಯತ್ನ ಪಡುವುದೇ ಲೇಸೆಂದು ಅಂದುಕೊಂಡು ವೀರರಾಜಯ್ಯನು ಆ ಗುಡಿಯ ಅರ್ಚಕನಾಗಿದ್ದ ಶ್ರೀನಿವಾಸಯ್ಯನೆಂಬಾತನನ್ನು ಕರೆಯಿಸಿ "ಏನಯ್ಯ! ದೊರೆಗಳಿಗೆ ನೀನು ತೀರ್ಥ ಕೊಡುವಾಗ ಇಗೋ! ನಾವು ಕೊಡುವ ದ್ರಾವಕವನ್ನು ಮಿಶ್ರಮಾಡಿ ಕೊಡಬೇಕು. ಇದಕ್ಕಾಗಿ ಇಗೋ! ಜೀವಾವಧಿ ಸುಖವಾಗಿರುವಂತೆ ಈ ಹಣವನ್ನು ನಿನಗೇ ಕೊಡುತ್ತೇನೆ!" ಎಂದು ಹೇಳಿದನು. ಶ್ರೀನಿವಾಸಯ್ಯನು ಈ ದರ್ಪವನ್ನು ಕಾಣದವನು; ಕತ್ತಿಯನ್ನು ದೂರದಿಂದ ನೋಡಿದ ಮಾತ್ರಕ್ಕೆ ನಡುಗುವಂತಹವನು. ಪ್ರತಿಯಾಗಿ ಏನೂ ಹೇಳುವುದಕ್ಕೂ ತೋಚದೆ ಈ ಬಡ ಅರ್ಚಕನು ಆ ದ್ರಾವಕವನ್ನು ತೆಗೆದುಕೊಂಡು ಬಂದನು. ವೀರರಾಜಯ್ಯನ ಕಡೆಯವರಿಬ್ಬರು ಭಟರು ಅವನ ಹಿಂದೆಯೇ ಬಂದು ಒಬ್ಬರಲ್ಲದಿದ್ದರೆ ಇನ್ನೊಬ್ಬರು ಆತನ ಬಳಿಯಲ್ಲಿಯೇ ಇರುತ್ತ ಅವನ ಮೇಲೆ ಪಹರೆಯಿದ್ದರು.

ಕಡೆಗೆ ರಾಜರು ಬರುವ ಸಮಯವು ಸನ್ನಿಹಿತವಾಯಿತು. ಶ್ರೀನಿವಾಸಯ್ಯನಿಗೆ ಅಂದು ಪೂಜೆ ಮಾಡುವುದೇ ಕಷ್ಟವಾಯಿತು. ಮಂತ್ರಗಳನ್ನು ಹೇಳಲಿಲ್ಲ—ನಾಮಮಾತ್ರ ಎನಿಸಿಬಿಟ್ಟನು. ಮಂಗಳಾರತಿಯ ವೇಳೆಗೆ ರಾಜರು ಬಂದು ಅಂಜಲಿಬದ್ಧರಾಗಿ ನಿಂತರು. ತೀರ್ಥ ಕೊಡುವ ಕಾಲ ಬಂತು. ಗುಡಿಯಲ್ಲಿ ತೀರ್ಥವನ್ನು ತುಂಬಿಕೊಂಡು ಉದ್ಧರಣೆಯನ್ನು ಕೈಲಿ ಹಿಡಿದು ಶ್ರೀನಿವಾಸಯ್ಯನು ಗರ್ಭಗುಡಿಯ ಹೊಸ್ತಿಲನ್ನು ದಾಟಿ ಹೆಜ್ಜೆ ಹಾಕುತ್ತಾನೆ. ಕೈಕಾಲೆಲ್ಲವೂ ನಡುಗುತ್ತಿದೆ; ಮುಖವೆಲ್ಲ ಒಣಗಿ ವಿವರ್ಣವಾಗಿ ತುಟಿಗಳು ಅದುರುತ್ತಲಿವೆ, ಕಣ್ಣುಗಳಲ್ಲಿ ಬೆಪ್ಪೂ ಇಲ್ಲ, ಭಯವೂ ಇಲ್ಲ, ಏನೋ ಒಂದು ಬಗೆಯ ನೋಟ; ರಾಜರ ಮುಖವನ್ನೇ ನೋಡಲಾರದವನಾಗಿದ್ದಾನೆ. ಇದನ್ನು ಕಂಡು ರಾಜಮಹಿಷಿಯರು ಸ್ವಲ್ಪ ನಗುತ್ತ "ನೀನು ಎಂದಿನಂತೆ ಇಲ್ಲ! ದೇಹಾಲಸ್ಯವೇ! ಏನು ವಿಷಯ? ಭಯಪಡದೆ ಹೇಳು. ಏನು ವಿಷಯವಾಗಿದ್ದರೂ ನಾವು ನಿನ್ನನ್ನು ಸಂರಕ್ಷಿಸು

ತ್ತಿದ್ದೇವೆ. ಧೈರ್ಯದಿಂದ ಹೇಳು " ಎಂದರು. ಆಗ ಆ ಬಡ ಹಾರವನು " ಮಹಾ ಸ್ವಾಮಿ ! ಏನು ಹೇಳಲಿ ! " ಎಂದು ಸುತ್ತ ಮುತ್ತ ನೋಡಿ " ತಮ್ಮ ಜ್ಞಾತಿ ಆ ಕಾರುಗಹಳ್ಳಿ ವೀರರಾಜಯ್ಯನು ನಿಮಗೆ ವಿರೋಧವನ್ನು ಚಿಂತಿಸಿ ನನ್ನ ಕೈಲಿ ವಿಷವನ್ನು ಕೊಟ್ಟು ತೀರ್ಥ ದಲ್ಲಿ ಕೊಡಬೇಕೆಂದು ನನ್ನನ್ನು ಬಲವಂತ ಪಡಿಸಿದ್ದಾನೆ. ಈ ತೀರ್ಥ ವನ್ನು ನಾನು ಹೇಗೆ ಕೊಡಲಿ ! " ಎಂದನು. ಆಗ ಒಡೆಯರು ಸುತ್ತಮುತ್ತಲಿದ್ದವರು ಹಾಹಾಕಾರ ಮಾಡದಂತೆ ಅವರನ್ನೇಲೆ ಕಣ್ಣುಬಿಟ್ಟು, " ಒಳ್ಳೇದು, ನೀನು ಇದನ್ನು ವಿಷವೆಂದು ತಂದಿರು ವೆಯೋ, ದೇವರ ತೀರ್ಥವೆಂದು ತಂದಿರುವೆಯೋ ! " ಎಂದು ಕೇಳಿ ದರು. " ತೀರ್ಥವೆಂದು ತಂದಿದ್ದೇನೆ " ಎನ್ನಲು ರಾಜರು " ತೀರ್ಥ ವನ್ನು ಇಲ್ಲಿ ಹಾಕು " ಎಂದು ಒಂದು ಉದ್ಧರಣೆಯನ್ನು ಒಡ್ಡಿ ಕೊಂಡು ಕುಡಿದರು.

ಒಡೆಯರಿಗೆ ಇದರಿಂದ ಏನೂ ಆಗದಾಯಿತು. ಮರುದಿವಸ ಒಡೆಯರು ವೀರರಾಜಯ್ಯನನ್ನು ಶಿಕ್ಷಿಸಬೇಕೆಂದು ನಿಶ್ಚಯಮಾಡಿ ಅವನನ್ನು ಹಿಡಿತರಿಸಿ, ಕಿವಿ ಮೂಗುಗಳನ್ನು ಕುಯ್ಯಿಸಿ, " ಇನ್ನು ನೀನು ದೇಶವನ್ನು ಬಿಟ್ಟು ಭ್ರಷ್ಟನಾಗಿ ಭಿಕಾರಿಯಾಗಿ ಹೋಗು " ಎಂದು ಓಡಿಸಿದರು. ಅವನ ಸ್ವತ್ತೆಲ್ಲವನ್ನು ತರಿಸಿ ದೇವರಿಗೆ ಸಮ ರ್ಪಿಸಿ, ಕಾರುಗಹಳ್ಳಿಯ ಕೋಟೆಯನ್ನು ಕೆಡವಿಸಿ ಹರಳು ಬಿತ್ತಿಸಿ ದರು. ಅನಂತರ ಅರ್ಚಕ ಶ್ರೀನಿವಾಸಯ್ಯನನ್ನು ಕರೆಸಿ " ವೀರಾ ಜಯ್ಯನು ನಿನಗೆ ದುರ್ಬೋಧೆ ಮಾಡಿದಾಗ ನೀನು ನಿನ್ನ ಪ್ರಾಣಕ್ಕೆ ಹೆದರಿದವನಾದೆ. ನಾವೇನೋ ನಿನಗೆ ಅಭಯವನ್ನು ಕೊಟ್ಟಿದ್ದೇವೆ ಆದ್ದರಿಂದ ನಿನಗೆ ಶಿಕ್ಷೆಯೇನೂ ಇಲ್ಲ. ಆದರೆ ಇನ್ನು ನೀನು ನಮ್ಮ ಬಳಿ ಇರುವುದು ಸರಿಯಲ್ಲ. ಇನ್ನುಮೇಲೆ ನೀನು ಕನ್ನಂಬಾಡಿ ಗೋಪಾಲಕೃಷ್ಣಸ್ವಾಮಿ ದೇವಾಲಯದ ಅರ್ಚಕತನ ಮಾಡತಕ್ಕದ್ದು. ಹೋಗು " ಎಂದು ಅಪ್ಪಣೆಮಾಡಿ ನೈವಸೂರಿನ ಲಕ್ಷ್ಮೀರಮಣ

ಸ್ವಾಮಿಯ ದೇವಸ್ಥಾನಕ್ಕೆ ಮತ್ತೊಬ್ಬ ಅರ್ಚಕನನ್ನು ಗೊತ್ತು ಮಾಡಿದರು.

[[illegible]-ಪುಟ ೨೩,೨೪ ; ಗ್ರಂಥಾವಳಿ ಸಂ. ೧, ಪುಟ ೨೯, ೩೦]

# ೯ ಹುಚ್ಚನ ಕರಿಯ

ಕಳಲೆಯೆಂಬ ಗ್ರಾಮದಲ್ಲಿ ಒಡೆಯರ ಜ್ಞಾತಿಗಳಿರುತ್ತಿದ್ದರು. ರಾಜ ಒಡೆಯರ ಕಾಲದಲ್ಲಿ ಆ ಗ್ರಾಮವನ್ನು ಲಕ್ಷ್ಮೀಕಾಂತಯ್ಯನೆಂಬಾತನು ಅನುಭವಿಸುತ್ತ ಭಿನ್ನೋದರರಾದ ತನ್ನ ಸಹೋದರರನ್ನು ಪೋಷಿಸುತ್ತಿದ್ದನು. ಆ ಸಹೋದರರಲ್ಲಿ ನಂದನಾಥಯ್ಯ, ಕಾಂತಯ್ಯ, ಚಂದ್ರಶೇಖರಯ್ಯರೆಂಬ ಮೂವರು—ಲಕ್ಷ್ಮೀಕಾಂತಯ್ಯನ ಬಲತಾಯಿ ಚನ್ನಾಜಮ್ಮಯ್ಯನ ಮಕ್ಕಳು—ಆ ಗ್ರಾಮವನ್ನು ತಾವೇ ಅನುಭವಿಸಬೇಕೆಂದು ದುರಾಲೋಚನೆಮಾಡಿ ಲಕ್ಷ್ಮೀಕಾಂತಯ್ಯನನ್ನು ಮೋಸದಿಂದ ಕೊಂದುಬಿಟ್ಟರು. ತರುವಾಯ ಮಲ್ಲರಾಜಯ್ಯನೆಂಬ ೫ ವರ್ಷದ ಹುಡುಗನನ್ನು ಕೊಲ್ಲಲು ಸಿದ್ಧರಾದರು; ಆ ಹುಡುಗನು ರಾಜ ಒಡೆಯರ ಅಕ್ಕಂದಿರು ದೇವಾಜಮ್ಮಣ್ಣಿಯ ಮಗನೂ–ಲಕ್ಷ್ಮೀಕಾಂತಯ್ಯನ ಸಹೋದರನೂ ಆಗಿದ್ದನು. ಈ ಹುಡುಗನ ಕೊಲೆಗೆ ಈ ಮೂವರು ಸಿದ್ಧರಾಗಿದ್ದು ಅವನನ್ನು ಹುಡುಕುತ್ತಲಿದ್ದರು.

ಆ ಕಾಲದಲ್ಲಿ ಆ ಹುಡುಗನು ಕುರುಬಗೇರಿಗೆ ಓಡಿದನು. ಅಲ್ಲಿ ಕುರುಬರ 'ಹುಚ್ಚನ ಕರಿಯ' ಎಂಬವನು ಆ ಬಾಲಕನನ್ನು ಗೋಪ್ಯವಾಗಿ ಸಂರಕ್ಷಿಸಿ, ರಾಜರ ಸೋದರಳಿಯನೆಂದು ತಿಳಿದು, ರಾತ್ರಿವೇಳೆಯಲ್ಲಿ ಹೊರಟು ಆ ಬಾಲಕನನ್ನು ತಂದು ರಾಜರಿಗೊಪ್ಪಿಸಿದನು. ರಾಜರು ಮಲ್ಲರಾಜಯ್ಯನ ವೃತ್ತಾಂತವನ್ನು ತಿಳಿದು ವ್ಯಸನಪಟ್ಟು ಆ ಮೂವರನ್ನು ಶಿಕ್ಷಿಸಲು ಸಂಕಲ್ಪಮಾಡಿಕೊಂಡರು.

ಅತ್ತಲಾಗಿ ಲಕ್ಷ್ಮೀಕಾಂತಯ್ಯನು ದುರ್ಮರಣಕ್ಕೆ ಸಿಕ್ಕಮೇಲೆ ಆತನ ಹೆಂಡತಿ ಲಿಂಗಾಜಮ್ಮಯ್ಯನೆಂಬುವಳು ಸಹಗಮನಕ್ಕೆ

ಸಿದ್ಧಳಾದಳು. ಅಗ್ನಿಕುಂಡದಲ್ಲಿ ಧುಮುಕುವ ಮುನ್ನ ಆಕೆಯು "ನನ್ನ ಗಂಡನನ್ನು ಅನ್ಯಾಯದಿಂದ ವಧಿಸಿದ ಬಲ ಅತ್ತೇ ಮಕ್ಕಳ ಮುಂದಿನವರ ವಂಶವೂ ನಷ್ಟವಾಗಲಿ; ಕಳಲೇ ಅರಸುಗಳು ಕೂತ್ತಾಪುರ ಒತ್ತದ ಅಕ್ಕಿಯನ್ನೇ ವಿಶ್ವಾಸದಿಂದ ಊಟಮಾಡುವುದರಿಂದ ಆ ಅನ್ನವು ರಕ್ತದ ಕೋಳಿನಂತೆ ಆಗಲಿ; ನನ್ನ ಬಾಳು ತಪ್ಪಿಸಿದ ನನ್ನ ಗಂಡನ ವಂಶದ ಹೆಣ್ಣುಮಕ್ಕಳು ಚನ್ನಾಗಿ ಬಾಳದೆ ಇರಲಿ; ಮತ್ತು ಧರ್ಮಾತ್ಮರಾದ ಮಹೀಶೂರ ಮನೆತನದಲ್ಲಿ ಹುಟ್ಟಿದ ನಮ್ಮ ಬಲ ಅತ್ತೆಯಾದ ದೇವರಾಜಮ್ಮಣ್ಣಿಯವರಿಗೆ ಪುತ್ರನ ವಂಶವು ನಡೆಯಲಿ" ಎಂದು ನುಡಿದಳು.

ಮಯಸ್ಸು ಬಂದಮೇಲೆ ಮಲ್ಲರಾಜಯ್ಯನನ್ನು ರಾಜರು ದಳವಾಯಿತನಕ್ಕೆ ಗೊತ್ತುಮಾಡಿದರು. ಆದರೆ ಮಲ್ಲರಾಜಯ್ಯನು ಆ ಪದವಿಗೆ ಅಯೋಗ್ಯನಾಗಿದ್ದನು. ಕೆಲವು ದಿನಗಳಲ್ಲಿಯೇ ತನ್ನ ಮೊಮ್ಮಗನ ಮೂಲಕ ದಳವಾಯಿತನದ ಉಂಗುರವನ್ನು ರಾಜರಿಗೆ ಕಳುಹಿಸಿಬಿಟ್ಟು ತಾನು ಸೋಮಾರಿಯಾಗಿಯೇ ಇದ್ದನು.

[ವಂಶರತ್ನಾಕರ ಪುಟ ೪೬-೪೭; ವಂಶಾವಳಿ ಸಂ. ೧, ಪುಟ ೮೬, ೪೭ ಹೊಸ ಗೆಜೆಟಿಯರ್ ಸಂಪುಟ ೫, ಪುಟ ೬೮೭]

# ೧೦ ಕೆಂಬಲ್ಲಿನ ಗೆಲುವು

ರಾಜ ಒಡೆಯರವರು ಶ್ರೀರಂಗಪಟ್ಟಣದಲ್ಲಿದ್ದ ತಿರುಮಲ ರಾಯನ ಆಸ್ಥಾನಕ್ಕೆ ಹೋಗುತ್ತಲಿರಬೇಕಾಗಿತ್ತು. ಏಕೆಂದರೆ ಆಗಿನಕಾಲದ ಪಾಳಯಗಾರರೂ ಒಡೆಯರೂ ವಿಜಯನಗರದ ಅರಸರಿಗೆ ಅಧೀನರಾಗಿದ್ದು ಶ್ರೀರಂಗಪಟ್ಟಣದಲ್ಲಿದ್ದ ಅವರ ಪ್ರತಿನಿಧಿಯ ವಶವರ್ತಿಗಳಾಗಿದ್ದರು. ಶ್ರೀರಂಗಪಟ್ಟಣಕ್ಕೆ ಹೋಗುವ ಮಾರ್ಗದಲ್ಲಿ ಒಡೆಯರೂ ಪಾಳಯಗಾರರೂ ಪರಸ್ಪರ ಸೇರಿ ಜಗಳವಾಡುವುದು ಸಾಮಾನ್ಯವಾಗಿತ್ತು.

ಶ್ರೀರಂಗಪಟ್ಟಣಕ್ಕೆ ರಾಜ ಒಡೆಯರು ತಮ್ಮ ಮೈಗಾವಲಿನ ಭಟರೊಡನೆಯೂ ವಾಲಗ ಮೇಳದೊಡನೆಯೂ ಹೊರಟರು. ದಾರಿಯಲ್ಲಿ ಕೆಂಬಲ್ಲೆಂಬ ಗ್ರಾಮದ ಒಡೆಯನೂ ಅದೇ ರೀತಿಯಲ್ಲಿ ಮೇಳತಾಳಗಳೊಡನೆ ಹೋಗುತ್ತಿದ್ದನು. ರಾಜ ಒಡೆಯರಿಗೆ ಇದು ಅವಮಾನವಾಗಿ ತೋರಿತು. "ಮೇಳತಾಳಗಳೊಡನೆ ನಮ್ಮೆದುರಿಗೆ ಯಾರು ಹೋಗುತ್ತಿರುವವರು" ಎಂದು ಕೇಳಲು "ಕೆಂಬಲ್ಲಿನ ಒಡೆಯರು" ಎಂಬ ಉತ್ತರ ಬಂತು. ಕೂಡಲೆ ರಾಜ ಒಡೆಯರು ತಮ್ಮ ವಾದ್ಯಗಳನ್ನು ನಿಲ್ಲಿಸುವಂತೆ ಆಜ್ಞೆ ಮಾಡಿದರು. ಸದ್ದಿಲ್ಲದೆ ಶ್ರೀರಂಗಪಟ್ಟಣವನ್ನು ಸೇರಿ ತಿರುಮಲರಾಯರ ಆಸ್ಥಾನವನ್ನು ಹೊಕ್ಕರು. ಇದನ್ನು ಕಂಡು ತಿರುಮಲರಾಯರು "ಇದೇನು ರಾಜ ಒಡೆಯರೇ ತಮ್ಮ ಪದವಿಗೆ ತಕ್ಕಂತೆ ಮೇಳತಾಳಗಳೊಡನೆ ಪ್ರವೇಶಮಾಡದೆ ಮೌನದಿಂದ ಬಂದಿರಿ?" ಎಂದು ಕೇಳಲು ರಾಜ ಒಡೆಯರು ಕ್ರೋಧದಿಂದ "ಮೇಳತಾಳಗಳನ್ನು ನಮಗಿಂತಲೂ ಕೀಳಾದವರೂ ಇಟ್ಟುಕೊಳ್ಳುವಾಗ ಅದರಿಂದ ನಮ್ಮ ಪದವಿಗೇನು

ಗೌರವ?'' ಎಂದು ನುಡಿದರು. ಇದನ್ನು ಕೇಳಿದ ಕೆಂಬಲ್ಲಿನ ಒಡೆಯನು ಕೋಪದಿಂದ ಕಣ್ಣು ಕೆರಳಿಸಿದನು. ಅದನ್ನು ಕಂಡು ರಾಜ ಒಡೆಯರು ''ಏಕೆ? ಒಡೆಯರೇ? ನಿಮಗಿಷ್ಟವಾದರೆ ಈಗಲೇ ಯಾರು ಶ್ರೇಷ್ಠರೆಂದು ಕಾಣುವ! ತಾಳಮೇಳಗಳು ಯಾರಿಗೆ ಸಲ್ಲತಕ್ಕದ್ದೆಂದು ನಿರ್ಣಯವಾಗಲಿ'' ಎಂದರು. ತಿರುಮಲರಾಯರು ''ನೀವಿಬ್ಬರೂ ಹೀಗೆ ಕಲಹವಾಡಬಾರದು'' ಎನ್ನಲು ಅವರೆದುರಿಗೇನೂ ಮಾಡಲಾರದೆ ಇಬ್ಬರೂ ರೋಷವನ್ನು ನುಂಗಿಕೊಂಡು ಸುಮ್ಮನಿದ್ದರು. ಮಾರನೆ ದಿವಸ ಬಂದಕೂಡಲೆ ರಾಜ ಒಡೆಯರು ಕೆಂಬಲ್ಲಿನ ಮೇಲೆ ಪಡೆಸಹಿತ ಹೊರಟು ಆ ಒಡೆಯರನ್ನು ಸೋಲಿಸಿ ಕೆಂಬಲ್ಲನ್ನು ವಶಪಡಿಸಿಕೊಂಡರು.

[ವಿಲ್ಕ್ಸ್, ಸಂ. ೧. ಪುಟ ೨೪]

# ೧೧ ರಾಜ ಒಡೆಯರ ಕೊಲೆಯ ಪಿತೂರಿ

ರಾಜ ಒಡೆಯರ ಬಲವು ದಿನೇ ದಿನೇ ಹೆಚ್ಚುತ್ತಿದ್ದುದನ್ನು ಕಂಡು ಶ್ರೀರಂಗಪಟ್ಟಣದ ಅಧಿಕಾರಿಗಳು ಹೇಗಾದರೂ ರಾಜ ಒಡೆಯರನ್ನು ಕೊನೆಗಾಣಿಸಬೇಕೆಂದು ಯೋಚಿಸಿದರು. ಗೋಪ್ಯವಾಗಿ ಪ್ರಯತ್ನ ಮಾಡುವುದೇ ಲೇಸೆಂದು ಅವರು ಆಲೋಚಿಸಿ ಮೈಸೂರಿನ ಅರಮನೆಯಲ್ಲಿ ಒಡೆಯರಿರುವಾಗಲೇ ಅವರನ್ನು ವಧೆ ಮಾಡಿಸುವ ತಂತ್ರವನ್ನು ಹೆಣೆದರು.

ಶ್ರೀರಂಗಪಟ್ಟಣದಿಂದ ರಾಜ ಒಡೆಯರ ಆಸ್ಥಾನಕ್ಕೆ ರಾಜಕಾರ್ಯನಿಮಿತ್ತವಾಗಿ ಒಬ್ಬ ಅಧಿಕಾರಿಯು ಕೆಲವು ಸೈನಿಕರೊಡನೆ ಹೊರಡಬೇಕಾಗಿತ್ತು. ಇದೇ ಸಮಯವೆಂದು ಆ ಅಧಿಕಾರಿಯು ಏಕಾಂತವಾಗಿ ರಾಜ ಒಡೆಯರೊಡನೆ ಮಾತನಾಡುವ ಹಾಗೂ, ಆ ಅಧಿಕಾರಿಯು ಅದೇ ವೇಳೆಯಲ್ಲಿ ಒಡೆಯರನ್ನು ಸಂಹರಿಸುವ ಹಾಗೂ ಕೂಡಲೆ ಅಧಿಕಾರಿಯ ಜೊತೆಯಲ್ಲಿದ್ದ ಸೈನಿಕರು ಆತನನ್ನು ರಕ್ಷಿಸುವ ಹಾಗೂ ಏರ್ಪಡಿಸಿದರು. ಅಧಿಕಾರಿಯು ಮೈಸೂರಿಗೆ ಬಂದು "ಒಡೆಯರೊಡನೆ ಏಕಾಂತವಾಗಿ ಆಲೋಚನೆ ಮಾಡುವ ಸಂದರ್ಭ ಇದೆ. ಆದ್ದರಿಂದ ನಾನು ಬಂದಿದ್ದೇನೆ" ಎಂದು ಹೇಳಲು ರಾಜ ಒಡೆಯರು ಏನೂ ಅನುಮಾನಪಡದೆ ತಮ್ಮ ಪರಿವಾರದವರನ್ನು ದೂರ ಹೋಗಿರೆಂದು ಅಪ್ಪಣೆ ಮಾಡಿದರು. ಆದರೆ ಎಲ್ಲರೂ ದೂರ ಹೋಗಲಿಲ್ಲ. ಒಬ್ಬ ಸೇವಕನು ಅನುಮಾನಪಟ್ಟು ಒಂದು ಕಂಬದ ಹಿಂದೆ ಅವಿತುಕೊಂಡು ನೋಡುತ್ತಿದ್ದನು. ಹಾಗೆಯೇ ನೋಡುತ್ತಿರಲಾಗಿ ಅಧಿಕಾರಿಯು ಮಾತನಾಡುತ್ತ ಹತ್ತಿರ ಬರುತ್ತ ತನ್ನ ಕೈಯನ್ನು ಸೊಂಟದಲ್ಲಿದ್ದ ಕಠಾರಿಯ ಮೇಲಿಟ್ಟುದನ್ನು ಕಂ

ಡನು. ಕೂಡಲೇ ಸೇವಕನು ಚಂಗನೆ ಹಾರಿ ಅಧಿಕಾರಿಯನ್ನು ಹಿಡಿದು ನೆಲಕ್ಕೆ ಕೆಡಹಿ ತನ್ನ ಕಠಾರಿಯಿಂದ ಇರಿದನು. ಅಧಿಕಾರಿಯು ಮಾತಿಲ್ಲದೆ ಪ್ರಾಣಬಿಟ್ಟನು. ಬೆಂಗಾವಲಿಗೆ ಬಂದಿದ್ದ ಸೈನಿಕರು ಚದರಿ ಓಡಿಹೋದರು. ರಾಜ ಒಡೆಯರ ಪ್ರಾಣವು ಈ ಸೇವಕನ ಜಾಗರೂಕತೆಯಿಂದ ಉಳಿಯಿತು.

[ವಿಲ್ಕ್ಸ್ ಸಂ. ೧, ಪುಟ ೨೫]

# ೧೨ ರಾಜ ಒಡೆಯರ ಸೋದರಪ್ರೇಮ

ಒಡೆತನವನ್ನು ಕಳೆದುಕೊಂಡರೂ ಕೆಂಬಲ್ಲಿನ ಪಾಳೆಯಗಾರನಿಂದ ಮೈಸೂರನ್ನು ರಕ್ಷಿಸಿ ಕೆಸರೆಯನ್ನು ಸಾಧಿಸಿ ಅನೇಕ ಜಯಗಳನ್ನು ಪಡೆದಿದ್ದ ಬೆಟ್ಟದ ಒಡೆಯರಿಗೂ ರಾಜ ಒಡೆಯರಿಗೂ ಮನಸ್ತಾಪ ತೋರಿತು. ಸ್ವಾರ್ಥಪ್ರಿಯರಾಗಿದ್ದ ಸೇವಕರು ಕೆಲವರು ಈ ಮನಸ್ತಾಪವನ್ನು ಹೆಚ್ಚಿಸಿದರು. ಕಡೆಗೆ ಬೆಟ್ಟದ ಒಡೆಯರು ಮೈಸೂರನ್ನು ಬಿಟ್ಟು ಶ್ರೀರಂಗಪಟ್ಟಣಕ್ಕೆ ಹೋಗಿ ಅಲ್ಲಿ ರಾಯನ ಆಶ್ರಯವನ್ನು ಹೊಕ್ಕರು. ಅವರ ಚಾಣಕ್ಮೆಯಿಂದ ರಾಯನ ಸೈನ್ಯವು ದುರ್ಬಲವಾಗಿದ್ದುದು ಪ್ರಬಲವಾಯಿತು. ರಾಯನ ಅಧಿಕಾರವು ಭದ್ರವಾಯಿತು. ರಾಯನ ಸಹಾಯದಿಂದ ಮೈಸೂರನ್ನು ತಾವೇ ಪುನಃ ಪಡೆಯಬಹುದೆಂದು ಕೆಲವರು ಬೆಟ್ಟದ ಒಡೆಯರಿಗೆ ಸೂಚಿಸಿದರು. ಇತ್ತ ಕೆಲವರು ರಾಜ ಒಡೆಯರಿಗೆ "ಬೆಟ್ಟದ ಒಡೆಯರು ಶ್ರೀರಂಗಪಟ್ಟಣದಲ್ಲಿ ಸೇರಿಕೊಂಡು ತಮ್ಮ ಅಧಿಕಾರವನ್ನು ತಪ್ಪಿಸಲು ಸನ್ನಾಹಪಡುತ್ತಿದ್ದಾರೆ" ಎಂದು ಹೇಳುತ್ತಿದ್ದರು.

ಆಗ ರಾಜ ಒಡೆಯರವರೇ ಬೆಟ್ಟದ ಒಡೆಯರವರನ್ನು ಹಿಡಿಸಲು ಉಪಾಯ ಮಾಡಿದರು. ಬೆಟ್ಟದ ಒಡೆಯರು ಗರಡಿ ಸಾಧನೆಯನ್ನು ಚೆನ್ನಾಗಿ ಮಾಡಿ ಬಹಳ ಬಲಶಾಲಿಗಳಾಗಿದ್ದರು. ಆದ್ದರಿಂದ ಅವರನ್ನು ಉಪಾಯದಿಂದಲೇ ಹಿಡಿಯಬೇಕಾಗಿದ್ದಿತು. ಬೆಟ್ಟದ ಒಡೆಯರು ಯಾರನ್ನೋ ನಿಗ್ರಹಿಸಿ "ನನ್ನನ್ನು ಹಿಡಿಯುವವನು ಯಾರು?" ಎಂಬ ಅಭಿಮಾನದಿಂದ ಒಬ್ಬರೇ ಹಿಂತಿರುಗುತ್ತಿದ್ದ ವೇಳೆಯನ್ನು ಹೊಂಚಿಕೊಂಡು ಕೆಲವರು ದಾರಿಯಲ್ಲಿ ಅವಿತುಕೊಂಡರು. ಸಮಯವನ್ನು ಹಿಡಿದು ಬೆಟ್ಟದ ಒಡೆಯರಮೇಲೆ ಬಿದ್ದು ಅವರನ್ನು ಬಂಧಿಸಿ ರಾಜ ಒಡೆಯರ ಎದುರಿಗೆ ಕರೆದೊಯ್ದರು.

ರಾಜ ಒಡೆಯರಿಗೆ ಸೋದರ ಹತ್ಯವನ್ನು ಮಾಡುವ ಯೋಚನೆಯಿರಲಿಲ್ಲ. ಇತರರ ಪಕ್ಷವನ್ನು ಬೆಟ್ಟದ ಒಡೆಯರು ಸೇರದ ಹಾಗೆ ಮಾಡಬೇಕೆಂದಿದ್ದರು. ಮೈಸೂರಿನ ಪಕ್ಷದಲ್ಲಿಯೇ ಸೇರಿದ್ದರೆ ಬೆಟ್ಟದ ಒಡೆಯರಿಂದ ಎಷ್ಟು ಸಹಾಯವಾದೀತೆಂದು ಯೋಚಿಸುತ್ತಿದ್ದರು. ಆದ್ದರಿಂದ ಬೆಟ್ಟದ ಒಡೆಯರು ಬಂದ ಕೂಡಲೇ ಅವರ ವಿಶ್ವಾಸವನ್ನು ಸಂಪಾದಿಸುವ ಯೋಚನೆಯಲ್ಲಿದ್ದರು. ಬೆಟ್ಟದ ಒಡೆಯರಿಗೆ ತನ್ನನ್ನು ಮೋಸದಿಂದ ಹಿಡಿದೊಯ್ದರೆಂದು ಮನಸ್ಸಿನಲ್ಲಿ ಕೋಪವುಕ್ಕಿತ್ತು. ಆ ಸ್ಥಾನವನ್ನು ಬೆಟ್ಟದ ಒಡೆಯರು ಪ್ರವೇಶಿದ ಕೂಡಲೆ ರಾಜ ಒಡೆಯರು ಗದ್ದುಗೆಯಿಂದ ಇಳಿದು ಕೈಗಳನ್ನು ತೆರೆದುಕೊಂಡು ಬಂದರು. ರಾಜ ಒಡೆಯರು ಸೋದರನನ್ನು ಅಪ್ಪಿಕೊಳ್ಳಬೇಕೆಂದು ಹಾಗೆ ಇಳಿದು ಬಂದರು; ಬೆಟ್ಟದ ಒಡೆಯರಿಗೆ ತನ್ನನ್ನು ಕೊಲೆಮಾಡುವುದಕ್ಕೆ ಹೀಗೆ ರಾಜ ಒಡೆಯರು ಬರುತ್ತಿದ್ದಾರೆಂದು ತೋಚಿತು. ಆದ್ದರಿಂದ ಸಮೀಪಕ್ಕೆ ಬಂದಕೂಡಲೆ ಬೆಟ್ಟದ ಒಡೆಯರು ತನ್ನನ್ನು ಹಿಡಿದುಕೊಂಡಿದ್ದ ಭಟರನ್ನು ಕ್ಷಣಮಾತ್ರದಲ್ಲಿ ತಳ್ಳಿ ರಾಜ ಒಡೆಯರ ಮೇಲೆ ಹಾರಿ ಕೆಳಕ್ಕೆ ಕೆಡವಿಬಿಟ್ಟರು. ಆಸ್ಥಾನಿಕರೂ ಪರಿವಾರದವರೂ ಹಾಹಾ ಎಂದು ಎಲ್ಲರೂ ಸೇರಿ ಬೆಟ್ಟದ ಒಡೆಯರನ್ನು ಹಿಡಿದು ಬಂಧಿಸಿದರು. ರಾಜ ಒಡೆಯರು ಎದ್ದು ಸುತ್ತಮುತ್ತಲವರನ್ನು ಕುರಿತು "ಬೆಟ್ಟದ ಒಡೆಯರನ್ನು ಕೂಡಲೆ ಕರೆದುಕೊಂಡು ಹೋಗಿ ಅವರ ಮನೆಯನ್ನು ಸೇರಿಸಿ" ಎಂದು ಬೆಟ್ಟದ ಒಡೆಯರನ್ನು ಕುರಿತು "ತಾವು ತಮ್ಮ ಮನೆಯಿಂದ ಹೊರಗೆಬಂದರೆ ತಮಗೆ ಅಪಾಯವಿರುತ್ತದೆ. ಜೋಕೆ!" ಎಂದರು. ಭಟರು ಬೆಟ್ಟದ ಒಡೆಯರನ್ನು ಅವರ ಮನೆಯಲ್ಲಿ ಬಿಟ್ಟು ಸುತ್ತಲೂ ಕಾವಲಿರುತ್ತಿದ್ದರು

ಹೀಗಿದ್ದಾಗ ಕುಮಾರ ನರಸರಾಜನೆಂಬೊಬ್ಬ ಒಡೆಯರ ನೆಂಟನು ಸ್ವಂತ ಹಗೆತನದಿಂದಲೋ ಒಡೆಯರ ಮೆಚ್ಚುಗೆಯನ್ನು ಪಡೆಯುವ ಆಲೋಚನೆಯಿಂದಲೋ ಕಟುಕರವನೊಬ್ಬನನ್ನು ಕರೆಸಿ

ನಿರ್ಬಂಧದಲ್ಲಿದ್ದ ಬೆಟ್ಟದ ಒಡೆಯರ ಕಣ್ಣುಗಳನ್ನು ಕೀಳುವ ಹಾಗೆ ಅಪ್ಪಣೆಕೊಟ್ಟನು. ಈ ಸಮಾಚಾರವು ರಾಜಒಡೆಯರು ಹೊರಗೆ ಹೊರಡಲನುವಾಗಿ ಕುದುರೆಯನ್ನೇರುವ ವೇಳೆಗೆ ತಿಳಿಯಬಂತು. ಕೂಡಲೆ ರಾಜಒಡೆಯರು ಕುದುರೆಯನ್ನು ಬಿಟ್ಟು "ಕುಮಾರ ನರಸರಾಜನನ್ನು ಅವನ ತಮ್ಮಂದಿರೊಡನೆ ಆಸ್ಥಾನಕ್ಕೆ ಕರೆದುಕೊಂಡು ಬನ್ನಿ" ಎಂದು ಅಪ್ಪಣೆಮಾಡಿ ಅರಮನೆಯೊಳಕ್ಕೆ ಹೋದರು. ನರಸರಾಜನು ಬರುತ್ತಲೇ "ಏನಯ್ಯಾ, ನರಸರಾಜ! ನೀನು ಈಗಲೇ ನಿನ್ನ ತಮ್ಮನ ಕಣ್ಣನ್ನು ನಿನ್ನ ಕಠಾರಿಯಿಂದ ಇರಿಯಬೇಕೆಂದು ನಮ್ಮಾಜ್ಞೆ. ಕಠಾರಿಯಿರುವುದೋ?" ಎಂದು ರಾಜಒಡೆಯರು ಕೋಪದಿಂದ ಕೇಳಿದರು. ನರಸರಾಜನು ದಿಕ್ಕೆಟ್ಟು "ಮಹಾಸ್ವಾಮಿ! ನನ್ನ ತಮ್ಮನೇನು ಅಪರಾಧಮಾಡಿದನು?" ಎಂದು ಕೇಳಲು ರಾಜಒಡೆಯರು "ನೀಚನೇ! ನನ್ನ ಸೋದರ ಬೆಟ್ಟದ ಒಡೆಯರೇನಪರಾಧಮಾಡಿದರು?" ಎಂದು ಗರ್ಜಿಸಿದರು. ನರಸರಾಜನು ನಡುಗುತ್ತಾ ನಿಂತನು. ಆಗ ರಾಜಒಡೆಯರು ಭಟರನ್ನು ಕುರಿತು "ಕರೆದುಕೊಂಡು ಹೋಗಿ ಈ ಹೇಡಿಯನ್ನು" ಎನ್ನಲು ಭಟರು ಹಾಗೆಯೇ ಮಾಡಿದರು. ಮತ್ತೆ ಕೆಲವು ಭಟರನ್ನು ಕಳುಹಿಸಿ ರಾಜಒಡೆಯರು ಬೆಟ್ಟದ ಒಡೆಯರನ್ನು ಕರೆಸಿದರು. ಅವರು ಬಂದಕೂಡಲೆ ರಾಜಒಡೆಯರು ಅವರನ್ನು ಅಪ್ಪಿಕೊಂಡು ಕುಳ್ಳಿರಿಸಿ "ತಮ್ಮನ್ನು ಬಂಧಿಸುವುದಕ್ಕಾಗಲಿ ಹಿಂಸೆಪಡಿಸುವುದಕ್ಕಾಗಲಿ ನನಗಿಷ್ಟವಿಲ್ಲ. ಇನ್ನು ತಾವು ಎಲ್ಲಿ ತಮಗೆ ಇಷ್ಟವೋ ಅಲ್ಲಿ ಇರಬೇಕು. ಮೈಸೂರಿನಲ್ಲಿ ತುಂಟರು ಹೆಚ್ಚುತ್ತಿದ್ದಾರೆ. ತಾವು ಇಲ್ಲಿರುವುದಕ್ಕಿಂತ ಬೇರೆ ಸ್ಥಳದಲ್ಲಿರುವುದು ಒಳ್ಳೆಯದು. ತಮ್ಮ ಪ್ರಯಾಣದ ಅನುಕೂಲಕ್ಕೆ ಈ ಹಣದ ಚೀಲವನ್ನು ತೆಗೆದುಕೊಳ್ಳಿ" ಎಂದು ಆದರದಿಂದ ಮಾತನಾಡಿದರು. ಬೆಟ್ಟದ ಒಡೆಯರು ಮೈಸೂರನ್ನು ಬಿಟ್ಟು ರಂಗಸಮುದ್ರವೆಂಬ ಹಳ್ಳಿಯಲ್ಲಿ ನೆಲೆಸಿ ರಾಜಒಡೆಯರಲ್ಲಿ ವಿಶ್ವಾಸದಿಂದ ಉಳಿದ ಜೀವಮಾನವನ್ನು ಕಳೆದರು.

[ವಿಲ್ಕ್ಸ್ ಸಂ. ೧ ಪುಟ ೨೫]

## ೧೩. ಶ್ರೀರಂಗಪಟ್ಟಣದ ಅಲಮೇಲಮ್ಮ

ವಿಜಯನಗರದ ಅರಸರ ಪ್ರತಿನಿಧಿಯಾಗಿ ತಿರುಮಲರಾಯನು ಶ್ರೀರಂಗಪಟ್ಟಣದಲ್ಲಿದ್ದುಕೊಂಡು ರಾಜಒಡೆಯರು ಮುಂತಾದ ಒಡೆಯರಿಂದಲೂ ಪಾಳೆಯಗಾರರಿಂದಲೂ ಪೊಗದಿಯನ್ನು ತೆಗೆದುಕೊಳ್ಳುತ್ತಿದ್ದನಷ್ಟೆ. ತಿರುಮಲರಾಯನೂ ಆತನ ಹೆಂಡತಿಯಾದ ಅಲಮೇಲಮ್ಮನೂ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯಲ್ಲಿ ಬಹಳ ಭಕ್ತಿಯುಳ್ಳವರಾಗಿದ್ದರು. ದೇವರ ಉತ್ಸವಕಾಲಗಳಲ್ಲಿ ಅಲಮೇಲಮ್ಮನು ತಪ್ಪದೆ ದೇವರಸೇವೆ ಮಾಡುತ್ತಿದ್ದುದಲ್ಲದೆ ದೇವರ ಅಲಂಕಾರಕ್ಕಾಗಿ ತನ್ನ ಸ್ವಂತ ಆಭರಣಗಳನ್ನು ಕೊಡುತ್ತಿದ್ದಳು.

ರಾಜಒಡೆಯರು ದಿನೇ ದಿನೇ ಬಲಿಷ್ಠರಾಗುತ್ತಾ ಸುತ್ತಮುತ್ತಣ ಒಡೆಯರೊಡನೆ ಸ್ಪರ್ಧಿಸಿ ಜಯಶಾಲಿಗಳಾಗುತ್ತಿದ್ದರು. ಅಂತಹ ಕಾಲದಲ್ಲಿಯೇ ತಿರುಮಲರಾಯನಿಗೆ ಬೆನ್ನುಫಣೆಯು ಪ್ರಾಪ್ತಿಯಾಯಿತು. ಅಲ್ಲದೆ ಚಂದ್ರಗಿರಿಯಲ್ಲಿದ್ದ ವಿಜಯನಗರದ ಅರಸನು ತಿರುಮಲರಾಯನು ಅಯೋಗ್ಯನೆಂದು ತಿರಸ್ಕಾರಮಾಡಿದ್ದನು. ಹೀಗೆ ತಿರುಮಲರಾಯನು ದುರವಸ್ಥೆಗೆ ಸಿಕ್ಕಿದನು. ಆಗ ತಲಕಾಡಿಗೆ ಹೋಗಿ ಅಲ್ಲಿ ದೇವರ ಸೇವೆಮಾಡಿದರೆ ಬೆನ್ನುಫಣವು ವಾಸಿಯಾದೀತೆಂದು ಯಾರೋ ಸೂಚಿಸಿದರು. ತಿರುಮಲರಾಯನು ಶ್ರೀರಂಗಪಟ್ಟಣದ ರಕ್ಷಣೆಯನ್ನು ಸಮರ್ಥರಾಗಿದ್ದ ರಾಜಒಡೆಯರಿಗೊಪ್ಪಿಸಿ ತಲಕಾಡಿಗೆ ಹೊರಟನು. ಅಲಮೇಲಮ್ಮನೂ ಗಂಡನ ಜತೆಯಲ್ಲಿ ಹೊರಟಳು.

ತಿರುಮಲರಾಯನಿಗೆ ವಾಸಿಯಾಗುವ ಸಂಭವದೋರಲಿಲ್ಲ. ಆ ಸಮಯದಲ್ಲಿ ಶ್ರೀರಂಗಪಟ್ಟಣವನ್ನು ತಮ್ಮ ಸ್ವಾಧೀನದಲ್ಲಿಯೇ

ಇಟ್ಟುಕೊಂಡು ತಾವೇ ಅರಸುತನವನ್ನು ವಹಿಸುವುದೊಳ್ಳೆಯದೆಂದು ರಾಜ ಒಡೆಯರಿಗೆ ತೋರಿತು. ಆದಕಾರಣ ತಿರುಮಲರಾಯನು ಹೊರಟುಹೋದ ಕೂಡಲೆ ರಾಜಒಡೆಯರು ಶ್ರೀರಂಗಪಟ್ಟಣದಲ್ಲಿ ಸಿಂಹಾಸನವನ್ನೇರಿ ನವರಾತ್ರಿಯ ಮಹೋತ್ಸವದ ಕಟ್ಟಳೆಯನ್ನು ಮಾಡಿ ನೆರೆಹೊರೆಯ ನಾಯಕರೂ ಒಡೆಯರೂ ತಮ್ಮ ವಶವರ್ತಿಗಳಾಗುವಂತೆ ಸನ್ನಾಹಪಟ್ಟರು.

ಸಿಂಹಾಸನವನ್ನೇರಿ ರಾಜ್ಯಭಾರವನ್ನು ವಹಿಸಿದಾಗ ರಂಗನಾಥಸ್ವಾಮಿಯ ಅರ್ಚಕನು ಬಂದು "ದೇವರ ಉತ್ಸವಕಾಲದಲ್ಲಿ ಅಲಮೇಲಮ್ಮನವರು ತಮ್ಮ ರತ್ನಪಡಿ ನಗಗಳನ್ನು ಕೊಡುತ್ತಿದ್ದರು. ಈಗ ದೇವರ ಉತ್ಸವವನ್ನು ಮಾಡಲು ಆಭರಣಗಳಿರುವುದಿಲ್ಲ. ದೇವರ ವಿಗ್ರಹದ ಅಲಂಕಾರಕ್ಕೆ ತಕ್ಕ ಆಭರಣಗಳಿಗೆ ಅಪ್ಪಣೆಯಾಗಬೇಕು" ಎಂದು ಬಿನ್ನವಿಸಿದನು. ಆಗ ರಾಜಒಡೆಯರು ಅಮೂಲ್ಯವಾದ ಆಭರಣಗಳು ಕಳೆದುಹೋದುವಲ್ಲಾ ಎಂದು ಚಿಂತಿಸಿ, ಹೇಗಾದರೂ ಅವುಗಳನ್ನು ಹಿಂತಿರುಗಿ ಪಡೆಯಬೇಕೆಂದು ಯೋಚಿಸಿ, ಆಭರಣಗಳನ್ನು ಕೇಳಿ ತೆಗೆದುಕೊಂಡು ಬನ್ನಿರೆಂದು ಕೆಲವು ಭಟರನ್ನು ಮಾಲಂಗಿಗೆ ಕಳುಹಿಸಿದರು. ಮಾಲಂಗಿಯಲ್ಲಿದ್ದ ಅಲಮೇಲಮ್ಮನು ಭಟರ ಹೇಳಿಕೆಯನ್ನು ಕೇಳಿ "ಆ ನಗಗಳು ನಮ್ಮ ಸ್ವಂತ. ಅವುಗಳನ್ನು ಕೊಡಲಾಗುವುದಿಲ್ಲ. ಇದನ್ನು ನಿಮ್ಮ ಒಡೆಯರಿಗೆ ತಿಳಿಯಹೇಳಿ" ಎಂದು ಹೇಳಿದಳು. ರಾಜಒಡೆಯರು ಇದನ್ನು ಕೇಳಿ ಹೇಗಾದರೂ ಆಭರಣಗಳನ್ನು ತರಬೇಕೆಂದು ಪುನಃ "ಇನ್ನುಮೇಲೆ ಆಭರಣಗಳಿಂದ ನಿಮಗೇನು ಪ್ರಯೋಜನ ಶಾಂತರಾಗಿ ನೀವು ಕೊಡದಿದ್ದರೆ ಬಲಾತ್ಕಾರದಿಂದ ನಾವು ನಿಮ್ಮ ಆಭರಣಗಳನ್ನು ತೆಗೆದುಕೊಳ್ಳುತ್ತೇವೆ" ಎಂದು ಹೇಳಿ ಕಳುಹಿಸಿದರು.

ತಿರುಮಲರಾಯನಿಗೆ ತಲಕಾಡಿನಲ್ಲಿ ಗುಣತೋರಲಿಲ್ಲ. ದಿನೇ ದಿನೇ ಕೃಶವಾಗಿ ಮರಣೋನ್ಮುಖನಾಗಿದ್ದನು. ಆಗ ಅಲಮೇಲಮ್ಮನು "ಈ ಒಡೆಯರ ಹಟವೆಷ್ಟು! ಹೆಂಗಸರನ್ನು ನಿರ್ಬಂಧಿಸು

ಏಷ್ಟು ಯೋಚನೆಯನ್ನು ಮಾಡಿದನಲ್ಲವೆ! ನನ್ನ ಯಜಮಾನರು ಬದುಕಲಿಲ್ಲ. ನಾನುಳಿದು ಪ್ರಯೋಜನವಿಲ್ಲ. ಅಂತ್ಯಕಾಲದಲ್ಲಿ ಹಿಂಸೆಕೊಟ್ಟನಲ್ಲವೆ ಈ ಒಡೆಯನು" ಎಂದುಕೊಂಡು, ಬಂದಿದ್ದ ಭಟರ ಕೈಲಿ ಮೂಗುತಿಯೊಂದನ್ನು ಕೊಟ್ಟು "ಇದನ್ನು ದೇವರಿಗೆ ಇಡಿ" ಎಂದು ಹೇಳಿ ಉಳಿದ ಒಡವೆಗಳನ್ನು ಮಡಿಲಲ್ಲಿ ಕಟ್ಟಿಕೊಂಡು, ಮಾಲಂಗಿ ಮಡುವಿಗೆ ನಡೆದು "ಈ ರಾಜಒಡೆಯರು ನನ್ನನ್ನು ಈಪರಿ ಹಿಂಸಿಸಿದನು. ಆದ್ದರಿಂದ ನಾನು ಮಡುವಿನಲ್ಲಿ ಧುಮುಕಿ ಪ್ರಾಣಬಿಡುತ್ತೇನೆ. ಇನ್ನುಮೇಲೆ ತಲಕಾಡು ಮರಳಾಗಿ, ಮಾಲಂಗಿ ಮಡುವಾಗಿ, ಮೈಸೂರು ದೊರೆಗೆ ಮಕ್ಕಳೇ ಇಲ್ಲವಾಗಲಿ" ಎಂದು ನುಡಿದು ನದಿಯಲ್ಲಿ ಧುಮುಕಿದಳು.

ಈ ಶಾಪವನ್ನು ಕೇಳಿ ರಾಜಒಡೆಯರು ಚಿಂತಾಕ್ರಾಂತರಾದರು. ಶಮನೋಪಾಯವೆಂದು ಅಲಮೇಲಮ್ಮನ ವಿಗ್ರಹವೊಂದನ್ನು ಮಾಡಿಸಿ ನವರಾತ್ರಿಕಾಲದಲ್ಲಿ ಅದಕ್ಕೆ ಪೂಜೆ ನಡೆಯುವಂತೆ ಕಟ್ಟಳೆಮಾಡಿದರು. ಈಗ್ಲೂ ನವರಾತ್ರ್ಯುತ್ಸವಕಾಲದಲ್ಲಿ ಆ ವಿಗ್ರಹಕ್ಕೆ ಪೂಜೆ ನಡೆಯುತ್ತದೆ. ಅದನ್ನು ಈಗ ಅಮ್ಮಾದೇವತೆಯ ಪೂಜೆಯೆಂದು ಕರೆಯುತ್ತಾರೆ.

[ವಂಶರತ್ನಾಕರ, ಪುಟ ೩೨-೩೩; ವಂಶಾವಳಿ ಸಂ. ೧, ಪುಟ ೨೮-೩೧ ವಿಲ್ಕ್ಸ್ ಸಂ. ೧ ಪುಟ ೨೮]

# ೧೪ ಹೆಗ್ಗಡದೇವನಕೋಟೆ

ರಾಜಒಡೆಯರ ತರುವಾಯ ಚಾಮರಾಜಒಡೆಯರೆಂಬುವರು ರಾಜ್ಯವನ್ನಾಳಿದರು. ಇವರ ಕಾಲದಲ್ಲಿ ರಾಜ್ಯವು ವಿಸ್ತಾರವಾಯಿತು. ಮೈಸೂರಿನ ಸೇನೆಯವರು ಸುತ್ತಮುತ್ತಣ ಸ್ಥಳಗಳನ್ನು ಗೆಲ್ಲುತ್ತಿದ್ದರು. ಆಗ ಹೆಗ್ಗಡದೇವನಕೋಟೆಯನ್ನು ಹಿಡಿಯಲು ಒಂದು ದಳವು ಹೊರಟಿತು.

ಆ ಕೋಟೆಯ ಯಜಮಾನನಾಗಿದ್ದ ಚನ್ನರಾಜಒಡೆಯನೆಂಬಾತನು ಆಗ ಕೋಟೆಯಲ್ಲಿರಲಿಲ್ಲ. ತನ್ನ ಸೈನ್ಯವನ್ನು ತೆಗೆದುಕೊಂಡು ದೂರವಾಗಿ ಹೋಗಿದ್ದನು. ಮೈಸೂರಿನ ದಳವು ಕೋಟೆಯನ್ನು ಮುತ್ತಿದಾಗ ಕೋಟೆಯ ಒಳಗಿದ್ದವರು ನಿಸ್ಸಹಾಯರಾಗಿದ್ದರು. ಅವರ ಕಡೆಯ ವಕೀಲನು ಅತಿಸಾಧುವಾಗಿದ್ದನು; ಆತನು ಕಾಣಿಸಿಕೊಂಡು "ನಮ್ಮ ಒಡೆಯರವರು ಸೈನ್ಯವನ್ನು ಕರೆದುಕೊಂಡು ದೂರದೇಶದಲ್ಲಿದ್ದಾರೆ. ರಾಣಿಯವರು ಗರ್ಭಿಣಿಯರಾಗಿದ್ದಾರೆ ಮತ್ತು ನಿಮ್ಮ ಮುತ್ತಿಗೆಯಿಂದ ಬಹಳ ಗಾಬರಿಪಟ್ಟಿದ್ದಾರೆ. ಕೋಟೆಯಲ್ಲಿ ಇರುವವರು ೫೦ ಸೈನಿಕರು ಮಾತ್ರ. ಅಲ್ಲದೆ ದಕ್ಷಿಣಮುಖಕ್ಕೂ ಪೂರ್ವಮುಖಕ್ಕೂ ಮಳೆಗಾಲದ ಹಾವಳಿಯಿಂದ ಪೌಳಿಗೋಡೆಯು ಹಾಳಾಗಿದೆ. ಇಂತಹ ಸಮಯದಲ್ಲಿ ನೀವು ಬಂದು ಮುತ್ತುವುದು ಧರ್ಮವಲ್ಲ" ಎಂದು ಹೇಳಿದನು. ಮೈಸೂರಿನವರು ಕೊಳ್ಳೆಯನ್ನು ದಕ್ಕಿಸಿಕೊಂಡು ಹಿಂತಿರುಗಿದರು.

[ವಿಲ್ಕ್ಸ್ ಸಂ. ೧ ಪುಟ ೨೯]

# ೧೫ ದಳವಾಯಿ ಬೆಟ್ಟದ ಅರಸರು

ರಾಜ ಒಡೆಯರ ತರುವಾಯ ಅವರ ಮೊಮ್ಮಕ್ಕಳು ಚಾಮರಾಜ ಒಡೆಯರು ಪೂರ್ಣ ಯೌವನದಲ್ಲಿಯೇ ಪಟ್ಟಕ್ಕೆ ಬಂದರು. ಊಳಿಗದವರು ತಮ್ಮ ಸ್ವಂತ ಪ್ರಯೋಜನದಲ್ಲಿಯೇ ದೃಷ್ಟಿಯುಳ್ಳವರಾಗಿ ದೊರೆಗಳ ಶಿಕ್ಷಣದ ಚಿಂತೆಯನ್ನು ಮಾಡದೆ ದೊರೆಗಳ ಇಷ್ಟದಂತೆ ನೆರವೇರಿಸುತ್ತಿದ್ದರು. ದೊರೆಗಳಿಗೆ ಆಟಪಾಟಗಳಲ್ಲಿಯೂ ಸುಖವಿಲಾಸಗಳಲ್ಲಿಯೂ ಆಸಕ್ತಿಯು ದಿನೇ ದಿನೇ ಹೆಚ್ಚಿತು. ಪಾಠ ಹೇಳುವುದಕ್ಕಾಗಿ ನಿಯಮಿತನಾಗಿದ್ದ ರಂಗನಾಥ ದೀಕ್ಷಿತನೂ, ವೈದ್ಯನಾಗಿದ್ದ ಬೊಮ್ಮರಸಪಂಡಿತನೂ ಇಬ್ಬರೂ ದೊರೆಗಳ ಸುಖಾಪೇಕ್ಷೆಗೆ ಅನುಕೂಲರಾಗಿಬಿಟ್ಟರು. ಅರಮನೆಯಲ್ಲಿ ದುರ್ಮಾರ್ಗಿಗಳು ಹೆಚ್ಚಾಗಿ ಗೌರವ ಗಾಂಭೀರ್ಯಗಳು ನಾಶವಾಗಿ ಅದು ದುರ್ನಡತೆಗೂ ಅಸಹ್ಯಕ್ಕೂ ನೆಲೆಯಾಯಿತು.

ಇದನ್ನು ಕಂಡು ದಳವಾಯಿ ಕೆಲಸ ಮಾಡುತ್ತಿದ್ದ ಬೆಟ್ಟದ ಅರಸಿನವರು ಈ ದುರ್ಮಾರ್ಗಿಗಳನ್ನು ಕರೆಯಿಸಿ "ನೀವುಗಳು ಇನ್ನು ಮೇಲೆ ನಿಮ್ಮ ಕೆಲಸಗಳನ್ನು ಮಾಡಬೇಡಿ" ಎಂದು ಕಟ್ಟುಮಾಡಿದರು; ದೊರೆಯ ಊಳಿಗಕ್ಕೆ ವೃದ್ಧರನ್ನೇ ನಿಯಮಿಸಿದರು. ಬೊಮ್ಮರಸ ಪಂಡಿತನನ್ನು "ನೀವು ಇನ್ನುಮೇಲೆ ಅಂತಃಪುರಕ್ಕೆ ಹೋಗತಕ್ಕ ಕೆಲಸವಿಲ್ಲ; ಒಳಬಾಗಿಲಲ್ಲಿರುವ ಅವ್ವೇರುಗಳಿಗೆ ಔಷಧ ಕೊಡುವುದೆಷ್ಟೋ ಅಷ್ಟೇ" ಎಂದು ಗೊತ್ತುಮಾಡಿ, ರಾಣೀವಾಸದಲ್ಲಿ ವಿಚಾರಮಾಡಿ ಚಿಕಿತ್ಸೆಮಾಡಲು ನಂಬಿಕಸ್ತನಾಗಿದ್ದ ತಿರುವೇಂಗಳಯ್ಯನೆಂಬಾತನನ್ನು ವೈದ್ಯಕ್ಕೆ ನೇಮಿಸಿದರು. ಹೀಗೆ ಮಾಡಿ ಬೆಟ್ಟದ ಅರಸಿನವರು ಅರಮನೆಯು ಎಂದಿನಂತೆ ಗೌರವದ ಸ್ಥಾನವಾಗಿ ದೊರೆಗಳ ದುರ್ಬುದ್ಧಿಯನ್ನು ಬಿಟ್ಟಾರೆಂದು ಹಾರೈಸಿದರು.

ಆದರೆ ದೊರೆಗಳಿಗೆ ಈ ಏರ್ಪಾಡುಗಳು ಸರಿಬೀಳಲಿಲ್ಲ. ಮೊದಲಿದ್ದ ಸ್ನೇಹಿತರು ಪರಿಚಾರಕರನ್ನೇ ಹತ್ತಿರ ಇಟ್ಟುಕೊಂಡು "ದಳವಾಯಿಗಳ ಆಜ್ಞೆಯನ್ನು ನೀವೇಕೆ ಕೇಳಬೇಕು? ನಿಮ್ಮನ್ನು ಆಜ್ಞಾಪಿಸಲು ಅವರು ಯಾರು?" ಎಂದು ಮೊದಲಿನಂತೆಯೇ ಇದ್ದರು. ಇದನ್ನು ಕೇಳಿದ ದಳವಾಯಿಗಳು ಬಹಳ ವ್ಯಸನಪಟ್ಟು "ಇದುವರೆಗೂ ನಮ್ಮ ಮಾತಿನಲ್ಲಿ ದೊರೆಗಳು ಗೌರವವನ್ನಿಟ್ಟಿದ್ದರು. ಈಗ ಪ್ರಾಯ ಬಂತು. ನಮ್ಮಂತಹವರ ಮಾತು ಬೇಕಾಗಿಲ್ಲ" ಎಂದು ಖೇದದಿಂದ ಇಷ್ಟರಲ್ಲಿಯೂ ಮಿತ್ರರಲ್ಲಿಯೂ ಹೇಳಿಕೊಂಡು ಸುಮ್ಮನಾದರು.

ದಳವಾಯಿಗಳ ತಮ್ಮ ದೊಡ್ಡ ಚಾಮಪ್ಪನೂ, ಮಗ ಚಿಕ್ಕ ಚಾಮಪ್ಪನೂ ಇಬ್ಬರೂ ಈ ಮಾತನ್ನು ಕೇಳಿ ಮನಸ್ಸಿನಲ್ಲಿ ಚಿಂತಿಸುತ್ತಿದ್ದರು. ಒಂದುದಿನ ಬೆಳಿಗ್ಗೆ ಮೂರನೆ ಜಾವದಲ್ಲಿ ನಿಶ್ಶಬ್ದವಾಗಿದ್ದಾಗ ಇಬ್ಬರೂ ಯಾರಿಗೂ ತಿಳಿಯದಂತೆ ಕದದ ಹಿಂದೆ ಕುಳಿತು "ಈ ಅಯೋಗ್ಯ ದೊರೆಗೆ ಮಾಟವನ್ನು ಮಾಡಿಸಿಯೋ ವಿಷವನ್ನಿಡಿಸಿಯೋ ಕೊಲ್ಲಿಸಿದರೆ ಮುಂದೆ ಇಮ್ಮಡಿ ರಾಜ ಒಡೆಯರಿಗೆ ಪಟ್ಟವಾಗುವುದು. ಅವರು ಇನ್ನೂ ಬಾಲಕರಾದ್ದರಿಂದ ನಮ್ಮ ತಂದೆಯವರಿಗೇ ಅಧಿಕಾರವೆಲ್ಲವೂ ಬರುವುದು" ಎಂದು ರಹಸ್ಯವಾಗಿ ಮಾತನಾಡಿಕೊಳ್ಳುತ್ತಿದ್ದರು. ಅವರಿಗೆ ತಿಳಿಯದಂತೆ ಈ ಮಾತುಗಳನ್ನು ಚನ್ನವ್ವೆಯೆಂಬಾಕೆಯು ಕೇಳುತ್ತಿದ್ದಳು. ಬೆಳಕುಹರಿದಮೇಲೆ ಆ ಚನ್ನವ್ವೆಯು ಅರಮನೆಗೆ ಹೋಗಿ ಮಾತುಶ್ರೀ ಕೊನ್ನಾಜಮ್ಮಣ್ಣಿಯವರ ಸನ್ನಿಧಿಯಲ್ಲಿ ಚಾಕರಿ ಮಾಡುತ್ತಿದ್ದವಳಾದ್ದರಿಂದ ಸುಲಭವಾಗಿ ಅಂತಃಪುರವನ್ನು ಪ್ರವೇಶಿಸಿ ಮಾತುಶ್ರೀಯವರಿಗೆ ತಾನು ಕೇಳಿದುದನ್ನು ತಿಳಿಸಿಬಿಟ್ಟಳು. ಅಲ್ಲದೆ ದೊರೆಗಳಿಗೆ ಸ್ತನ್ಯವನ್ನು ಕೊಡುತ್ತಿದ್ದು ಆಗಲೂ ಆರೋಗಣೆಯನ್ನು ಮಾಡಿಸುತ್ತಿದ್ದ ನಂಜವ್ವೆಯೊಡನೆಯೂ ಹೇಳಿದಳು. ನಂಜವ್ವೆಯವರು ಈ ಮಾತನ್ನು ದೊರೆಗೆ ಊಟಮಾಡುವಾಗ ತಿಳಿಸಿದರು. ರಾಜರಿಗೆ ಬಹಳ ಕೋಪ ಬಂತು.

ಒಳೆಕ ದೊರೆಗಳು ತಮ್ಮ ಸಾಮಾಜಿಕರನ್ನು ಕರೆಯಿಸಿ ಈ ಸಂಗತಿಯನ್ನು ತಿಳಿಯಹೇಳಿ "ನೀವು ಇದರ ವಿವರವನ್ನು ಗೋಪ್ಯವಾಗಿ ತಿಳಿದುಬನ್ನಿ" ಎಂದರು. ಅವರು ರಾಜರ ಮನೋಗತವನ್ನು ತಿಳಿದವರಾಗಿ ಹೊರಗೆ ಹೋಗಿ ವಿಚಾರಿಸಿಕೊಂಡು ಬಂದು "ಎಲ್ಲವೂ ನಿಜ, ಮಹಾಸ್ವಾಮಿ!" ಎಂದುಬಿಟ್ಟರು. ಅದನ್ನು ಕೇಳಿ ಯೋಚನೆ ಮಾಡಿ ತಮ್ಮ ಕ್ಷೇತ್ರಸ್ವಾಮಿಯವರಿಗೆ ಕಾಗದ ಬರೆಸಿ ಉತ್ತರವನ್ನು ತರಿಸಿಕೊಂಡು ದೊರೆಗಳು ದೊಡ್ಡಚಾಮನನ್ನು, ಚಿಕ್ಕಚಾಮನನ್ನು ಇಬ್ಬರಿಗೂ ಮರಣದಂಡನೆಯನ್ನು ವಿಧಿಸಿದರು. ಅವರಿಬ್ಬರೂ ಈ ರೀತಿ ದುರ್ಮರಣಕ್ಕೆ ತುತ್ತಾದರು.

ಬೆಟ್ಟದ ಅರಸರು ದೊರೆಗಳಿಗೆ ವರಸೆಯಲ್ಲಿ ಚಿಕ್ಕಪ್ಪನಾಗಿದ್ದರು. ಮನೆತನದಲ್ಲಿ ಹಿರಿಯರೂ ಶೂರರೂ ಆಗಿದ್ದರು. ಅವರೂ ಮುಂದೇನಾಗುವುದೋ ಎಂದು ಬೆಟ್ಟದ ಅರಸರು ಯೋಚಿಸುತ್ತಿದ್ದರು. ಇವರು ಎಲ್ಲಿಯಾದರೂ ಹೊರಗೆ ಹೊರಟುಬಿಟ್ಟರೆ ಪಾಳಯಗಾರರ ಜೊತೆ ಸೇರಿಕೊಂಡು ಪ್ರಬಲರಾದಾರೆಂದು ರಾಜರು ಚಿಂತಿಸಿ ಇವರನ್ನು ಶಿಕ್ಷಿಸಿಬಿಡಬೇಕೆಂದುಕೊಂಡು, ಅವರನ್ನು ಕರೆಯಿಸಿ, ಕಣ್ಣಿಗೆ ಭಾಂಡಕರ್ಪೂರವನ್ನು ಕಟ್ಟಿಸಿ, ಕಣ್ಣುಗಳನ್ನು ಕೀಳಿಸಿ, "ಇನ್ನುಮೇಲೆ ನೀವು ನಿಮ್ಮ ಮನೆಯಲ್ಲಿಯೇ ಇರತಕ್ಕದ್ದು. ಮನೆಯ ಹೊಸ್ತಿಲು ದಾಟಿ ಹೊರಗೆ ಬಂದುದಾದರೆ ನಮ್ಮ ಆಗ್ರಹಕ್ಕೆ ಪಾತ್ರರಾಗುವಿರಿ" ಎಂದು ಕಠೋರವಾಗಿ ನುಡಿದುಬಿಟ್ಟರು. ದಳವಾಯಿತನವು ಬೆಟ್ಟದ ಅರಸಿನವರಿಗೆ ತಪ್ಪಿತು ಈ ರೀತಿಯಲ್ಲಿ ಬೆಟ್ಟದ ಅರಸರು ದೊರೆಗಳ ವಿಲಾಸವನ್ನು ತಡೆಯಲು ಪ್ರಯತ್ನಪಟ್ಟು ಕ್ರೂರಶಿಕ್ಷೆಗೆ ಗುರಿಯಾದರು.

ಯೌವನಂ ಧನಸಂಪತ್ತಿಃ ಪ್ರಭುತ್ವಮವಿವೇಕತಾ ।
ಏಕೈಕಮಪ್ಯನರ್ಥಾಯ ಕಿಂ ಯತ್ರ ಚತುಷ್ಟಯಂ ॥

[ವಂಶರತ್ನಾಕರ ಪುಟ ೫೩-೫೫; ವಂಶಾವಳಿ ಸಂ. ೧, ಪುಟ ೫೪-೫೫]

## ೧೬ ತಿರುಚನಾಪಳ್ಳಿಯ ಜಟ್ಟಿ

ಪಟ್ಟವಾಗುವುದಕ್ಕೆ ಮುಂಚೆ ಕಂಠೀರವ ಒಡೆಯರು ತಮ್ಮ ತಂದೆಗಳಾದ ಚಾಮರಾಜಒಡೆಯರ ಬಳಿಯಲ್ಲಿ ಕೆರಗಣಾಂಬಿಯಲ್ಲಿದ್ದರು. ಆ ಕಾಲದಲ್ಲಿ ರಾಮೇಶ್ವರದ ತೀರ್ಥಯಾತ್ರೆಮಾಡಿಕೊಂಡು ಬರುತ್ತಿದ್ದ ಒಬ್ಬ ಬ್ರಾಹ್ಮಣನು ಈ ಒಡೆಯರನ್ನು ಕಂಡು ಫಲ ಮಂತ್ರಾಕ್ಷತೆಯನ್ನು ಒಪ್ಪಿಸಿ "ತಿರುಚನಾಪಳ್ಳಿಯಲ್ಲಿ ಮಹಾ ಪರಾಕ್ರಮಶಾಲಿಯಾದ ಶೂರ ಜಟ್ಟಿಯೊಬ್ಬನಿರುವನು. ಇತನು ತನ್ನ ಸಮಾನ ಕಾಳಗಮಾಡುವವರು ಯಾರೂ ಇಲ್ಲವೆಂದು ಹೆಮ್ಮೆಯಿಂದಿದ್ದಾನೆ. ತನ್ನ ನಟ್ಟಿಚಲ್ಲಣಗಳನ್ನು ಆ ಊರಿನ ಕೋಟೆ ಬಾಗಿಲಿಗೆ ಕಟ್ಟಿದರೆ ಸರ್ವಜನರೂ ತನ್ನ ಕಾಲಕೆಳಗೆ ಸಂಚಾರಮಾಡಿದಂತೆ ಆಗುವುದೆಂದು ಆ ಊರ ಅರಸನ ಅನುಮತಿಯನ್ನು ಪಡೆದು ದುರಹಂಕಾರದಿಂದ ಅವುಗಳನ್ನು ಕಟ್ಟಿದ್ದಾನೆ. ಆ ಊರಿನ ಅರಸರು ಬ್ರಾಹ್ಮಣರು ಮಾತ್ರ ಮತ್ತೊಂದು ಬಾಗಿಲಲ್ಲಿ ಸಂಚಾರಮಾಡುವ ಹಾಗೆಯೂ ಉಳಿದವರೆಲ್ಲರೂ ಆ ಬಾಗಿಲಿನಲ್ಲಿಯೇ ಸಂಚರಿಸುವಂತೆಯೂ ಕಟ್ಟುಮಾಡಿದ್ದಾರೆ" ಎಂದು ಹೇಳಿದನು. ಆ ಮಾತನ್ನು ಕೇಳಿ ಈ ಕಂಠೀರವಒಡೆಯರು ಜಟ್ಟಿಯ ವೇಷವನ್ನು ಧರಿಸಿ, ಯಾರೂ ಅರಿಯದಂತೆ ಆ ಬ್ರಾಹ್ಮಣನನ್ನು ಸಂಗಡ ಕರೆದುಕೊಂಡು ತಿರುಚನಾಪಳ್ಳಿಗೆ ಹೊರಟು, ಅಲ್ಲಿ ಕೋಟೆ ಬಾಗಿಲಿಗೆ ಕಟ್ಟಿದ್ದ ದಟ್ಟಿ ಚಲ್ಲಣಗಳನ್ನು ತಮ್ಮ ಆಳಿನ ಕೈಕೋಲಿನಿಂದ ತೆಗೆಸಿ, ಅನಂತರ ಕೋಟೆಯೊಳಕ್ಕೆ ಪ್ರವೇಶಮಾಡಿದರು.

ಈ ಸುದ್ದಿಯನ್ನು ಕೇಳಿದ ತಿರುಚನಾಪಳ್ಳಿಯ ನಾಯಕನು ಇವರನ್ನು ಕರೆಯಿಸಿ, ಸನ್ಮಾನಮಾಡಿ ಇರಿಸಿಕೊಂಡಿದ್ದು, ಒಂದು ದಿನ ಎಲ್ಲರನ್ನೂ ಕರೆಸಿ ಸಭೆಮಾಡಿ, ತಾನು ಉಪ್ಪರಿಗೆಯ ಮೇಲೆ

ಕುಳಿತುಕೊಂಡು, ತನ್ನ ಜಟ್ಟಿಗೂ ವೇಷಧಾರಿಗಳಾಗಿ ಬಂದಿದ್ದ ಕಂಠೀರವಒಡೆಯರಿಗೂ ಕಾಳಗ ಬಿಡಿಸಿದನು. ಆಗ ವಜ್ರಮುಷ್ಟಿಗಳನ್ನು ಹಿಡಿದು ಇಬ್ಬರೂ ಕಾಳಗಮಾಡುವ ಸಮಯದಲ್ಲಿ ಈ ಒಡೆಯರು ಯಾರೂ ಅರಿಯದಂತೆ ಮೊದಲೇ ಸೊಂಟದಲ್ಲಿ ಕಟ್ಟಿದ್ದ ವಿಜಯನಾರಸಿಂಹವೆಂಬ ಕತ್ತಿಯಿಂದ ಆ ಜಟ್ಟಿಯ ಕೊರಳನ್ನು ಕ್ಷಣಮಾತ್ರದಲ್ಲಿ ಅತಿಚಮತ್ಕಾರದಿಂದ ಕತ್ತರಿಸಿಬಿಟ್ಟು, ನಿಂತಿದ್ದ ಆ ಹೆಣದ ಮುಂದೆ ಸುಮ್ಮನೆ ನಿಂತುಕೊಂಡರು. ಇದನ್ನು ತಿಳಿಯದೆ ಅಲ್ಲಿಯ ಅರಸು "ಏತಕ್ಕೆ ಸುಮ್ಮನೆ ನಿಂತಿದ್ದೀರಿ" ಎಂದು ಕೇಳಲು ಒಡೆಯರು ತಮ್ಮ ಎಡಗೈಯಲ್ಲಿದ್ದ ಬೆತ್ತದಿಂದ ಎದುರಾಳಿನ ಮುಖವನ್ನು ತಿವಿದರು. ಜಟ್ಟಿಯ ತಲೆಯು ಕೆಳಕ್ಕೆ ಉರುಳಿ ಬಿತ್ತು. ಆಗ ಕಾಳೆಗವನ್ನು ನೋಡಲು ಬಂದಿದ್ದ ಜನರೆಲ್ಲರೂ ಇವರ ಸಾಧನೆಯನ್ನೂ ಹಸ್ತಲಾಘವ ಚಮತ್ಕಾರಗಳನ್ನೂ ಕಂಡು ಆಶ್ಚರ್ಯಪಟ್ಟು ಇವರನ್ನು ಕೊಂಡಾಡುತ್ತಿದ್ದರು. ಕಾಳೆಗ ಮುಗಿಯಿತು.

ಆಗ ತಿರುಚನಾಪಳ್ಳಿಯ ಅರಸನು ಇವರಿಗೆ ವಿಶೇಷವಾದ ಸನ್ಮಾನ ಬಹುಮಾನಗಳನ್ನು ಮಾಡಬೇಕೆಂದು ಯೋಚಿಸಿ ಉಪ್ಪರಿಗೆಯನ್ನು ಬಿಟ್ಟು ಇಳಿದನು. ಆತನ ಮುಖಭಾವದಿಂದಲೇ ಆತನ ಇಂಗಿತವನ್ನರಿತು ಕಂಠೀರವಒಡೆಯರು ಈ ಸಾಮಾನ್ಯ ಪಾಳೆಯಗಾರನಿಂದ ಜಟ್ಟಿಯಂತೆ ಸನ್ಮಾನಮಾಡಿಸಿಕೊಳ್ಳುವುದು ಯುಕ್ತವಲ್ಲವೆಂದೆಣಿಸಿ "ನಾಳೆ ಬರುತ್ತೇವೆ" ಎಂದು ಆ ಅರಸನಿಗೆ ಹೇಳಿ, ಆ ರಾತ್ರಿಯೇ ಯಾರೂ ಅರಿಯದಂತೆ ಆ ಊರ ಕೋಟೆಬಾಗಲಿಗೆ "ಮಹೀಶೂರ ಸಂಸ್ಥಾನದಿಂದ ಯಾರೋ ಒಂದು ಇಂಥ ಪರಾಕ್ರಮವನ್ನು ತೋರಿಸಿದರು" ಎಂದು ಎಲ್ಲರಿಗೂ ತಿಳಿಯುವಂತಹ ಒಂದು ಚೀಟಿಯನ್ನು ಬರೆದು ಕಟ್ಟಿ, ಜತೆಯಲ್ಲಿ ಬಂದಿದ್ದ ಬ್ರಾಹ್ಮಣನೊಡನೆ ತೆರಕಣಾಂಬಿಯ ದಾರಿಯನ್ನು ಹಿಡಿದು ಮರುದಿವಸ ಆ ಸ್ಥಳವನ್ನು ಸೇರಿದರು.

[ವಂಶರತ್ನಾಕರ ಪುಟ ೬೫-೬೬; ವಂಶಾವಳಿ ಸಂ. ೧, ಪುಟ ೬೬-೬೭ ವಿಲ್ಕ್ಸ್ ಸಂ. ೧, ಪುಟ ೩೮]

# ೧೭ ವಿಗಡ ವಿಕ್ರಮರಾಯ

ಚಾಮರಾಜಒಡೆಯರ ತರುವಾಯ ಇಮ್ಮಡಿರಾಜಒಡೆಯರೆಂಬವರು ದೊರೆಗಳಾದರು. ಇವರು ವಯಸ್ಸಿನಲ್ಲಿ ಇನ್ನೂ ಚಿಕ್ಕವರಾಗಿದ್ದುದರಿಂದ ಅಧಿಕಾರವೆಲ್ಲವನ್ನೂ ದಳವಾಯಿ ಪದವಿಯಲ್ಲಿದ್ದ ವಿಕ್ರಮರಾಯನೇ ವಹಿಸಿದ್ದನು. ಆಡಳಿತವೆಲ್ಲವೂ ತನ್ನ ಕೈಯಲ್ಲಿಯೇ ಇದ್ದುದನ್ನು ಕಂಡು ವಿಕ್ರಮರಾಯನು ದುರಾಸೆಗೊಳಗಾದನು. ಸೈನ್ಯವು ತನ್ನ ಅಧೀನವಾಗಿತ್ತು; ಅರಮನೆಯಲ್ಲಿ ತಾನೇ ತಾನಾಗಿದ್ದನು. ಆದ್ದರಿಂದ ಚಿಕ್ಕ ದೊರೆಗಳನ್ನು ಅರಮನೆಯಲ್ಲಿಯೇ ಸೆರೆಯಿಟ್ಟನು. ಇಮ್ಮಡಿರಾಜಒಡೆಯರು ಚಿಕ್ಕವರಾದರೂ ಜಾಣರೂ ಸಮರ್ಥರೂ ಆಗಿದ್ದರು. ಅಧಿಕಾರವನ್ನು ತಾವೇ ಮಾಡಲುದ್ಯುಕ್ತರಾದರು. ಆಗ ವಿಕ್ರಮರಾಯನು ಗೋಪ್ಯವಾಗಿ ರಾಜರಿಗೆ ವಿಷವಿಡಿಸಿ ಕೊಲ್ಲಿಸಿದನು.

ಮುಂದೆ ಪಟ್ಟಕ್ಕೆ ಬರತಕ್ಕವರು ಬೆಟ್ಟದ ಚಾಮರಾಜಒಡೆಯರ ಮಕ್ಕಳು ಕಂಠೀರವ ನರಸರಾಜಒಡೆಯರವರು. ಇವರು ಮೈಸೂರಿನಲ್ಲಿರದೆ ತಂದೆಯವರೊಡನೆ ತೆರಕಣಾಂಬಿಯಲ್ಲಿರುತ್ತಿದ್ದರು. ಇಮ್ಮಡಿರಾಜಒಡೆಯರ ಮರಣವನ್ನು ಕೇಳಿ ಕಂಠೀರವ ಒಡೆಯರು ಮೈಸೂರಿಗೆ ಬಂದರು. ವಿಕ್ರಮರಾಯನು ಮುಂದೆ ರಾಜರಾಗುವವರನ್ನು ಯಥಾರೀತಿಯಲ್ಲಿ ಕಂಡು ರಾಜ್ಯಕೋಶಗಳನ್ನು ಒಪ್ಪಿಸುವುದನ್ನು ಬಿಟ್ಟು ಅವರನ್ನು ಹೊರಗಿನ ಮನೆಯೊಂದರಲ್ಲಿಳಿಸಿದನು. ಕೆಲವರು ಸೇವಕರನ್ನು ಮಾತ್ರ ಅವರ ಮರ್ಯಾದೆಗೆ ನಿಯಮಿಸಿದನು. ತಾನು ಬಂದು ಅವರನ್ನು ಕಾಣಲೇ ಇಲ್ಲ; ಪಟ್ಟಾಭಿಷೇಕದ ಮಾತನ್ನು ಎತ್ತಲಿಲ್ಲ. ಎಲ್ಲರಿಗೂ ತಿಳಿಯುವಂತೆ

ಪ್ರಕಾಶವಾಗಿ ವಿಕ್ರಮರಾಯನು ಕಂಠೀರವ ಒಡೆಯರಿದ್ದುದನ್ನು ಅಸಡ್ಡೆಮಾಡಿ ತಾನು ನೆರೆಹೊರೆಯ ಪ್ರಾಂತಗಳಲ್ಲಿ ಸಂಚಾರಕ್ಕೆಂದು ಹೊರಟನು.

ಸಂಚಾರಮಾಡುತ್ತಿದ್ದಾಗ ವಿಕ್ರಮರಾಯನಿಗೆ ಅವನ ಬೇಹುಗಾರರು ಬಂದು "ಕಂಠೀರವಒಡೆಯರು ಅಸಮಾಧಾನಪಟ್ಟಿದ್ದಾರೆ. ರಾಜಪದವಿಗಾಗಿ ಪ್ರಯತ್ನಮಾಡುವಂತಿದೆ" ಎಂದು ಹೇಳಿದರು. ಆಗ ವಿಕ್ರಮನು ತಿರಸ್ಕಾರಭಾವದಿಂದ "ಊಹೂ! ಅವನಿಗೆ ಎಚ್ಚರ ತಪ್ಪಿದ ಹಾಗಿದೆ. ನಾವಿನ್ನೂ ಅವನಿಗೆ ಅಭಿಷೇಕವಮಾಡಿಲ್ಲ ವೆಂಬುದು ಜ್ಞಾಪಕದಲ್ಲಿದ್ದರೆ ಅವನಿಗೊಳ್ಳೆಯದು" ಎಂದನು.

ವಿಕ್ರಮರಾಯನು ತಾನೇ ರಾಜನಾಗಬೇಕೆಂದಿದ್ದನು. ಇಮ್ಮಡಿರಾಜಒಡೆಯರನ್ನು ಆ ಕಾರಣದಿಂದಲೇ ಗೋಪ್ಯವಾಗಿ ಕೊಲ್ಲಿಸಿದ್ದನು. ಅರಮನೆಯಲ್ಲಿ ಎಲ್ಲರೂ ವಿಕ್ರಮರಾಯನನ್ನು ಕಂಡರೆ ಹೆದರುತ್ತಿದ್ದರು. ಎಲ್ಲರಿಗೂ ಚಿಕ್ಕರಾಜರು ವಿಷದಿಂದ ಸತ್ತರೆಂದು ಬಲವಾದ ಅನುಮಾನವಿತ್ತು. ಆದರೆ ಯಾರೂ ಪ್ರಕಾಶವಾಗಿ ಹೇಳಿಕೊಳ್ಳುತ್ತಿರಲಿಲ್ಲ. ಭಯದಿಂದ ಸುಮ್ಮನಿದ್ದರು. ಆದರೂ ವಿಕ್ರಮರಾಯನು ಸಂಚಾರದಲ್ಲಿದ್ದಾಗ ಇಬ್ಬರು ಸೇವಕರು ರಹಸ್ಯವಾಗಿ ಕಂಠೀರವಒಡೆಯರ ಬಳಿಗೆ ಹೋಗಿ, ಇಮ್ಮಡಿರಾಜಒಡೆಯರ ದುರ್ಮರಣದ ವೃತ್ತಾಂತವನ್ನು ತಿಳಿಸಿ, ವಿಕ್ರಮರಾಯನನ್ನು ಶಿಕ್ಷಿಸುವ ಕಾರ್ಯದಲ್ಲಿ ತಾವು ಸಿದ್ಧರಾಗಿರುವುದನ್ನು ಅರಿಕೆಮಾಡಿದರು. ವಿಕ್ರಮರಾಯನು ಹಿಂತಿರುಗಿ ಬರುವುದನ್ನು ಇವರು ನಿರೀಕ್ಷಿಸುತ್ತಿದ್ದರು.

ವಿಕ್ರಮರಾಯನು ಮೈಸೂರಿಗೆ ಹಿಂತಿರುಗಿದನು. ಸಂಜೆಯ ಸಮಯದಲ್ಲಿ ಕಂಠೀರವ ಒಡೆಯರನ್ನು ಕಾಣುವುದಕ್ಕೆ ಹೊರಟನು. ಉಪಚಾರದ ಮಾತುಗಳನ್ನಾಡಿ ವಿಕ್ರಮರಾಯನು ಪಂಜಿನವನೊಡನೆ ತನ್ನ ಮನೆಗೆ ಪುನಃ ಹೊರಟನು. ಇದನ್ನೇ ಆ ಇಬ್ಬರು ಭಟರು ಹೊಂಚುಹಾಕುತ್ತಿದ್ದು ವಿಕ್ರಮರಾಯನ ಮನೆಯ

ಕೈಗೋಡೆಯನ್ನು ಹತ್ತಿ ಮುಂದಿನ ಅಂಗಳದಲ್ಲಿ ಅವಿತುಕೊಂಡಿದ್ದರು. ಸ್ವಲ್ಪಕಾಲದಲ್ಲಿಯೇ ವಿಕ್ರಮರಾಯನು ಪಂಜಿನವನನ್ನು ಮುಂದೆ ನಡೆಸಿಕೊಂಡು ಅಂಗಳವನ್ನು ಹೊಕ್ಕನು. ಆಗ ಅಲ್ಲಿ ಅವಿತುಕೊಂಡಿದ್ದ ಭಟರಲ್ಲೊಬ್ಬನು ಪಂಜಿನವನಮೇಲೆ ಹಾರಿ, ಕೆಳಕ್ಕೆ ಕೆಡವಿ ಕೊಂದುಬಿಟ್ಟನು. ಪಂಜು ಆರಿಹೋಯಿತು. ವಿಕ್ರಮರಾಯನು "ಯಾರು ನೀನು?" ಎಂದು ಗರ್ಜಿಸಿದನು. ಇನ್ನೊಬ್ಬ ಭಟನು "ನಿನ್ನ ಶತ್ರು!" ಎಂದು ಒಂದೇಟನ್ನು ಕೊಟ್ಟನು. ಆದರೆ ವಿಕ್ರಮರಾಯನು ಬಲಶಾಲಿಯಾಗಿದ್ದನು. ಏಟು ಕೊಟ್ಟವನನ್ನು ಹಿಡಿದು ನೆಲಕ್ಕೆ ಅಪ್ಪಳಿಸಿ ಕೆಡವಿ, ಅವನ ಎದೆಯಮೇಲೆ ಹಾರಿ ಕುಳಿತು, ಅವನ ಕುತ್ತಿಗೆಯನ್ನು ಹಿಸುಕಿದನು. ಕೆಳಗೆ ಬಿದ್ದವನು ತನ್ನ ಗೆಳೆಯನನ್ನು ಕೂಗಿದನು. ಆದರೆ ಕಗ್ಗತ್ತಲೆಯಾಗಿದ್ದಿತು; ಪಂಜಿನವನನ್ನು ಕೊಂದಿದ್ದ ಆ ಗೆಳೆಯನಿಗೆ ಯಾರು ಯಾರೆಂಬುದು ತಿಳಿಯಲಿಲ್ಲ. ಆದ್ದರಿಂದ ಅವನು ತನ್ನ ಗೆಳೆಯನನ್ನುದ್ದೇಶಿಸಿ "ನೀನು ಕೆಳಗೋ ಮೇಲೋ?" ಎಂದು ಕೇಳಿದನು. "ಕೆಳಗೆ" ಎಂದುತ್ತರ ಬಂತು. ಕೂಡಲೆ ತನ್ನ ಕಠಾರಿಯನ್ನು ಹಿರಿದು ಈತನು ವಿಕ್ರಮರಾಯನನ್ನು ಚನ್ನಾಗಿ ತಿವಿದುಬಿಟ್ಟನು. ಕುತ್ತಿಗೆಯ ಹಿಡಿತವನ್ನು ಬಿಟ್ಟು ವಿಕ್ರಮರಾಯನು "ಹಾ" ಎಂದು ಒರಗಿದನು.

ಈ ರೀತಿಯಲ್ಲಿ ವಿಕ್ರಮರಾಯನು ಸತ್ತನು. ಕಂಠೀರವ ನರಸರಾಜ ಒಡೆಯರು ಮಾರನೇ ದಿನವೇ ಮೈಸೂರನ್ನು ವಶಪಡಿಸಿಕೊಂಡು ತರುವಾಯ ಶ್ರೀರಂಗಪಟ್ಟಣಕ್ಕೆ ಹೊರಟರು.

[ವಿಲ್ಕ್ಸ್ ಪುಟ ೩೦-೩೧; ವಂಶರತ್ನಾಕರ ಪುಟ ೬೭; ವಂಶಾವಳಿ ಸಂ. ೧, ಪುಟ ೬೮]

# ೧೮ ಕೊಲೆ ಮಾಡಲು ಬಂದ ಕಳ್ಳರು

ಕೆಲವು ಕಾಲದ ಮೇಲೆ ತಿರುಚನಾಪಳ್ಳಿಯ ಅರಸನು ತನ್ನ ಬಟ್ಟಿಯನ್ನು ಕಾಳಗದಲ್ಲಿ ಕೊಂದವನೇ ಶ್ರೀರಂಗಪಟ್ಟಣದ ಒಡೆತನಕ್ಕೆ ಬಂದನೆಂಬುದನ್ನು ತಿಳಿದು ಭಯಭ್ರಾಂತನಾದನು. ಇಷ್ಟು ಪೌರುಷಸಾಹಸಗಳುಳ್ಳ ಒಡೆಯರು ತನ್ನ ರಾಜ್ಯದಮೇಲೆ ಕೈಮಾಡಿದರೇನುಗತಿಯೆಂದು ಚಿಂತಿಸುತ್ತ ಆ ಅರಸನು ಕಡೆಗೆ ರಹಸ್ಯವಾಗಿ ಒಡೆಯರನ್ನು ಕೊಲ್ಲಿಸುವುದೇ ಸರಿಯೆಂದು ನಿಶ್ಚಯಮಾಡಿ, ೨೫ ಮಂದಿ ಕಳ್ಳರಿಗೆ ಹಣವನ್ನು ಕೊಟ್ಟು, ಕಂಠೀರವ ಒಡೆಯರ ತಲೆಯನ್ನು ತೆಗೆದುಕೊಂಡು ಬರುವುದೆಂದು ಅಪ್ಪಣೆ ಮಾಡಿದನು.

ಆ ಕಳ್ಳರು ಬೇರೆ ಬೇರೆ ವೇಷಗಳನ್ನು ಧರಿಸಿ ಶ್ರೀರಂಗಪಟ್ಟಣಕ್ಕೆ ಬಂದು, ಅಲ್ಲಿನ ಮಾರ್ಗಗಳನ್ನು ತಿಳಿದುಕೊಳ್ಳುತ್ತಾ ಸಮಯವನ್ನು ನಿರೀಕ್ಷಿಸುತ್ತಲಿದ್ದರು. ಕಡೆಗೊಂದು ದಿನ ಈ ಕಳ್ಳರು ಕನ್ನ ತೆಗೆದುಕೊಂಡೇ ಅರಮನೆಯನ್ನು ಪ್ರವೇಶಮಾಡಿ ಅವಿತುಕೊಂಡಿದ್ದರು. ಅಂತಃಪುರದಲ್ಲಿ ದೊರೆಗಳು ಒಬ್ಬರೇ ಮಂಚದ ಮೇಲೆ ಕುಳಿತು ತಾಂಬೂಲವನ್ನು ಸವಿಯುತ್ತಿದ್ದ ಸಮಯದಲ್ಲಿ ನಿದ್ರೆಯ ಮಾಳಿಗೆಯ ಮುಂದಣ ತಜಾರದ ಕಂಬಗಳ ಮರೆಯಲ್ಲಿ ಬೇರೆ ಬೇರೆಯಾಗಿ ನಿಂತಿದ್ದ ಈ ೨೫ ಜನರ ನೆರಳುಗಳನ್ನು ನೋಡಿ "ಯಾರೋ ವಂಚನೆಯಿಂದ ನಮ್ಮ ಪ್ರಾಣವನ್ನಪಹರಿಸುವುದಕ್ಕೆ ಬಂದಿರುತ್ತಾರೆ" ಎಂದು ತಿಳಿದು ಹಾಗೆಯೇ ಸಮೀಪದಲ್ಲಿದ್ದ ವಿಜಯನಾರಸಿಂಹವೆಂಬ ತಮ್ಮ ಕತ್ತಿಯನ್ನು ಕೈಗೆ ತೆಗೆದುಕೊಂಡರು. ಹೊಂಚು ಹಾಕುತ್ತಲಿದ್ದ ಆ ಕಳ್ಳರು ಅದನ್ನು ಕಂಡು, ಎಲ್ಲರೂ ಗುಂಪುಕೂಡಿ ದೊರೆಗಳನ್ನು ಸುತ್ತಿಕೊಂಡರು. ಆಗ ದೊರೆಗಳು ತಮ್ಮ ಸಾಧಕದ ಚಾತುರ್ಯದಿಂದ ಪಟ್ಟವನ್ನು ತಿರುಹಿ, ತಲೆ

ಗಳನ್ನು ಹೊಡೆದು, ಈ ಪೆಟ್ಟನ್ನು ತಪ್ಪಿಸಿಕೊಂಡು ಸಮೀಪಕ್ಕೆ ನುಸುಳಿಕೊಂಡು ಬಂದ ಕೆಲವರನ್ನು ತಮ್ಮ ಭುಜಬಲದಿಂದ ಎರಡು ಕಂಕಳುಗಳಲ್ಲಿಯೂ ಇರುಕಿಸಿಕೊಂಡು ಕತ್ತುಗಳನ್ನು ಮುರಿದು, ಮತ್ತೆ ಕೆಲವರನ್ನು ಕಾಲಿನಿಂದ ಒದ್ದು ನಿರ್ಜೀವವಾಗುವಂತೆ ಕೆಡಹಿದರು. ಉಳಿದ ಕೆಲಕೆಲವರು ಓಡಿಹೋಗುವುದಕ್ಕೆ ಅವಕಾಶವಿಲ್ಲದೆ ಆಯುಧಗಳನ್ನು ಕೆಳಕ್ಕೆ ಹಾಕಿ ಪಾದಾಕ್ರಾಂತರಾದರು. ಒಡೆಯರು ಅವರನ್ನು ಜೀವದಿಂದ ಬಿಟ್ಟು, ಬಾಗಿಲನ್ನು ಮುದ್ರೆಮಾಡಿ ಹೊರಗೆ ಕಾದಿದ್ದ ಗೊಲ್ಲರು ಮುಂತಾದವರನ್ನು ಕೂಗಿ ಕರೆದು, ಸತ್ತವರ ಹೆಣಗಳನ್ನು ಹೊರಕ್ಕೆ ಸಾಗಿಸಿ, ಉಳಿದವರನ್ನು ಮರುದಿನ ಸಭೆಗೆ ಕರತರುವಂತೆ ಆಜ್ಞಾಪಿಸಿದರು.

ಮಾರನೆ ದಿನ ಸಭೆಯಲ್ಲಿ ವಿಚಾರಿಸಿದಾಗ, ಅವರು ತಿರುಚನಾಪಳ್ಳಿಯ ಅರಸನಿಂದ ಪ್ರೇರೇಪಿತರಾಗಿ ಬಂದರೆಂದು ತಿಳಿಯಿತು. ಆಗ ದೊರೆಗಳು "ನೀವು ತಿರುಚನಾಪಳ್ಳಿಗೆ ಹೋಗಿ ಇಲ್ಲಿ ನಡೆದದ್ದನ್ನು ನಿಮ್ಮ ದೊರೆಗೆ ತಿಳಿಸಿ, ಹೋಗಿ" ಎಂದು ಕಳುಹಿಸಿಬಿಟ್ಟರು.

[ವಂಶರತ್ನಾಕರ ಪುಟ ೮೧; ವಂಶಾವಳಿ ಪುಟ ೭೭-೭೮]

# ೧೯ ಪಿರಿಯ ಪಟ್ಟಣದ ವೀರರಾಜ

ಮೈಸೂರಿಗೆ ಪಶ್ಚಿಮಕ್ಕೆ ಕೊಡಗಿನ ಕಡೆಗೆ ಪಿರಿಯ ಪಟ್ಟಣವೆಂಬಲ್ಲಿ ಬಲವಾದ ಕೋಟೆಯನ್ನು ಕಟ್ಟಿಕೊಂಡು ಕೆಲವರು ದೊರೆಗಳು ಆಳುತ್ತಿದ್ದರು. ಪಿರಿಯರಾಜನೆಂಬಾತನೇ ಪೂರ್ವದಲ್ಲಿ ಮಣ್ಣಿನಿಂದಲೇ ಕಟ್ಟಿದ್ದ ಕೋಟೆಯನ್ನು ಕಲ್ಲಿನಿಂದ ಕಟ್ಟಿಸಿ ಪೇಟೆಯನ್ನು ಸ್ಥಾಪಿಸಿದನು. ಆ ಕಾರಣದಿಂದ ಅದಕ್ಕೆ ಪಿರಿಯಪಟ್ಟಣವೆಂದು ಹೆಸರು.

ಕಂಠೀರವ ಒಡೆಯರ ಕಾಲದಲ್ಲಿ ಅಲ್ಲಿ ವೀರರಾಜನೆಂಬಾತನು ಆಳುತ್ತಿದ್ದನು. ಆತನನ್ನು ಗೆಲ್ಲಲು ಮೊದಲು ದಳವಾಯಿಗಳು ಹೋಗಿದ್ದು, ಆತನು ಬಹಳವಾದ ತೊಂದರೆ ಕೊಡಲು ಹಿಂತಿರುಗಿ ಒಂದು ರಾಜರಿಗೆ ಅರಿಕೆ ಮಾಡಿದರು. ಕಂಠೀರವ ಒಡೆಯರೇ ಸ್ವಂತವಾಗಿ ಮುತ್ತಿಗೆಯನ್ನು ನಡೆಸಲು ಹೊರಟರು. ಛಲದಿಂದ ಮುತ್ತಿಗೆಯನ್ನು ಮುಂದುವರಿಸಿದರು. ವೀರರಾಜನು ಬಹಳ ಶೌರ್ಯದಿಂದ ಕಾದಿದರೂ ಶತ್ರುಗಳು ಲಗ್ಗೆ ಹತ್ತುವುದನ್ನು ನಿಲ್ಲಿಸಲಾಗದೆ ಹೋಯಿತು. ಆಗ ವೀರರಾಜನು ವೀರಸಂಕಲ್ಪವನ್ನು ಮಾಡಿ ಅರಮನೆಗೆ ಹೋಗಿ ತನ್ನ ಹೆಂಡಿರು ಮಕ್ಕಳನ್ನು ತನ್ನ ಕೈಯಿಂದಲೇ ಸಂಹರಿಸಿ ತರುವಾಯ ತಾನು ಹುಚ್ಚನಂತೆ ಕೋಟೆಯ ಹೊರವಳಯದಲ್ಲಿ ನುಗ್ಗಿ ಕಾದಾಡುತ್ತ ಮಡಿದನು.

ಅನಂತರ ಕೋಟೆಯು ಕಂಠೀರವ ಒಡೆಯರಿಗೆ ಸುಲಭವಾಗಿ ಹಸ್ತಗತವಾಯಿತು.

[ವಂಶರತ್ನಾಕರ ಪುಟ ೭೦; ವಂಶಾವಳಿ ಪುಟ ೭೧ ಹೊಸ ಗೆಜಟಿಯರ್ ಸಂ. ೫, ಪುಟ ೮೦೦]

# ೨೦ ವಿಶಾಲಾಕ್ಷ ಪಂಡಿತ

ದೊಡ್ಡದೇವರಾಜ ಒಡೆಯರ ತರುವಾಯ ಚಿಕ್ಕದೇವರಾಜ ಒಡೆಯರು ಪ್ರಸಿದ್ಧರಾಗಿ ಆಳಿದರಷ್ಟೆ. ಈ ಚಿಕ್ಕದೇವರಾಜ ಒಡೆಯರು ಪಟ್ಟವನ್ನೇರುವುದಕ್ಕೆ ಮೊದಲು ಹಂಗಳದಲ್ಲಿದ್ದು ಜೈನ ಮತಸ್ಥನೂ ಪ್ರಖ್ಯಾತ ಪಂಡಿತನೂ ಆಗಿದ್ದ ಯಳಂದೂರಿನ ವಿಶಾಲಾಕ್ಷ ಪಂಡಿತನಲ್ಲಿ ವ್ಯಾಸಂಗ ಮಾಡುತ್ತಿದ್ದರು. ಪಟ್ಟವಾದ ಮೇಲೆ ಗುರುವಿನಮೇಲಿನ ಭಕ್ತಿಯಿಂದ ಒಡೆಯರು ವಿಶಾಲಾಕ್ಷ ಪಂಡಿತನನ್ನೇ ಮಂತ್ರಿಯಾಗಿ ನೇಮಿಸಿಕೊಂಡರು.

ಅದುವರೆಗೂ ಅರಮನೆಯಲ್ಲಿ ವೀರಶೈವ ಮತಸ್ಥರ ಮತ್ತು ಅವರ ಗುರುಗಳಾದ ಜಂಗಮರ ಪ್ರಭಾವವೇ ಹೆಚ್ಚಾಗಿತ್ತು. ಜೈನ ಮತಕ್ಕೂ ವೀರಶೈವ ಮತಕ್ಕೂ ಬಿಜ್ಜಳ ಬಸವೇಶ್ವರರ ಕಾಲದಿಂದಲೂ ವಿರೋಧ. ಆದ್ದರಿಂದ ಜಂಗಮರಿಗೆ ವಿಶಾಲಾಕ್ಷ ಪಂಡಿತನು ಮಂತ್ರಿಪದವಿಗೆ ಬಂದುದು ಸರಿಬೀಳಲಿಲ್ಲ. ಪ್ರಕಾಶವಾಗಿ ವಿರೋಧವನ್ನು ತೋರದಿದ್ದರೂ ಈ ಜಂಗಮರು ರಹಸ್ಯವಾಗಿ ಸಂಧಾನಮಾಡಿ ಪಂಡಿತನನ್ನು ಅರಮನೆಯಿಂದ ತಪ್ಪಿಸಬೇಕೆಂದು ಯೋಚನೆ ಮಾಡುತ್ತಿದ್ದರು.

ಇತ್ತ ರಾಜರೂ ಮಂತ್ರಿಯೂ ಇಬ್ಬರೂ ಸೇರಿ ರಾಜಾದಾಯವನ್ನು ಹೆಚ್ಚಿಸಲು ಅನೇಕ ಉಪಾಯಗಳನ್ನು ಯೋಚಿಸಿದರು. ನೆಲಗಂದಾಯವನ್ನು ಹೆಚ್ಚಿಸಿದ್ದಲ್ಲದೆ ಅನೇಕ ತೆರಿಗೆಗಳನ್ನು ಹೊಸದಾಗಿ ಗೊತ್ತುಮಾಡಿದರು. ರೈತರಲ್ಲಿಯೂ ಇತರ ಸಾಮಾನ್ಯ ಪ್ರಜೆಯಲ್ಲಿಯೂ ಇದರಿಂದ ಅತೃಪ್ತಿಯು ತೋರಿತು. ಇದೇ ಸಮಯವೆಂದು ಜಂಗಮರು ಅಲ್ಲಲ್ಲಿ ಸಂಚರಿಸುತ್ತ ವಿಷದ ಬೀಜವನ್ನು

ಚೆಲ್ಲುತ್ತ ಜನರು ದಂಗೆಯೇಳುವಂತೆ ಪ್ರೇರೇಪಿಸಲಾರಂಭಿಸಿದರು.
ಬೇಹಿನವರು ಈ ಸುದ್ದಿಯನ್ನು ದಿನೇ ದಿನೇ ಸನ್ನಿಧಾನದಲ್ಲಿ ಅರುಹು
ತ್ತಿರಲು ಒಡೆಯರವರು "ಈ ಜಂಗಮರು ಬಹಳ ಕೊಬ್ಬಿರುತ್ತಾರೆ.
ಇವರಿಗೆ ಆಸ್ಪದ ಕೊಟ್ಟರೆ ರಾಜ್ಯಕ್ಕೆ ವಿಪತ್ತನ್ನು ತಂದಿಡುವುದರಲ್ಲಿ
ಸಂದೇಹವಿಲ್ಲ. ಆದ್ದರಿಂದ ಅಂಕುರದಲ್ಲಿಯೇ ಇದನ್ನು ನಿರ್ಮೂ
ಲನ ಮಾಡಿಬಿಡಬೇಕು" ಎಂದು ಜಂಗಮರನ್ನು ಅಡಗಿಸಲು
ಒಂದು ಉಪಾಯವನ್ನು ಸಿದ್ಧಗೊಳಿಸಿದರು.

ಮೊದಲು ರಾಜ್ಯದಲ್ಲಿದ್ದ ಜಂಗಮರೆಲ್ಲರೂ ಸಂಜನಗೂಡಿನಲ್ಲಿ
ಸಭೆ ಸೇರತಕ್ಕದ್ದೆಂದು ಎಲ್ಲೆಲ್ಲಿಯೂ ಸಾರಿದರು. ರಾಜರು ಸಭೆಗೆ
ಕರೆಸಿದಾಗ ಹೋಗುವುದಕ್ಕೇನು? ಪಂಡಿತರಾದವರೂ ಪಂಡಿತ
ರೆಂದು ವೇಷಹಾಕಿದವರೂ ಗೊತ್ತಾದ ದಿನ ಸಂಜನಗೂಡಿಗೆ ಹೊರ
ಟರು. ಅಲ್ಲಿ ರಾಜರು ಇವರ ಔತಣಕ್ಕೆಂದು ಕಾಣುವ ಹಾಗೆ
ಅನೇಕ ಗುಡಾರಗಳನ್ನು ನಿರ್ಮಿಸಿದ್ದರು. ಸ್ವತಃ ರಾಜರೇ ಒಂದು
ಗುಡಾರದಲ್ಲಿ ಭದ್ರಾಸನದಲ್ಲಿ ಕುಳಿತು ಒಬ್ಬೊಬ್ಬರಾಗಿ ಬಂದ ಜಂ
ಗಮರನ್ನು ಕಂಡು "ಒಳಗೆ ದಯಮಾಡಿ" ಎಂದು ಒಳಕ್ಕೆ ಕಳು
ಹಿಸುತ್ತಿದ್ದರು. ಒಳಗೆ ಫಲಾಹಾರದ ವ್ಯವಸ್ಥೆಯು ಎಂದಿನಂತೆ
ನಡೆದಿರುತ್ತದೆಂದು ಜಂಗಮರೊಬ್ಬೊಬ್ಬರಾಗಿ ಆ ಗುಡಾರವನ್ನು
ಬಿಟ್ಟು ಪಕ್ಕದ ಗುಡಾರಕ್ಕೂ ಅಲ್ಲಿಂದ ಒಂದು ಅಂಗಳಕ್ಕೂ ಹೊರಡು
ತ್ತಿದ್ದರು. ಆ ಅಂಗಳದ ಸುತ್ತಲೂ ಪಟದಿಂದ ನಿರ್ಮಿತವಾದ
ಗೋಡೆಯಿದ್ದು ಮಧ್ಯೆ ಮಾತ್ರ ಬರೀ ಹಳ್ಳವಾಗಿತ್ತು. ಇದ್ದುದು
ಒಂದೇ ಬಾಗಿಲು. ರಾಜರನ್ನು ಕಂಡು ಜಂಗಮರು ಒಬ್ಬೊಬ್ಬ
ರಾಗಿ ಈ ಬಾಗಿಲಿನಲ್ಲಿ ಪ್ರವೇಶಮಾಡಿದೊಡನೆಯೇ ಬಾಗಿಲ ಹಿಂದೆ
ಸದ್ದಿಲ್ಲದೆ ನಿಂತಿದ್ದ ಆಯುಧಪಾಣಿಗಳಾದ ಇಬ್ಬರು ಭಟರು ತಮ್ಮ
ಕತ್ತಿ ಕಠಾರಿಗಳಿಂದ ಒಂದೇ ಏಟಿಗೆ ಸಂಹರಿಸಿ ದೇಹ ಬೀಳುವುದಕ್ಕೆ
ಮೊದಲೇ ಹಳ್ಳಕ್ಕೆ ನೂಕಿಬಿಡುತ್ತಿದ್ದರು. ಇನ್ನೂರು ಮುನ್ನೂರು
ಮಂದಿ ಜಂಗಮರಿಗೂ ಇದೇ ಗತಿಯಾಯಿತು. ಜಂಗಮರ
ಮುಖಂಡರೆಲ್ಲರೂ ಈ ರೀತಿಯಾಗಿ ಹತರಾದರು.

ಅದೇ ದಿನ ರಾಜಾಜ್ಞೆಯಿಂದ ರಾಜ್ಯದಲ್ಲೆಲ್ಲಿಯೂ ರಾಜಭಟರು ಆಯುಧಪಾಣಿಗಳಾಗಿ ಸಂಚರಿಸುತ್ತಲೂ ತುಂಟತನ ಮಾಡಿದವರನ್ನು ಕಡಿದುಹಾಕುತ್ತಲೂ ಇದ್ದರು. ಎಲ್ಲ ಪ್ರಜೆಗಳ ಮನಸ್ಸಿನಲ್ಲಿಯೂ ಭೀತಿಯು ನಾಟಿತು. ಜಂಗಮರಲ್ಲಿ ಎಲ್ಲಿಯೋ ಹಲಕೆಲಬರು ಮಾತ್ರ ತಪ್ಪಿಸಿಕೊಂಡು ತಲೆಯನ್ನು ಮರೆಸಿಕೊಂಡು ಇರುತ್ತಿದ್ದರು.

ಘೋರವಾದ ಈ ಕೊಲೆಗೆ ಯಳಂದೂರು ಪಂಡಿತನೇ ಕಾರಣನೆಂದು ಅನೇಕರು ಆಡಿಕೊಳ್ಳುತ್ತಿದ್ದರು. ಸೆರೆಯಲ್ಲಿದ್ದುಕೊಂಡು ದುಃಖವನ್ನೂ ರೋಷವನ್ನೂ ಅನುಭವಿಸುತ್ತಿದ್ದ ಜಂಗಮರು ವಿಶಾಲಾಕ್ಷ ಪಂಡಿತನನ್ನು ಹೇಗಾದರೂ ಕೊನೆಗಾಣಿಸಬೇಕೆಂದು ಹೊಂಚುತ್ತಿದ್ದರು. ಹೀಗಿರಲು ಒಡೆಯರು ಜೈನಮತ ದೀಕ್ಷೆಯನ್ನು ತೆಗೆದುಕೊಳ್ಳುವರೆಂಬ ವದಂತಿಯೂ ಹರಡಲು ಜಂಗಮರೂ ಅವರ ಅನುಚರರೂ ಸಾಹಸವನ್ನೇ ಮಾಡಬೇಕೆಂದು ಒಂದು ದಿನ ಸಂಜೆಯ ಮಸುಕಿನಲ್ಲಿ ಪಂಡಿತನು ತನ್ನ ಮನೆಯನ್ನು ಬಿಟ್ಟು ಅರಮನೆಗೆ ಹೊರಡುತ್ತಿದ್ದ ವೇಳೆಯಲ್ಲಿ ದಾರಿಯಲ್ಲಿ ಅವಿತಿದ್ದು ಮೇಲೆ ಬಿದ್ದು ಆತನನ್ನು ಚೆನ್ನಾಗಿ ಹೊಡೆದು ಸತ್ತನೆಂದು ಬಿಟ್ಟುಬಿಟ್ಟು ಓಡಿಹೋದರು. ಪಂಡಿತನು ಇನ್ನೂ ಸತ್ತಿರಲಿಲ್ಲ; ಕೆಳಕ್ಕೆ ಬಿದ್ದು ಪೆಟ್ಟು ತಿಂದು ಕೂಗಿಕೊಳ್ಳುತ್ತಿದ್ದನು. ಸ್ವಲ್ಪಕಾಲದಲ್ಲಿ ಊಳಿಗದವರು ಕೆಲವರು ಕೂಗನ್ನು ಕೇಳಿ ಬಂದು ಆತನನ್ನು ಹೊತ್ತುಕೊಂಡು ಹೋಗಿ ಆತನ ಮನೆಯಲ್ಲಿ ಮಂಚದಮೇಲೆ ಮಲಗಿಸಿದರು. ಅರಸರಿಗೆ ಸಮಾಚಾರ ತಲುಪಿತು. "ಆಹಾ! ಏನು ಪ್ರಮಾದವಾಯಿತು!" ಎಂದುಕೊಂಡು ಒಡೆಯರೇ ಪಂಜಿನವರನ್ನು ಕರೆದುಕೊಂಡು ರಾತ್ರಿಯಾದರೂ ತಮ್ಮ ಗುರುವಿನ ಮನೆಗೆ ಬಂದರು. ಪಂಡಿತನು ಅವರು ಬರುವವರೆಗೂ ಪ್ರಾಣವನ್ನು ಹಿಡಿದಿದ್ದು ಅವರು ಬಂದೊಡನೆ ಸಮಾಚಾರವನ್ನು ಸೂಕ್ಷ್ಮವಾಗಿ ತಿಳುಹಿಸಿ "ಇನ್ನು ನಾನು ಬದುಕುವ ಆಸೆಯೇನೂ ಇಲ್ಲ; ತಾವಿನ್ನೂ ಚಿಕ್ಕವರು.

ನನ್ನ ಬಳಿಕ ನನ್ನ ಸ್ಥಾನದಲ್ಲಿ ನಿಮ್ಮ ಸಹಾಧ್ಯಾಯಿಯಾದ ತಿರುಮಲಾರ್ಯನನ್ನು ನೇಮಕ ಮಾಡಿರಿ. ದೇವರು ನಿಮಗೆ ಮಂಗಳವನ್ನು ಮಾಡಲಿ" ಎಂದು ಪ್ರಾಣವನ್ನು ಬಿಟ್ಟನು.

ಒಡೆಯರೂ ಸಹ ಹಾಗೆಯೇ ತಿರುಮಲಾರ್ಯನನ್ನೇ ಮಂತ್ರಿ ಪದವಿಯಲ್ಲಿ ನಿಯಮಿಸಿದರು.

[ವಿಲ್ಕ್ಸ್, ಸಂ. ೧, ಪುಟ ೫೪, ೫೫, ೧೨೪, ೧೨೮-೧೨೯ ; ಹೊಸ ಗೆಜಟಿಯರ್ ಸಂ. ii, ಭಾಗ ೪, ಪುಟ......, ಸಂ. v, ಪುಟ ೮೭೧, ೮೭೨ ; ವಂಶರತ್ನಾಕರ ಪುಟ ೧೪೬, ವಂಶಾವಳಿ ಪುಟ ೧೦೫]

# ೨೧ ಪಂಜುಗಳ ಯುದ್ಧ

ಚಿಕ್ಕದೇವರಾಜ ಒಡೆಯರು ರಾಜರಾದಮೇಲೆ ಮರಾಟೆಯವರು ದಂಡೆತ್ತಿಬರುವುದಕ್ಕೆ ಮೊದಲಾಯಿತು. ಪಟ್ಟಕ್ಕೆ ಬಂದ ಮೇಲೆ ರಾಜರು ತಮ್ಮ ದಳವಾಯಿ ಕುಮಾರಯ್ಯನನ್ನೂ ಆತನ ಮಗ ದೊಡ್ಡಯ್ಯನನ್ನೂ ತಿರುಚನಾಪಳ್ಳಿಯನ್ನು ಗೆಲ್ಲಲು ಕೊಟ್ಟು ಕಳುಹಿಸಿದ್ದರು. ಈಗ ಅಕಸ್ಮಾತ್ತಾಗಿ ಮರಾಟೆಯವರ ಒಂದು ದಂಡು ನುಗ್ಗಿ ಬಂದು ಶ್ರೀರಂಗಪಟ್ಟಣದ ಸಮೀಪದಲ್ಲಿ ಕಲಸಗೆರೆ ಕೊತ್ತತ್ತಿ ಎಂಬ ಗ್ರಾಮದ ಬಳಿ ಮೈದಾನದಲ್ಲಿ ಇಳಿದುಕೊಂಡರು.

ಒಡೆಯರು ಆಗಲೇ ದೊಡ್ಡಯ್ಯನನ್ನು ಕೆಲವು ಸೇನೆಯೊಡನೆ ಶ್ರೀರಂಗಪಟ್ಟಣಕ್ಕೆ ಕಳುಹಿಸುವಂತೆ ದಳವಾಯಿ ಕುಮಾರಯ್ಯನಿಗೆ ಹೇಳಿ ಕಳುಹಿಸಿದ್ದರು. ದೊಡ್ಡಯ್ಯನು ಕಾವೇರೀಪುರದ ಕಣಿವೆಯ ಮಾರ್ಗವಾಗಿ ಬರುತ್ತಿದ್ದನು. ಅಷ್ಟರಲ್ಲಿ ಮರಾಟೆಯವರ ದಂಡು ಬಂದು ಪ್ರತ್ಯಕ್ಷವಾಗಲು ರಾಜರು ದೊಡ್ಡಯ್ಯನಿಗೆ "ಈ ಕಲಸಗೆರೆ ಕೊತ್ತತ್ತಿ ಗ್ರಾಮದ ಬಳಿ ಇಳಿದಿರುವ ಮರಾಟೆಯವರ ಸೈನ್ಯದ ಸಮೀಪಕ್ಕೆ ಯಾರೂ ಅರಿಯದಂತೆ ಸಂಚರಿಸತಕ್ಕದ್ದು; ಅಲ್ಲಿ ಸೇರಿದ ಕೂಡಲೆ ನಮ್ಮ ದಂಡಿನಲ್ಲಿರುವ ೨–೩ ಸಾವಿರ ದನಗಳ ಕೊಂಬುಗಳಿಗೆ ಅಪಾಯವಿಲ್ಲದ ಹಾಗೆ ಪಂಜುಗಳನ್ನು ಕಟ್ಟಿ, ಮೂರು ಕಡೆಯಿಂದಲೂ ಸೈನ್ಯವು ತಮ್ಮನ್ನು ಸುತ್ತಿಕೊಂಡಿತೆಂಬ ಭ್ರಾಂತಿಯು ಮರಾಟೆಯವರ ಮನಸ್ಸಿನಲ್ಲಿ ಹುಟ್ಟುವಂತೆ ಅವುಗಳನ್ನು ರಾತ್ರಿಯಲ್ಲಿ ಚದರಿಸತಕ್ಕದ್ದು; ಅವರು ಭ್ರಾಂತರಾದ ವೇಳೆಯಲ್ಲಿ ನೀವು ಅವರನ್ನು ತಾಗತಕ್ಕದ್ದು! ಸಮಯಕ್ಕೆ ಸಹಾಯಮಾಡುವಂತೆ ಶ್ರೀರಂಗಪಟ್ಟಣದಿಂದ ಬೇರೊಂದು ಸೈನ್ಯವನ್ನು ಕಳುಹಿಸುತ್ತಿ

ದ್ದೇವೆ'' ಎಂದು ಆಜ್ಞಾಪಿಸಿದನು. ದೊಡ್ಡಯ್ಯ ಮುಂತಾದ ಸೇನಾನಾಯಕರು ಅದರಂತೆಯೇ ದನಗಳಿಗೆ ಪಂಜುಗಳನ್ನು ಕಟ್ಟಿಸಿ ಮೂರು ದಿಕ್ಕಿಗೂ ಓಡಿಸಿ, ಉಳಿದ ದಿಕ್ಕಿನಿಂದ ಸಂಹರಿಸುತ್ತ ಮರಾಟಿಯವರ ಮೇಲೆ ಬಿದ್ದರು. ಮರಾಟಿಯವರಿಗೆ ದಿಕ್ಕುತೋಚದಂತಾಗಿ ತಾರುಮಾರಾಗಿ ಪಲಾಯನಮಾಡಿದರು. ಬೆಳಕು ಹರಿದಾಗ ಅವರ ಉಗ್ರಾಣವೆಲ್ಲವೂ ದೊಡ್ಡಯ್ಯನ ಕೈಗೆ ಬಂತು. ಮರಾಟಿಯವರ ನಾಯಕರ ತಲೆಗಳನ್ನು ಕತ್ತರಿಸಿ ಸೈನಿಕರು ದೊಡ್ಡಯ್ಯನಿಗೆ ಸಮರ್ಪಿಸಿದರು. ದೊಡ್ಡಯ್ಯನು ಆ ತಲೆಗಳನ್ನು ತೆಗೆಸಿಕೊಂಡು ದೊರೆಗಳ ಸನ್ನಿಧಿಗೆ ಬಂದು ಅಡ್ಡಬಿದ್ದು ಎಲ್ಲ ಸಂಗತಿಯನ್ನೂ ವಿನ್ನಯಿಸಿದನು. ಒಡೆಯರು ಆ ತಲೆಗಳಲ್ಲಿ ಶ್ರೀರಂಗಪಟ್ಟಣದ ಕೋಟೆ ಬಾಗಲಿಗೊಂದನ್ನೂ ಮೈಸೂರು ಕೋಟೆ ಬಾಗಲಿಗೊಂದನ್ನೂ ಕಟ್ಟಿಸಿದರು. ದೊಡ್ಡಯ್ಯ ಮುಂತಾದ ಸೇನಾನಾಯಕರಿಗೆ ಬಹಳ ಸನ್ಮಾನವು ದೊರಕಿತು.

[ವಂಶರತ್ನಾಕರ, ಪುಟ ೧೦೫, ವಂಶಾವಳಿ ೧೧೪-೫, ವಿಲ್ಕ್ಸ್ ಪುಟ ೬೧]

# ೨೨ ಶ್ವೇತವರಾಹಸ್ವಾಮಿಯ ವಿಗ್ರಹ

ಚಿಕ್ಕದೇವರಾಜಒಡೆಯರು ರಾಜ್ಯವನ್ನಾಳುತ್ತಿದ್ದಾಗ ತಂಜಾವೂರಿನಲ್ಲಿ ವೆಂಕೋಜಿಯ ಮಗ ಸಾಹುಜಿ ಎಂಬಾತನು ಆಳುತ್ತಿದ್ದನು. ಒಂದು ದಿನ ಈ ಸಾಹುಜಿಯು "ಈ ಚಿಕ್ಕದೇವರಾಜನದು ಎಷ್ಟು ಗರ್ವ! ಅವನ ಸಂಸ್ಥಾನದಲ್ಲಿ ಮೇಲುಕೋಟೆಯೊಂದು ಬಿನಾ ಪ್ರಸಿದ್ಧ ವಿಷ್ಣುಕ್ಷೇತ್ರವಿನ್ನಾವುದೂ ಇಲ್ಲ. ನಮ್ಮ ದೇಶದಲ್ಲಾದರೋ ಶ್ರೀರಂಗ, ಶ್ರೀಮುಷ್ಣ, ಕುಂಭಕೋಣ, ಕಂಚಿ, ಮನ್ನಾರಗುಡಿ ಮುಂತಾದ ವಿಷ್ಣುಕ್ಷೇತ್ರಗಳೇ ಅಲ್ಲದೆ ಚಿದಂಬರ, ಮಧ್ಯಾರ್ಜುನ, ಮಧುರೆ, ರಾಮೇಶ್ವರ ಮುಂತಾದ ಶಿವಕ್ಷೇತ್ರಗಳೂ ಇನ್ನೂ ಅನೇಕ ಪುಣ್ಯಸ್ಥಳಗಳೂ ಇವೆ. ಇವನದೇನು ಹೆಚ್ಚು—ಇವನ ಸಣ್ಣ ರಾಜ್ಯದ್ದೇನು ದೊಡ್ಡಸ್ತಿಕೆ?" ಎಂದು ಹಂಗಿಸಿ ಮಾತನಾಡಿದ್ದನು. ಈ ವರ್ತಮಾನವನ್ನು ಕೇಳಿ ಚಿಕ್ಕದೇವರಾಜಒಡೆಯರು ಖಿನ್ನತೆಯನ್ನೂ ಕೋಪವನ್ನೂ ಧರಿಸಿ ಯೋಚಿಸಿ, ಕಡೆಗೆ ಉಪಾಯದಿಂದ ಶ್ರೀಮುಷ್ಣದಲ್ಲಿದ್ದ ಶ್ವೇತವರಾಹಸ್ವಾಮಿಯ ಮೂರ್ತಿಯನ್ನು ತರಿಸಿಕೊಳ್ಳಬೇಕೆಂದು ನಿಶ್ಚಯಿಸಿದರು. ಕೂಡಲೆ ಜಾಣರೂ ಯುಕ್ತಿವಂತರೂ ಆಗಿದ್ದ ಜನರು ಕೆಲವರನ್ನು ಕರೆಯಿಸಿ, ಅವರಿಗೆ ದ್ರವ್ಯವನ್ನು ಕೊಟ್ಟು, ರಹಸ್ಯವಾಗಿ ಆ ವಿಗ್ರಹವನ್ನು ತರಲು ಕೊಟ್ಟು ಕಳುಹಿಸಿದರು. ಅವರು ಶ್ರೀಮುಷ್ಣಕ್ಕೆ ಹೋಗಿ ಅಲ್ಲಿಯ ಅರ್ಚಕ ಮುಂತಾದವರಿಗೆ ಹಣವನ್ನು ಕೊಟ್ಟು, ರಾತ್ರಿ ವೇಳೆಯಲ್ಲಿ ಯಾರೂ ಅರಿಯದಂತೆ ಆ ಶ್ವೇತವರಾಹಸ್ವಾಮಿಯ ಪ್ರತಿಮೆಯನ್ನು ಬಿಜಮಾಡಿಸಿಕೊಂಡು ಶ್ರೀರಂಗಪಟ್ಟಣವನ್ನು ಸೇರಿದರು. ಆಗ ದೊರೆಗಳು ಆನಂದಪಟ್ಟು ಅರಮನೆಯ ಬಲಗಡೆಯಲ್ಲಿ

ವಿಚಿತ್ರವಾದ ಒಂದು ಗುಡಿಯನ್ನು ಕಟ್ಟಿಸಿ ಅಲ್ಲಿ ಅದನ್ನು ಪ್ರತಿಷ್ಠೆ ಮಾಡಿಸಿದರು.

[ವಂಶರತ್ನಾಕರ ೧೧೦-೧೧೧, ಮತ್ತು ವಂಶಾವಳಿ ಪುಟ ೧೩೯-೧೪೦. ವಿಚಾರಕ್ಕೆ ಹೊಸ ಗೆಜಟಿಯರ್ ಸಂ. ೨, ಭಾಗ ೪ ಮತ್ತು ಡಾ|| ಯಸ್. ಕೃಷ್ಣಸ್ವಾಮಯ್ಯಂಗಾರ್ಯರ. ಬರೆದ ಲೇಖನಗಳನ್ನು ನೋಡಬೇಕು.]

# ೨೩ ರೈತರ ಬಂಡಾಯ

ಶ್ರೀರಂಗಪಟ್ಟಣವು ಕೈಸೇರಿದ ಮೇಲೆ ಒಡೆಯರ ರಾಜ್ಯವು ಕ್ರಮವಾಗಿ ಬೆಳೆಯಿತು; ರಾಜ್ಯವು ಹೆಚ್ಚಿದಂತೆ ವೆಚ್ಚವೂ ಹೆಚ್ಚಿತು. ರಾಜಒಡೆಯರು ಉಪಾಯದಿಂದ ನಿರ್ವಹಿಸುತ್ತಿದ್ದರು. ಕಂಠೀರವ ಒಡೆಯರು ಹಣದ ತೊಂದರೆ ಒಂದಾಗ ಒಂದು ಉಪಾಯವನ್ನು ಮಾಡಿದರು; ಧನಿಕರೆಂದು ಹೆಸರಾದವರನ್ನು ಹಿಡಿದು ಅವರಿಂದ ಹೆಚ್ಚಾದ ದ್ರವ್ಯವನ್ನು ತೆಗೆದುಕೊಳ್ಳುತ್ತಿದ್ದರು. ಅರಸರು ಬಲಿಷ್ಠರಾಗಿದ್ದುದರಿಂದ ಅವರ ವಿರೋಧವನ್ನು ಕಟ್ಟಿಕೊಳ್ಳುವುದಕ್ಕೆ ಅಂತಹವರು ಹೆದರುತ್ತಿದ್ದರು. ಚಿಕ್ಕದೇವರಾಜ ಒಡೆಯರಿಗೆ ರಾಜ್ಯಭಾರದಲ್ಲಿ ಬೊಕ್ಕಸವನ್ನು ತುಂಬಬೇಕೆಂಬುದು ಬಲವಾದ ಆಸೆಯಾಯಿತು.

ಕಾಲಕಳೆದಂತೆ ಈ ದೊರೆಗೆ ಹಣದ ಯೋಚನೆಯೇ ಬಹಳವಾಯಿತು. ರಾಜಾದಾಯ ಹೆಚ್ಚುವಂತೆ ನೋಡಲು ಈ ದೊರೆಗಳು ನೆಲಗಂದಾಯವನ್ನು ಹೆಚ್ಚಿಸಿದರು. ಆಗ ಕೆಲವು ರೈತರು "ಅರಮನೆಗೆ ಕೊಡತಕ್ಕ ಕಂದಾಯ, ವಾರದ ದಸಸ ಮುಂತಾದುವನ್ನು ನಾವು ಕೊಡುವುದಿಲ್ಲ. ಕಾಡಭೂಮಿಯನ್ನು ಬಸವಣ್ಣನು ಉಳುತ್ತಾನೆ. ದೇವೇಂದ್ರನು ಮಳೆಯನ್ನು ಕರೆಯುತ್ತಾನೆ, ನಾವು ಕಷ್ಟಪಟ್ಟು ಪೈರುಮಾಡಿ ನಿಮಗೇತಕ್ಕೆ ಕೊಡಬೇಕು" ಎನ್ನುತ್ತ ಕಂದಾಯವನ್ನು ಸಲ್ಲಿಸದೆ ದಂಗೆಯೇಳುವ ಯೋಚನೆಯಲ್ಲಿದ್ದರು. ಆಗ ಒಡೆಯರವರು ಮುಖ್ಯರಾದ ರೈತರನ್ನು ಹಿಡತರಿಸಿ ಶಿಕ್ಷೆಗೆ ಗುರಿಮಾಡಿಸಿದರು; ದಂಗೆಯು ಏಳುವುದಕ್ಕೆ ಮೊದಲೇ ಅಡಗಿಹೋಯಿತು.

ನೆಲಗಂದಾಯವೇ ಅಲ್ಲದೆ ಇತರ ಅನೇಕ ಮಾರ್ಗಗಳಲ್ಲಿ ಈ ದೊರೆಗಳು ಹಣವನ್ನು ಶೇಖರಮಾಡಿದರು. ನಿತ್ಯವೂ ೨೦೦೦ ವರಹ

ಗಳು ನಾಮತೀರ್ಥದ ವೇಳೆಗೆ ಅರಮನೆಗೆ ಸಂದಾಯವಾಗತಕ್ಕದ್ದೆಂದು ಕಟ್ಟಳೆಮಾಡಿದ್ದರು; ಎಂದಾದರೂ ಹಣ ಬರುವುದು ಸಾವಕಾಶವಾದರೆ ದೊರೆಗಳು ರಾಮಾಯಣ ಪಾರಾಯಣದಲ್ಲಿಯೇ ಕಾಲ ಕಳೆದು ೨೦೦೦ ವರಹ ಬಂದ ಬಳಿಕ ಅವುಗಳನ್ನು ಖಾಸಾ ಬೊಕ್ಕಸಕ್ಕೆ ಕಳುಹಿಸಿ ಅನಂತರ ಆರೋಗಣೆಯನ್ನು ಒಪ್ಪಿಸಿಕೊಳ್ಳುತ್ತಿದ್ದರು.

ಇದರಿಂದ ಇವರಿಗೆ ನೆರೆನಾಡುಗಳಲ್ಲಿ ಲೋಭಿಗಳೆಂಬ ಹೆಸರು ಸಾಧಾರಣವಾಯಿತು. ಮಧುರೆಯ ರಾಜ್ಯದಲ್ಲಿ ಚಿಕ್ಕದೇವರಾಜ ಒಡೆಯರ ಹೆಸರನ್ನು ಹಂಗಿಸುವಂತಹ ಹಾಡುಗಳು ಜನರ ಬಾಯಿಗಳಲ್ಲಿ ಆಡುತ್ತಿದ್ದುವು; ಏಕೆಂದರೆ ಮಧುರೆಯಲ್ಲಿ ಅದೇ ಕಾಲದಲ್ಲಿ ಆಳುತ್ತಿದ್ದ ಮಂಗಮ್ಮನೆಂಬಾಕೆಯು ಅನೇಕ ಧರ್ಮ ಕಾರ್ಯಗಳನ್ನು ಮಾಡಿಸಿ ಔದಾರ್ಯಕ್ಕೆ ಪ್ರಸಿದ್ಧಿಯಾಗಿದ್ದಳು. ಚಿಕ್ಕದೇವರಾಜ ಒಡೆಯರು ಹಣವನ್ನು ಸಂಪಾದನೆಮಾಡುವುದರಲ್ಲಿ ಇಂಗ್ಲೆಂಡಿನ ೭ನೆ ಹೆನ್ರಿಯಂತಿದ್ದರು. ಅವರಿಗೆ ಈರೀತಿ ಕೆಟ್ಟ ಹೆಸರು ಬಂದರೂ ಅವರು ಗಳಿಸಿದ ಹಣದಿಂದ ರಾಜ್ಯವು ಭದ್ರವಾಯಿತು.

[ವಂಶರತ್ನಾಕರ ಪುಟ ೧೨೧, ೧೨೪; ವಂಶಾವಳಿ ಪುಟ ೧೨೩, ೧೨೬; ಸತ್ಯನಾಥಯ್ಯರ್ರವರ ಮಧುರೆ ನಾಯಕರ ಚರಿತ್ರೆ ಮತ್ತು ಹೊಸ ಗೆಜೆಟಿಯರ್]

# ೨೪ ಶ್ರೀರಂಗಪಟ್ಟಣವಲ್ಲ, ಫಿರಂಗೀಪಟ್ಟಣ

ದೊಡ್ಡಕೃಷ್ಣರಾಜ ಒಡೆಯರವರು ಆಳುತ್ತಿದ್ದ ಕಾಲದಲ್ಲಿ ಮರಾಟಿ ಸರದಾರನೊಬ್ಬನು ಸಸೈನ್ಯನಾಗಿ ಶ್ರೀರಂಗಪಟ್ಟಣಕ್ಕೆ ಬಂದು ಮುತ್ತಿದನು. ಆ ಸಮಯದಲ್ಲಿ ಅವರ ದಂಡಿಗೆ ಶ್ರೀರಂಗಪಟ್ಟಣದ ಕೋಟೆಯ ಮೇಲಿನಿಂದ ಕೋವಿ, ಫಿರಂಗಿ, ಗುಂಡು, ಜಂಜಾಲು, ತುಪಾಕಿ, ಮಕರಡಿಬ್ಬಿ, ಜಬರಜಂಗಿ, ಬಾಣ ಮುಂತಾದುವುಗಳಿಂದ ಮೈಸೂರಿನ ಸೈನಿಕರು ಹೊಡೆಯುತ್ತಿರಲು, ಆ ಸರದಾರನು ತನ್ನ ಕಡೆ ಬಹಳ ಜನಗಳು ಹತರಾಗುತ್ತಿದ್ದುದನ್ನು ನೋಡಿ ಭಯದಿಂದ ಎದೆಗೆಟ್ಟು "ನಾವು ಕತ್ತಿಯಲ್ಲಿ ಯುದ್ಧಮಾಡುವವರು. ಇವರಾದರೋ ಮದ್ದುಗುಂಡಿನಿಂದ ಯುದ್ಧಮಾಡಿ, ನಮ್ಮ ಬಹು ಸೇನೆಯನ್ನು ಸಂಹರಿಸಿದರು. ಇದು ಶ್ರೀರಂಗಪಟ್ಟಣವಲ್ಲ, ಫಿರಂಗಿಪಟ್ಟಣವೆಂದು ತೋರುತ್ತದೆ" ಎಂದು ತನ್ನ ಸೇನಾಜನರ ಸಂಗಡ ಹೇಳಿ ಇವರ ಸಂಗಡ ಯುದ್ಧಮಾಡಬಾರದೆಂದು ಹೊರಟುಹೋದನು.

[ವಂಶರತ್ನಾಕರ ಪುಟ ೧೫೧ ; ವಂಶಾವಳಿ ಪುಟ ೧೬೦]

# ೨೫ ಕೈಲಾಗದ ಅರಸರು

ಚಿಕ್ಕದೇವರಾಜ ಒಡೆಯರ ತರುವಾಯ ಅವರ ಪುತ್ರರು ಕಂಠೀರವ ನರಸರಾಜರೆಂಬುವರು ಪಟ್ಟವನ್ನೇರಿದರು. ಇವರು ಜನ್ಮತಃ ಮೂಕರಾಗಿದ್ದರು. ತಂದೆಗೆ ಆಪ್ತನಾಗಿ ಮಂತ್ರಿ ಪದವಿಯಲ್ಲಿದ್ದ ತಿರುಮಲಾರ್ಯನು ಇರುವವರೆಗೂ ಆಡಳಿತವು ಭದ್ರವಾಗಿತ್ತು. ಆತನು ತೀರಿಹೋದ ಮೇಲೆ ಆಡಳಿತದಲ್ಲಿ ಬಿಗಿತಪ್ಪಿತು. ಮೂಕರಸರು ಆಳುತ್ತಿರುವಲ್ಲಿ ಅಧಿಕಾರಿಗಳಿಗೆ ಹಿಂದಿನಷ್ಟು ನಯಭಯಗಳಿರಲಿಲ್ಲ. ಆದರೂ ಚಿಕ್ಕದೇವರಾಜ ಒಡೆಯರ ಸೈನ್ಯವು ಇನ್ನೂ ಬಲವಾಗಿತ್ತು. ಮೂಕರಸರು ಹತ್ತು ವರ್ಷಕಾಲ ಅನುಭವಿಸಿದರು.

ಮೂಕರಸರ ತರುವಾಯ ದೊಡ್ಡಕೃಷ್ಣರಾಜ ಒಡೆಯರೆಂಬ ಅವರ ಮಕ್ಕಳು ದೊರೆಗಳಾದರು. ಇವರಿಗೆ ಕೋಪವು ಬಲು ಬೇಗ ಬರುತ್ತಿತ್ತು; ಕೋಪ ಬಂದಾಗ ನ್ಯಾಯಾನ್ಯಾಯಗಳನ್ನು ನೋಡದೆ ಎದುರಾದವರನ್ನು ಅತಿಯಾಗಿ ಹಿಂಸೆಗೆ ಗುರಿಮಾಡಿ ಕ್ರೌರ್ಯವನ್ನು ತೋರುತ್ತಿದ್ದರು; ಆದರೆ ಪರಕ್ಷಣವೇ ಅವರನ್ನು ಕರೆಸಿ ಬಹುಮಾನವನ್ನು ಮಾಡುತ್ತಿದ್ದರು. ಸ್ಥಿರಬುದ್ಧಿಯು ಈ ದೊರೆಗಿರಲಿಲ್ಲ; ಹೆಮ್ಮೆಯೂ ಲೋಲುಪ್ತಿಯೂ ಇದ್ದವು. ಹತ್ತೊಂಭತ್ತು ವರ್ಷಕಾಲ ರಾಜರಾಗಿದ್ದರೂ ಆಡಳಿತದ ವಿಚಾರಗಳನ್ನು ತಿಳಿಯಲು ಪ್ರಯತ್ನಿಸದೆ ಅವುಗಳೆಲ್ಲವನ್ನೂ ಮಂತ್ರಿಗಳಿಗೆ ಬಿಟ್ಟುಕೊಟ್ಟು ತಾವು ಸುಖಗಳಲ್ಲಿ ಮಗ್ನರಾಗಿ ತಮ್ಮ ಸಮಾನರೇ ಇಲ್ಲವೆಂದು ತಿಳಿದಿದ್ದರು. ಅಧಿಕಾರಿಗಳೂ ರಾಜರಿಗೆ ಬೇಕಾದ ಸುಖಗಳನ್ನೊದಗಿಸುತ್ತ ಅವರಿಗೆ ರಾಜಕಾರ್ಯಗಳ ತೊಂದರೆಕೊಡದೆ ತಾವೇ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ರಾಜರು

ಕೇಳಿದಷ್ಟು ಹಣ ಬೊಕ್ಕಸದಿಂದ ಬರುತ್ತಿತ್ತು. ಆದ್ದರಿಂದ ಈ ರಾಜರು ಸಂಗೀತ, ಸಾಹಿತ್ಯ, ನಾಚು, ರಂಗು ಮುಂತಾದುವುಗಳಲ್ಲಿಯೇ ಆಸಕ್ತರಾಗಿದ್ದರು. ಮೃಗಶಾಲೆಗೇ ವರ್ಷಕ್ಕೆ ಒಂದು ಲಕ್ಷ ವರಹಗಳನ್ನು ಇವರು ವೆಚ್ಚಮಾಡುತ್ತಿದ್ದರು. ಆ ಮೃಗಶಾಲೆಯಲ್ಲಿ ಹುಲಿ, ಕರಡಿ, ಸಿವಂಗಿ, ಕಾಡೆಮ್ಮೆ, ಹುಲ್ಲೆಕರು, ಕಡವೆ, ಸಾರಂಗ, ಕಪಿ, ಗಿಣಿ, ಮಲೆಸೇನ, ಕಾಳಿಂಗ, ನವಿಲು, ಪುನುಗಿನಬೆಕ್ಕು, ಸಾರಿವಾಳ, ಗೌಜಲಹಕ್ಕಿ, ಲಾವಕನಹಕ್ಕಿ, ಗಿಡಗ, ಭೈರಿ ಮುಂತಾದ ನಾನಾ ಬಗೆಯ ಮೃಗಗಳಿದ್ದವು. ಈ ರಾಜರು ಈ ಮೃಗಗಳ ಸಹವಾಸದಲ್ಲಿಯೂ ತಮ್ಮ ಸುಖಭೋಗಗಳಲ್ಲಿಯೂ ಕಾಲ ಕಳೆಯುತ್ತ ಬೊಕ್ಕಸದ ಹಣವನ್ನು ವೆಚ್ಚಮಾಡಿದರು.

ಈ ದೊಡ್ಡಕೃಷ್ಣರಾಜ ಒಡೆಯರವರಿಗೆ ಮಕ್ಕಳಿರಲಿಲ್ಲ. ಅವರ ಹಿರಿಯ ಕುಟುಂಬ ದೇವಾಜಮ್ಮಣ್ಣಿಯವರು ರಾಜ್ಯದ ಸೂತ್ರಗಳನ್ನು ಕೈಲಿಹಿಡಿದು ದತ್ತುಮಾಡಿಕೊಳ್ಳುವ ಯೋಚನೆಮಾಡಿದರು. ಮುಂದೆ ಆಳಿದ ಚಾಮರಾಜ ಒಡೆಯರೆಂಬವರೂ ಚಿಕ್ಕಕೃಷ್ಣರಾಜರೆಂಬವರೂ ಗೊಂಬೆಗಳಂತಾದರು.

# ೨೬ ನಿರ್ಭಾಗ್ಯ ಚಾಮರಾಜ

ದೊಡ್ಡಕೃಷ್ಣರಾಜ ಒಡೆಯರಿಗೆ ಮಕ್ಕಳಿರಲಿಲ್ಲ. ಅವರು ತೀರಿಹೋದ ತರುವಾಯ ಅವರ ಹಿರಿಯರಸಿ ದೇವಾಜಮ್ಮಣ್ಣಿಯವರು ಮುಖ್ಯಾಧಿಕಾರಿಗಳಾಗಿದ್ದ ದಳವಾಯಿ ದೇವರಾಜಯ್ಯ, ಸರ್ವಾಧಿಕಾರಿ ನಂಜರಾಜಯ್ಯಂದಿರನ್ನು ಕರೆಯಿಸಿ "ನಮ್ಮ ಜ್ಞಾತಿಯಾದ ಅಂಕನಹಳ್ಳಿ ದೇವರಾಜೇ ಅರಸಿನವರ ಪುತ್ರ ೨೮ ವರ್ಷ ವಯಸ್ಸುಳ್ಳ ಚಾಮರಾಜಯ್ಯನನ್ನು ಸಕುಟುಂಬವಾಗಿ ಕರೆಯಿಸಿ ನಮಗೆ ಸ್ವೀಕಾರವಮಾಡಿಸಿ, ಅವರಿಗೆ ಪಟ್ಟ ಕಟ್ಟಿ" ಎಂದು ಹೇಳಿದರು. ಮುಖ್ಯಾಧಿಕಾರಿಗಳಿಗೆ ತಮ್ಮ ಅಧಿಕಾರವನ್ನು ಹೆಚ್ಚಿಸಿಕೊಳ್ಳಬೇಕೆಂಬ ಉದ್ದೇಶವಿತ್ತು. ತಮ್ಮ ಅಧಿಕಾರದ ಗೋಜಿಗೆ ಬರುವುದಿಲ್ಲವೆಂದು ಪಟ್ಟಕಟ್ಟುವ ಮೊದಲೇ ಮುಂದಿನ ರಾಜರಿಂದ ಹೇಳಿಸಿಬಿಡಬೇಕೆಂದು ಸಂಕಲ್ಪಮಾಡಿಕೊಂಡರು. ಅದರಂತೆ ಆ ಯಧಿಕಾರಿಗಳು ಚಾಮರಾಜಒಡೆಯರನ್ನು ಕರೆಕಳುಹಿಸಿ ಪಶ್ಚಿಮವಾಹಿನಿಯನ್ನು ದಾಟುವುದಕ್ಕೆ ಮೊದಲು ಒಪ್ಪಂದಮಾಡಿಸಿ, ಅಭಿಷೇಕಮಾಡಿಸಿದರು.

ರಾಜಪದವಿಗೆ ಬಂದ ಚಾಮರಾಜಒಡೆಯರಿಗೆ ಸ್ವಲ್ಪವಾದರೂ ಅವಕಾಶವಿಲ್ಲದ ಹಾಗಿತ್ತು. ದೇವರಾಜಯ್ಯ ನಂಜರಾಜಯ್ಯಂದಿರೇ ಅರಮನೆಯ ಊಳಿಗದವರನ್ನೂ, ಸೇನೆಯನ್ನೂ ಇತರ ಅಧಿಕಾರಿಗಳನ್ನೂ ವಶದಲ್ಲಿಟ್ಟುಕೊಂಡು ರಾಜ್ಯದ ಆದಾಯ ವ್ಯಯವನ್ನು ತಾವೇ ನಡೆಸುತ್ತ ದೊರೆಯನ್ನು ಮೂಲವಿಗ್ರಹದಂತಿಟ್ಟು ನಿರೂಪದಸ್ಕತ್ತುಗಳನ್ನು ಮಾತ್ರ ಮಾಡಿಸುತ್ತಲಿದ್ದರು. ಎಂಟು ತಿಂಗಳು ನಡೆಯಿತು. ಆಗ ಚಾಮರಾಜ ಒಡೆಯರು "ಇನ್ನು ಮೇಲೆ ನಾವು ಉದಾಸೀನರಾಗಿರುವುದು ಸರಿಯಲ್ಲ; ಈ ಜನಗಳ ಅಧಿಕಾರ

ವನ್ನು ತೆಗೆದು ನಮ್ಮ ಆಪ್ತರಿಗೆ ಅಧಿಕಾರಕೊಡಬೇಕು" ಎಂಬದಾಗಿ ಯೋಚಿಸಿದರು. ಇದರ ಸುಳಿವು ಹೇಗೋ ದಳವಾಯಿ ದೇವರಾಜಯ್ಯನಿಗೆ ತಿಳಿಯಿತು. ಕೂಡಲೆ ದೇವರಾಜಯ್ಯನು ಅಂತಃಪುರಕ್ಕೆ ಹೋಗಿ ದೇವಾಜಮ್ಮಣ್ಣಿಯವರನ್ನು ಕಂಡು "ನಿಮ್ಮ ಸ್ವೀಕೃತ ಪುತ್ರರು ರಹಸ್ಯವಾಗಿ ಏನೇನೋ ಯೋಚನೆ ಮಾಡುತ್ತಿದ್ದಾರೆ. ಆಗಲೇ ಕೆಲವು ಚಾಕರರನ್ನು ಕೆಲಸದಿಂದ ತೆಗೆದುಹಾಕಿದ್ದಾರೆ. ನೋಡಿದರೆ ನಮ್ಮನ್ನೂ ತಪ್ಪಿಸುವ ಯೋಚನೆಯನ್ನು ಒಳೆಸುತ್ತಲಿರುವಂತಿದೆ. ಸ್ವಲ್ಪ ದಿನದಲ್ಲಿಯೇ ಇದು ವಿಪರೀತವಾದರೂ ಆದೀತು. ಅವರು ತಮ್ಮಲ್ಲಿ ಬಂದು ಏನಾದರೂ ಅರಿಕೆಮಾಡಿದರೆ ಅನುಮಾನದಿಂದ ತಾವದನ್ನು ಕೇಳಬೇಕು. ಇಲ್ಲದೆ ಈಗಲೇ ತಕ್ಕ ಉಪಾಯವನ್ನು ಮಾಡುವಂತೆ ತಾವು ಅಪ್ಪಣೆ ಕೊಟ್ಟರೆ ಹಾಗೆಮಾಡಲು ಸಿದ್ಧರಾಗಿದ್ದೇವೆ" ಎಂದು ಏಕಾಂತವಾಗಿ ಹೇಳಿದನು. ರಾಣಿಯವರು "ಹೇಗೆ ಹಿತವೋ ಹಾಗೆ ಮಾಡಬೇಕು. ನೀವೆಲ್ಲರೂ ಸಹಾಯಮಾಡದಿದ್ದರೆ ರಾಜ್ಯವು ನಿಷ್ಕಂಟಕವಾಗಿ ನಡೆಯುವುದೇ?" ಎಂದರು. ಸಮಯ ಪರೀಕ್ಷೆಮಾಡುವುದೊಳ್ಳೆಯದೆಂದುಕೊಂಡು ದೇವರಾಜಯ್ಯನು ಅರಮನೆಯನ್ನು ಬಿಟ್ಟು ತನ್ನ ಮನೆಗೆ ಹೋಗಿ ತನ್ನ ಆಪ್ತರೊಡನೆ ಆಲೋಚನೆ ಮಾಡುತ್ತಿದ್ದನು.

ಅತ್ತ ರಾಜರಿಗೆ ದೇವರಾಜಯ್ಯನು ಮಾತುಶ್ರೀಯವರನ್ನು ಏಕಾಂತದಲ್ಲಿ ಕಂಡುಬಂದ ವರ್ತಮಾನವು ತಿಳಿಯಿತು. ಇದನ್ನು ತಡಮಾಡಬಾರದೆಂದು ರಾಜರು ದಳವಾಯಿ ದೇವರಾಜಯ್ಯನ ಅಧಿಕಾರವನ್ನು ತೆಗೆದು ದೇವಯ್ಯನೆಂಬ ಬ್ರಾಹ್ಮಣನಿಗೆ ಆ ಅಧಿಕಾರವನ್ನು ಕೊಟ್ಟು, ಸರ್ವಾಧಿಕಾರಿ ನಂಜರಾಜಯ್ಯನ ಬದಲಿ ವೀರಶೆಟ್ಟಿ ಎಂಬುವನನ್ನು ನೇಮಕಮಾಡಿ, ಗೋಪೀನಾಥಯ್ಯನೆಂಬಾತನಿಗೆ ಪ್ರಧಾನತನವನ್ನು ಕೊಟ್ಟು, ಕಂಠೀರವಯ್ಯ, ಕಡೂರು ಚಿಕ್ಕಯ್ಯ, ನಾರಣಪ್ಪ, ಶಿವನಪ್ಪ—ಎಂಬ ನಾಲ್ವರು ಆಪ್ತಮಿತ್ರರನ್ನು ತಮ್ಮ

ಮಂತ್ರಾಲೋಚನೆಗೆ ಇಟ್ಟುಕೊಂಡು ಸ್ವಂತವಾಗಿ ಆಳಲು ಮೊದಲಿಟ್ಟರು.

ಈ ವಿಧವಾದ ಸ್ವತಂತ್ರ ಆಚರಣೆಯು ಅರಮನೆಯಲ್ಲಿ ಊಳಿಗದವರನೇಕರಿಗೆ ಸರಿಬೀಳಲಿಲ್ಲ. ಅವರು ಮಾತುಶ್ರೀಯವರಲ್ಲಿ ಹೋಗಿ ದೂರು ಹೇಳಿಕೊಂಡು ಅವರಿಬ್ಬರಲ್ಲಿಯೂ ವಿರೋಧಹುಟ್ಟುವಂತೆ ಮಾಡಿದರು. ಮಾತುಶ್ರೀಯವರು ಹಿಂದೆ ದೇವರಾಜಯ್ಯನು ಸೂಚಿಸಿದ್ದು ನಿಜವಾಯಿತೆಂದು ಸುಮ್ಮನಿದ್ದರು. ಇಂತಹ ಸಮಯದಲ್ಲಿ ದೇವರಾಜಯ್ಯ ನಂಜರಾಜಯ್ಯಂದಿರು ರಾಜರು ಸ್ವಂತವಾಗಿ ನಡೆಸುತ್ತಿದ್ದ ವಿಚಾರಣೆಯಲ್ಲಿ ತಮ್ಮ ಆಡಳಿತದ ಲೋಪಗಳು ಕಂಡು ಬಂದಾವೆಂದು ಶಂಕೆಪಟ್ಟು ಸೈನ್ಯವನ್ನು ತಮ್ಮ ಕಡೆ ಮಾಡಿಕೊಳ್ಳಬೇಕೆಂದು ಬಗೆದರು. ಸೈನ್ಯದಲ್ಲಿದ್ದ ಹೈದರಲ್ಲಿ ಮುಂತಾದ ಅಧಿಕಾರಿಗಳನ್ನು ರಾತ್ರಿವೇಳೆಯಲ್ಲಿ ಗೋಪ್ಯವಾಗಿ ಕೋಟೆಯ ಹೊರಗೆ ಕಂಡು ಅವರಿಗೆ ದ್ರವ್ಯವನ್ನು ಕೊಟ್ಟು "ನೀವೆಲ್ಲರೂ ಶೂರರು. ಪೂರ್ವದಿಂದಲೂ ನೀವು ನಮ್ಮಿಂದ ಪೋಷಿತರಾದವರು. ನಮಗೆ ಈಗ ಸಮಯ ಬಂದಿದೆ. ಆದ್ದರಿಂದ ನೀವು ಅರಮನೆಯಿಂದ ನಿಮಗೆ ಸಲ್ಲಬೇಕಾದ ಸಂಬಳಸಾರಿಗೆಗಳನ್ನು ತೆಗೆದುಕೊಂಡು ರಾಜರಿಗೆ ಇನ್ನುಮೇಲೆ ಚಾಕರಿಮಾಡುವುದಿಲ್ಲವೆಂದು ಹೇಳಿ ಹೊರಟು ಬರಬೇಕು. ನಿಮ್ಮನ್ನು ಯಾವ ಲೋಪವೂ ಇಲ್ಲದೆ ನಾವೇ ಕೆಲಸದಲ್ಲಿಟ್ಟುಕೊಳ್ಳುತ್ತೇವೆ. ಹೀಗೆ ನೀವು ಮಾಡಿದರೆ ನಿಮಗೆ ತುಂಬಾ ಪ್ರಯೋಜನವುಂಟು" ಎಂದು ಹೇಳಿ ಒಪ್ಪಿಸಿದರು. ಅದರಂತೆಯೇ ಮರುದಿನ ೨೦೦೦ ರಾವುತರು, ೬೦೦೦ ಬಾರಿನವರು ಸಂಬಳವನ್ನು ತೆಗೆದುಕೊಂಡು ಚಾಕರಿಬಿಟ್ಟು ಕೋಟೆಯ ಹೊರಗೆ ಬಂದು ಹರದಾರಿ ದೂರದಲ್ಲಿಳಿದುಕೊಂಡರು.

ಈ ಸಂಗತಿಯು ದೇವರಾಜಯ್ಯನಿಗೆ ತಿಳಿಯಿತು. ಕೂಡಲೆ ಆತನು ಜಗನ್ನಾಥ ದಾಸನೆಂಬ ಸಾಹುಕಾರನಿಂದ ೨ ಲಕ್ಷ ರೂ.ಗಳನ್ನು ಕಡವಾಗಿ ತೆಗೆದು ಆ ದುಡ್ಡನ್ನು ದೂರದಲ್ಲಿ ಬಿಡಿರಮಾಡಿದ್ದ

ಸೈನ್ಯಕ್ಕೆ ಕಳುಹಿಸಿಕೊಟ್ಟು "ನಾವು ಹೇಳಿ ಕಳುಹಿಸಿದ ಕೂಡಲೆ ಯುದ್ಧಸನ್ನದ್ಧರಾಗಿ ಬರತಕ್ಕದ್ದು" ಎಂದು ಆಜ್ಞೆಯನ್ನು ಕಳುಹಿಸಿ ಸಮಯ ನಿರೀಕ್ಷಿಸುತ್ತಲಿದ್ದನು.

ಶುಕ್ರವಾರ ಬಂತು. ಪ್ರತಿ ಶುಕ್ರವಾರವೂ ಪದ್ಧತಿಯ ಮೇರೆ ಹೊಸ ದಳವಾಯಿ ದೇವಯ್ಯನು ಸೇನೆಯನ್ನು ತೆಗೆದುಕೊಂಡು ಕೋಟೆಯ ಹೊರಗೆ ೨ ಹರದಾರಿ ದೂರದಲ್ಲಿದ್ದ ಮೈದಾನದಲ್ಲಿ ಕವಾಯಿತು ಮಾಡಿಸಲು ಹೊರಟನು. ಅವರು ಹೊರಟುಹೋದ ಸ್ವಲ್ಪ ಹೊತ್ತಿಗೆ ಸರಿಯಾಗಿ ದೇವರಾಜಯ್ಯನು ತನ್ನ ವಶವಾಗಿದ್ದ ಸೈನ್ಯವನ್ನು ಕರೆಸಿಕೊಂಡು ಕವಾಯತಿಗೆ ಹೋಗಿದ್ದ ದಂಡು ಒಳಗೆ ಬಾರದಂತೆ ಕೋಟೆಯ ಬಾಗಲುಗಳನ್ನು ಭದ್ರಪಡಿಸಿಬಿಟ್ಟು ಅರ ಮನೆಯ ಮುಂದೆ ಬಂದು ಸೈನ್ಯದೊಡನೆ ಸಿದ್ಧನಾದನು.

ಚಾಮರಾಜ ಒಡೆಯರಿಗೆ ಗತಿ ತೋರದಾಯಿತು. ಆಗ "ನಾವು ಸ್ವತಂತ್ರವಾಗಿ ರಾಜ್ಯಭಾರ ಮಾಡಿದ್ದರಿಂದ ನಿಮಗೂ ನಮಗೂ ಮನಸ್ತಾಪವುಂಟಾಯಿತು. ಇನ್ನುಮೇಲೆ ನಿಮ್ಮ ಅನು ಮತಿಯಿಂದಲೇ ಎಲ್ಲ ಕಾರ್ಯಗಳನ್ನೂ ಮಾಡುತ್ತೇವೆ" ಎಂದು ದೇವರಾಜಯ್ಯನಿಗೆ ಹೇಳಿಕಳುಹಿಸಿದರು. ದೇವರಾಜಯ್ಯನು ಮನ ಸ್ಸಿನಲ್ಲಿ "ಇವು ನಂಬತಕ್ಕ ಮಾತುಗಳಲ್ಲ, ನನ್ನ ಸಹಾಯದಿಂದ ಲ್ಲವೇ ಈತನು ರಾಜನಾದುದು, ಸಮಯ ಬಂದಾಗ ಈಗ ನಡೆಸಿ ದಂತೆಯೇ ಪುನಃ ನಡೆಸುವುದರಲ್ಲಿ ಅನುಮಾನವಿಲ್ಲ" ಎಂದು ಯೋಚಿಸಿ 'ರಾಮಬಾಣ' ವೆಂಬಾನೆಯಿಂದ ಅರಮನೆಯ ಬಾಗ ಲನ್ನು ಒಡೆಸಿ ಬಾಗಿಲಿನಲ್ಲಿ ತನ್ನ ಕಡೆಯವರನ್ನೇ ಪಹರೆಗಿಡಿಸಿದನು. ಅರಮನೆಯಲ್ಲಿ ಎಲ್ಲೆಲ್ಲಿಯೂ ಕೋಲಾಹಲವೆದ್ದಿತು ; ಆದರೆ ಎಲ್ಲವೂ ದೇವರಾಜನ ವಶದಲ್ಲಿತ್ತು. ಮುಂದೆ ದೇವರಾಜಯ್ಯನು ನಾಗೋಜಿ ರಾಯನೆಂಬ ಜಮಾದಾರನೊಬ್ಬನನ್ನು ಕರೆದು "ರಾಜ ಚಿಹ್ನೆ ಗಳಾದ ಪಟ್ಟದ ಕತ್ತಿ ಮತ್ತು ಶಿಖಾಮೊಹರುಗಳನ್ನು ಆ ಚಾಮ

ರಾಜರಿಂದ ತೆಗೆದುಕೋ" ಎಂದು ಆಜ್ಞಾಪಿಸಿ ಹಿಂದೆಯೇ ತಾನೂ ಒಳಕ್ಕೆ ಬಂದನು.

ಚಾಮರಾಜರಿಗೆ ಸಹಾಯಕರೇ ಇರಲಿಲ್ಲ. ನಾಗೋಜಿರಾಯನು ಬಂದು ಕೇಳಿದೊಡನೆಯೇ ರಾಜಚಿಹ್ನೆಗಳನ್ನು ತೆಗೆದು ಕೊಟ್ಟುಬಿಟ್ಟರು. ದೇವರಾಜಯ್ಯನು "ಅವೆರಡನ್ನು ಸಿಂಹಾಸನದ ಮೇಲಿಟ್ಟು ಪೂಜೆ ಮಾಡಿಸಿ" ಎಂದು ಕಟ್ಟುಮಾಡಿ, ಮಾತಿಲ್ಲದೆ ಚಾಮರಾಜರನ್ನು ಒಂದುಸಲ ನೋಡಿ "ಇವರನ್ನು ಬಂಧಿಸಿ ಕಬ್ಬಾಳದುರ್ಗಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನಮ್ಮಾಜ್ಞೆಯನ್ನು ತಿಳುಹಿಸಿ ಒಪ್ಪಿಸಿ ಬನ್ನಿ" ಎಂದು ಸೈನ್ಯದಧಿಕಾರಿಗಳಿಗೆ ಗೊತ್ತುಮಾಡಿದನು. ನಿರ್ಭಾಗ್ಯರಾದ ಚಾಮರಾಜರು ತಮ್ಮ ಪರವಾಗಿ ಬಂದೇಟುಕೊಡುವುದಕ್ಕೂ ಪ್ರಯತ್ನಮಾಡದೆ ಖಿನ್ನತೆಯಿಂದ ನಿರ್ಬಂಧಕ್ಕೊಳಗಾಗಿ ಕಬ್ಬಾಳದುರ್ಗದಲ್ಲಿ ಕುಟುಂಬ ಸಮೇತರಾಗಿ ಸೆರೆಯಾದರು. ಪ್ರಧಾನತನವನ್ನು ಮಾಡುತ್ತಿದ್ದ ಗೋಪೀನಾಥಯ್ಯ, ದಳವಾಯಿ ದೇವಯ್ಯ, ಸರ್ವಾಧಿಕಾರಿ ವೀರಸೆಟ್ಟಿ ಮುಂತಾದ ಏಳುಮಂದಿ ಆಪ್ತರನ್ನು ದೇವರಾಜಯ್ಯನು ಪಹರೆಯಲ್ಲಿರಿಸಿದನು.

ಇಷ್ಟು ಸಾಹಸದಿಂದ ದೇವರಾಜಯ್ಯನು ಪಿತೂರಿಯನ್ನು ಮುಗಿಸಿಕೊಂಡು ಮಾತುಶ್ರೀಯವರಿಗೆ "ತಾವು ಚಿಕ್ಕನಹಳ್ಳಿ ಚಾಮೇ ಅರಸಿನವರ ೩ ವರ್ಷ ವಯಸ್ಸಿನ ಪುತ್ರನನ್ನು ದತ್ತಕ ಮಾಡಿಕೊಂಡು ಆ ಬಾಲಕರಿಗೆ ಪಟ್ಟವನ್ನು ಕೊಡಬೇಕು" ಎಂದು ಹೇಳಿ ಒಪ್ಪಿಸಿ, ಆ ಬಾಲಕನನ್ನು ಕರೆಯಿಸಿ ಅಭಿಷೇಕ ಮಾಡಿಸಿ ಸಮಸ್ತಾಧಿಕಾರವನ್ನೂ ತನ್ನ ಕೈಯಲ್ಲಿಯೇ ಇಟ್ಟುಕೊಂಡಿದ್ದನು. ಈ ಅರಸರು ಚಿಕ್ಕಕೃಷ್ಣರಾಯರೆಂಬ ಹೆಸರಿನಿಂದ ೧೭೩೪ ರಿಂದ ೧೭೬೬ ರವರೆಗೆ ಆಳಿದರು. ಆಡಳಿತವೆಲ್ಲವೂ ದಳವಾಯಿ ದೇವರಾಜಯ್ಯ ಮತ್ತು ಸರ್ವಾಧಿಕಾರಿ ನಂಜರಾಜಯ್ಯಂದಿರ ಕಯ್ಯಲ್ಲಿತ್ತು.

[ವಿಲ್ಕ್ಸ್, ವಂಶರತ್ನಾಕರ, ಪುಟ ೧೫೭-೧೬೨, ವಂಶಾವಳಿ, ಪುಟ ೧೬೫-೧೭೧]

# ೨೭ ಸರ್ವಾಧಿಕಾರಿ ನಂಜರಾಜಯ್ಯ

೧೭೩೪ರಲ್ಲಿ ಚಾಮರಾಜ ಒಡೆಯರನ್ನು ಹಿಡಿದು ಕಬ್ಬಾಳ ದುರ್ಗಕ್ಕೆ ಕಳುಹಿಸಿ ರಾಜದ್ರೋಹವನ್ನು ಮಾಡಿದವರು ಇಬ್ಬರು ಜ್ಞಾತಿಗಳು—ದಳವಾಯಿ ದೇವರಾಜಯ್ಯ ಮತ್ತು ಸರ್ವಾಧಿಕಾರಿ ನಂಜರಾಜಯ್ಯ.

ಬಾಲಕರಾದ ಇಮ್ಮಡಿ ಕೃಷ್ಣರಾಜ ಒಡೆಯರನ್ನು ಪಟ್ಟದಲ್ಲಿ ಕೂರಿಸಿದ ಮೇಲೆ ಇವರಿಗೂ ಪ್ರಧಾನಿಯ ಕೆಲಸದಲ್ಲಿದ್ದ ಕನ್ನಂಬಾಡಿ ವೆಂಕಟಪತಯ್ಯನೆಂಬಾತನನ್ನು ಸೇರಿಸಿಕೊಂಡು ಆಡಳಿತವನ್ನು ನಡೆಸುತ್ತಿದ್ದರು. ಮೂವರೂ ಸೇರಿ ಅರಮನೆಯ ಆದಾಯದಲ್ಲಿ ಸಾಧ್ಯವಾದಷ್ಟು ಹಣವನ್ನು ತಾವೇ ಸ್ವಂತ ವೆಚ್ಚಕ್ಕಾಗಿ ಉಪಯೋಗಿಸಿಕೊಳ್ಳುವುದಲ್ಲದೆ ತಮ್ಮ ಊಳಿಗದವರು ಲಂಚ ತಿಂದು ಶಿಫಾರಸು ಮಾಡಿದವರಿಗೆ ಕೆಲಸಗಳನ್ನು ಮಾಡಿಸುತ್ತಲಿದ್ದರು. ಅಯೋಗ್ಯರಾದವರು ಅಧಿಕಾರಿಗಳಾದುದಲ್ಲದೆ ರಾಜ್ಯದ ಆದಾಯವು ಈ ಮೂವರ ಮತ್ತು ಅವರ ಅನುಚರರ ಪಾಲಾಗುತ್ತಿತ್ತು.

ಹೀಗೆ ೫-೬ ವರ್ಷಗಳು ನಡೆದವು. ವಂಚನೆಯಿಂದ ಮೂವರೂ ಹಣವನ್ನು ಸಂಪಾದಿಸಿದರು. ನಂಜರಾಜಯ್ಯನೂ ಐಶ್ವರ್ಯವನ್ನು ಸೇಕರಿಸಿಕೊಂಡಿದ್ದನು. ಆತನಿಗೆ ಮಕ್ಕಳಿರಲಿಲ್ಲ. ಅಲ್ಲದೆ ಅಂತ್ಯಕಾಲವು ಸಮೀಪವಾಯಿತು. ಆಗ ನಂಜರಾಜಯ್ಯನು ತಾನು ಮಾಡಿದ ನೀಚಕಾರ್ಯಕ್ಕೆ ಮನಸ್ಸಿನಲ್ಲಿ ನೊಂದುಕೊಂಡನು. ತಾನು ಗಳಿಸಿಟ್ಟ ದ್ರವ್ಯವು ರಾಜರದೇ ಆಗಿದ್ದುದರಿಂದ ತನ್ನ ಕುಟುಂಬ ಚಂದಾಯಮ್ಮಣ್ಣಿಯ ಜೀವನಕ್ಕೆ ಮಾತ್ರ ಸ್ವಲ್ಪ ಉಳಿಸಿಕೊಂಡು ಉಳಿದ ೩ ಲಕ್ಷ ವರಹಗಳಷ್ಟು ಧನವನ್ನು ದೊರೆಗಳಿಗೆ

ತಂದೊಪ್ಪಿಸಿದನು. ಮಾತುಶ್ರೀಯವರನ್ನು ಕಂಡು ಸಮಾಧಾನವನ್ನು ತಿಳಿಸಿ ದುಷ್ಕರ ವಿಷಯವಾಗಿ ಎಚ್ಚರಿಕೆಕೊಟ್ಟು ಪಶ್ಚಾತ್ತಾಪಪಡುತ್ತ ಈತನು ೧೭೩೪ರಲ್ಲಿ ಶ್ರೀರಂಗಪಟ್ಟಣದಲ್ಲಿಯೇ ಕಾಲವಾದನು. ಸಾಯುವ ಕಾಲದಲ್ಲಿ "ನನ್ನ ತರುವಾಯ ನನ್ನ ಮಗನಿಗೆ ದಳವಾಯಿ ದೇವರಾಜಯ್ಯನ ತಮ್ಮ ಕರಾಚೂರಿ ನಂಜರಾಜನು ಇದ್ದರೆ ತೊಂದರೆಯೇ ಸಂಭವಿಸುವುದು" ಎಂದು ಎಚ್ಚರಿಸಿದ್ದನು. ಆದರೂ ಸರ್ವಾಧಿಕಾರಿತನವು ಆ ಕರಾಚೂರಿ ನಂಜರಾಜನಿಗೇ ಪ್ರಾಪ್ತವಾಯಿತು.

[ವಂಶರತ್ನಾಕರ ಪುಟ ೧೬೫; ವಂಶಾವಳಿ—ಪುಟ ೧೭೫-೧೭೬; ಮತ್ತು ವಿಲ್ಕ್ಸ್. ಮುಂದಿನ ಕಥೆಗಳಲ್ಲಿ ವಿಲ್ಕ್ಸ್ ಗ್ರಂಥವನ್ನೇ ಹೆಚ್ಚಾಗಿ ಅವಲಂಬಿಸಿದೆ]

## ೨೮ ಚಿಕ್ಕಕೃಷ್ಣರಾಜ ಒಡೆಯರು

ಅವಸಾನಕಾಲದಲ್ಲಿ ಸರ್ವಾಧಿಕಾರಿ ನಂಜರಾಜಯ್ಯನು ಪಶ್ಚಾತ್ತಾಪಪಡುತ್ತ ರಾಜರಿಗೆ "ನನ್ನ ತರುವಾಯ ನನ್ನ ಪದವಿಗೆ ದೇವರಾಜಯ್ಯನ ತಮ್ಮ ಕರಾಚೂರಿ ನಂಜರಾಜಯ್ಯನನ್ನು ನಿಯಮಿಸಿದರೆ ಅನರ್ಥಗಳು ಸಂಭವಿಸುತ್ತವೆ" ಎಂದು ಎಚ್ಚರಿಕೆಕೊಟ್ಟನಷ್ಟೆ. ರಾಜರಿಗೆ ಹೆಚ್ಚು ಅಧಿಕಾರವಿಲ್ಲದೆ ದೇವರಾಜಯ್ಯನ ವಶದಲ್ಲಿಯೇ ಕೋಶಾಗಾರವೂ ಸೇನಾಬಲವೂ ಇದ್ದುದರಿಂದ ಆ ಕರಾಚೂರಿ ನಂಜರಾಜಯ್ಯನಿಗೇ ಅಧಿಕಾರವಾಯಿತು. ಈತನಿಗೆ ಕರಾಚೂರಿ ಎಂಬುದು ಅಡ್ಡ ಹೆಸರು. ಸಹನವಿರಲಿಲ್ಲ ಈತನಿಗೆ; ಎದುರಾಡಿದರೆ ಕೋಪ, ಕೋಪಬಂದೊಡನೆ ಕಠಾರಿಯ ಮೇಲೆಯೇ ಕೈ. ಸಹಜವಾಗಿ ಒರಟ, ಮೂರ್ಖ; ಇದರಮೇಲೆ ತಾನು ಬಹಳ ಚತುರನೆಂದು ತಿಳಿದಿದ್ದನು. ಇದರಿಂದ ಈತನು ನಡೆಸಿದ ಕೆಲಸಗಳು ಒಂದಾದರೂ ಸಮರ್ಪಕವಾಗಿ ಕೊನೆಗಾಣಲಿಲ್ಲ. ಆತನ ಶೌರ್ಯವೂ ಧೈರ್ಯವೂ ಕ್ರೌರ್ಯದಿಂದಲೂ ಹಟಮಾರಿತನದಿಂದಲೂ ಹದಗೆಟ್ಟು ಅನರ್ಥಗಳಿಗೆ ಕಾರಣಭೂತಗಳಾಗಿದ್ದುವು.

ಚಿಕ್ಕಕೃಷ್ಣರಾಜ ಒಡೆಯರು ದೊರೆಗಳಾಗಿದ್ದುದು ಇಬ್ಬರು ಸೋದರರ ಅಧಿಕಾರಕ್ಕೇನೂ ಅಡ್ಡಿಯಾಗಲಿಲ್ಲ; ಏಕೆಂದರೆ ರಾಜರು ಚಿಕ್ಕ ವಯಸ್ಸಿನವರಾಗಿದ್ದರು. ಸರ್ವಾಧಿಕಾರಿ ಎಂಬ ಪದವಿಯಲ್ಲಿದ್ದಾಗ್ಗೂ ನಂಜರಾಜಯ್ಯನೇ ಸೇನೆಯ ನಾಯಕತ್ವವನ್ನು ವಹಿಸಿ, ಕೊಯಮುತ್ತೂರು ಪ್ರಾಂತ್ಯದಲ್ಲಿಯೂ ದೇವನಹಳ್ಳಿಯ ಬಳಿಯಲ್ಲಿಯೂ ಹಲಕೆಲವು ಜಯಗಳನ್ನು ಪಡೆದನು. ತರುವಾಯ ತಿರುಚನಾಪಳ್ಳಿಯ ಪ್ರಾಂತ್ಯದಲ್ಲಿ ಇತರರ ಯುದ್ಧಗಳಲ್ಲಿ ಪ್ರವೇಶಿಸಿ, ಅಲ್ಲಿಯೇ ಸಂಧಾನಪರನಾಗಿದ್ದು ಶ್ರೀರಂಗಪಟ್ಟಣದಲ್ಲಿ ಶತ್ರುಗಳು

ತೋರಿಕೊಂಡು ವಿಪತ್ತು ಒದಗಿದ ಕಾಲದಲ್ಲಿ ಹಿಂತಿರುಗಿ ಬಂದನು. ಈ ವೇಳೆಗೆ ಚಿಕ್ಕ ದೊರೆಗಳಿಗೆ ೨೭ ವರ್ಷ ವಯಸ್ಸಾಗಿತ್ತು. ನಂಜರಾಜಯ್ಯನ ಪುತ್ರಿ ದೇವಾಜಮ್ಮಣ್ಣಿಯವರನ್ನೇ ಅವರಿಗೆ ಕೊಟ್ಟು ವಿವಾಹವನ್ನಾಡಿಸಿ ದೇವರಾಜಯ್ಯ ನಂಜರಾಜಯ್ಯಂದಿರು ತಮ್ಮ ಸ್ಥಾನಗಳನ್ನು ಭದ್ರಗೊಳಿಸಿಕೊಂಡು ಅಳಿಯಂದಿರ ಮರ್ಯಾದೆಗೆ ಮಾತ್ರ ತಕ್ಕಷ್ಟು ಸ್ವಸ್ಥವನ್ನು ಕೊಟ್ಟಿದ್ದರು.

ವಯಸ್ಸು ತುಂಬಿದ ಮೇಲೆ ಈ ಇಮ್ಮಡಿ ಕೃಷ್ಣರಾಜಒಡೆಯರಿಗೆ ಮನೋನಿಶ್ಚಯವು ಬಲವಾಯಿತು. "ಈ ದೇವರಾಜಯ್ಯ ನಂಜರಾಜಯ್ಯಂದಿರು ನಮ್ಮ ಅಣ್ಣಂದಿರಾದ ಚಾಮರಾಜ ಒಡೆಯರವರಿಗೂ ಮಾತುಶ್ರೀಯವರಿಗೂ ಮನಸ್ತಾಪ ತಂದಿಟ್ಟರು ; ಕಠೋರವಾದ ಸ್ವಾಮಿದ್ರೋಹವನ್ನು ಮಾಡಿ ನೀಚರಂತೆ ಪ್ರವರ್ತಿಸುತ್ತಿದ್ದಾರೆ. ಇವರ ನಡತೆಯನ್ನು ನಾವು ಸಮಗ್ರವಾಗಿ ತಿಳಿದು ವಿಚಾರಣೆಮಾಡಬೇಕು" ಎಂದು ತಮ್ಮ ಆಪ್ತೇಷ್ಟರಲ್ಲಿ ಹೇಳಿ "ಸ್ವಜನಕ್ಕೆ ಅಧಿಕಾರಕೊಟ್ಟದ್ದರಿಂದ ಈ ತೊಂದರೆ ಸಂಭವಿಸಿದೆ. ಇವರ ಅಧಿಕಾರವನ್ನು ಕೊನೆಗಾಣಿಸಬೇಕು" ಎಂದುಕೊಳ್ಳುತ್ತಿದ್ದರು. ಅರಮನೆಯಲ್ಲಿಯೇ ಬೆಳೆದವರಾದುದರಿಂದ ಇವರಿಗೆ ಶೌರ್ಯವೂ ಅನುಭವವೂ ಸಾಕಾದಷ್ಟಿರಲಿಲ್ಲ; ಪ್ರಬಲರಾಗಿದ್ದ ಕಳಲೆ ಮನೆತನದವರ ಸೊಕ್ಕನ್ನು ಮುರಿಯಲು ತಕ್ಕ ಸಂಧಾನಸಮರ್ಥರು ಯಾರೂ ಇವರ ಆಪ್ತಮಂಡಲಿಯಲ್ಲಿರಲಿಲ್ಲ. ದೊರೆಗಳು ಇವರೊಡನೆ ಯೋಚನೆಮಾಡಿದಾಗ ಕೆಲವರು "ಸಮಯ ನೋಡಿ ಇಬ್ಬರು ಸೋದರರನ್ನೂ ಉಪಾಯದಿಂದ ಹಿಡತರಿಸಿ ನಿರ್ಬಂಧದಲ್ಲಿಡುವುದೇ ಪರಮೋಪಾಯ" ವೆಂದು ಸಲಹೆಕೊಟ್ಟರು. ಈ ಗುಪ್ತಾಲೋಚನೆಗಳ ಸುದ್ದಿಯು ದೇವರಾಜಯ್ಯನಿಗೆ ಗೂಢಚಾರರ ಮೂಲಕ ತಿಳಿಯಿತು. ಆಗ ಈತನು ರಾಜರಿಗೆ ಇಂತಹ ಪ್ರಯತ್ನಗಳನ್ನು ಮಾಡಬಾರದೆಂದೂ ಆಪ್ತರಂತಿದ್ದ ದುರ್ಮಂತ್ರಿಗಳನ್ನು ಕೆಲಸದಿಂದ ತಪ್ಪಿಸಬೇಕೆಂದೂ ಹೇಳಿಸಿದನು. ಇದನ್ನು ಕೇಳಿದ ದೊರೆಗಳು

ಕೋಪಗೊಂಡು ತಿರಸ್ಕಾರವನ್ನು ತೋರುವಂತೆ ಮಾತನಾಡಿದರು. ರಾಜರಿಗೆ ಸ್ವಂತ ಮೈಗಾವಲಿನ ದಳದವರು ಸ್ವಾಧೀನರಾಗಿದ್ದರು; ಆಪ್ತವರ್ಗದವರಲ್ಲಿ ಕೆಲವರು ಮತ್ತೆ ಕೆಲವರು ಘಟವನ್ನು ಕೂಡಿಸಿ ಕೊಟ್ಟರು. ಇಷ್ಟರಿಂದಲೇ ರಾಜರು ತಾವು ಶಕ್ತಿವಂತರೆಂದು ತಿಳಿದಿದ್ದರು.

ದೊರೆಗಳ ಹಿರಿಯ ಪತ್ನಿ ದೇವಾಜಮ್ಮಣ್ಣಿಯವರು ದೇವರಾಜಯ್ಯನ ಮನೆಯಲ್ಲಿಯೇ ಬೆಳೆದಿದ್ದವರು. ಈ ಸಮಯದಲ್ಲಿ ಗರ್ಭಿಣಿಯಾಗಿದ್ದುದರಿಂದ ಆಕೆಯು ದೇವರಾಜಯ್ಯನ ಮನೆಯಲ್ಲಿಯೇ ಇದ್ದರು. ರಾಜರ ಪ್ರವರ್ತನೆಯನ್ನು ಕಂಡು, ದೇವರಾಜಯ್ಯನು ಹಿಂದೆ ಚಾಮರಾಜ ಒಡೆಯರ ವಿಷಯದಲ್ಲಿ ಪಶ್ಚಾತ್ತಾಪಪಡುತ್ತಿದ್ದವನಾದುದರಿಂದ ನಿದಾನಿಸಿ, ಪುನಃ ಒಳ್ಳೆಯ ಮಾತುಗಳನ್ನು ಹೇಳಿಸಿಯೇ ರಾಜರ ವಿರೋಧ ಪ್ರಯತ್ನವನ್ನು ನಿಲ್ಲಿಸಲು ಯತ್ನಿಸಿದನು. ಆದರೆ ದೇವರಾಜನು ಮೃದುವಾಗಿ ಹೇಳಿಸಿದಂತೆ ರಾಜರು ತಾವು ಬಲಿಷ್ಠರೆಂದೆಂದುಕೊಂಡು ನಿಷ್ಠುರವಾಗಿ ಮಾತನಾಡುತ್ತಿದ್ದರು. ಈ ನಿಷ್ಠುರವಾದ ಮಾತುಗಳನ್ನು ದೇವರಾಜಯ್ಯನು ಸಹಿಸಿಕೊಂಡಂತೆ ಕರಾಚೂರಿ ನಂಜರಾಜಯ್ಯನು ಸಹಿಸಲಿಲ್ಲ; ಶೀಘ್ರವಾಗಿ ರಾಜರನ್ನು ಕೊನೆಗಾಣಿಸಬೇಕೆಂದು ಯೋಚಿಸುತ್ತ ಒಂದು ಉಪಾಯವನ್ನು ಯೋಚಿಸಿದನು. ಅನಂತರ ಮುಂದೆ ಪಟ್ಟವು ತನ್ನ ಮಗುವಿಗೇ ಆಗುವುದೆಂದು ಭರವಸೆಕೊಟ್ಟು ದೇವಾಜಮ್ಮಣ್ಣಿಯನ್ನು ಒಪ್ಪಿಸಿ ಆಕೆಯ ಕೈಯಿಂದ ದೊರೆಗಳಿಗೆ ವಿಷವನ್ನಿಡಿಸಬೇಕೆಂಬುದು. ಇದರಿಂದ ಸದ್ದಿಲ್ಲದೆ, ಹೆಚ್ಚು ತೊಂದರೆಯಿಲ್ಲದೆ ಕಾರ್ಯವು ಕೈಗೂಡುವುದೆಂದು ಕರಾಚೂರಿಯಾತನ -ಯೋಚನೆ. ಇದನ್ನು ತಂದೆಯವರ ಇಷ್ಟವೆಂದು ದೇವಾಜಮ್ಮಣ್ಣಿಗೆ ತಿಳಿಸಿದ ಕೂಡಲೆ ಆಕೆಯು ಕೋಪಗೊಂಡಳು; ಪತಿವ್ರತೆಯಾಗಿದ್ದ ಆಕೆಗೆ ಈ ಮಾತುಗಳು ಕಿವಿಗೆ ಶೂಲಗಳಂತಿದ್ದವು. ಆಕೆಯು ಕೋಪಗೊಂಡದ್ದೇ ಅಲ್ಲದೆ ತನ್ನ ಪತಿಗೆ ಏನೋ ಅನಿಷ್ಟಸಂಭವಿಸಲಿರುವುದೆಂದು ತಿಳಿದು ತನ್ನನ್ನು ಗಂಡನ ಮನೆಗೆ ಸೇರಿಸುವವರೆಗೂ ಉಪ

ವಾಸವಿರುವುದಾಗಿ ನಿಶ್ಚಯಿಸಿ ಹಟಮಾಡಿದಳು. ಕರಾಚೂರಿಯಾತನ ಈ ಆಲೋಚನೆಯು ಕೆಟ್ಟಿತು. ದೇವರಾಜಯ್ಯನಿಗೆ ಪ್ರಾಯಶಃ ಇದು ತಿಳಿಯಲೇ ಇಲ್ಲ; ಏಕೆಂದರೆ ಅಣ್ಣನ ನಿದಾನವು ನಂಜರಾಜಯ್ಯನ ಮನಸ್ಸಿನಲ್ಲಿ ಅಸಮಾಧಾನವನ್ನು ಹುಟ್ಟಿಸಿತ್ತು. ಅಣ್ಣನಿಗೆ ತಿಳಿಸದೆಯೇ ಗೋಪ್ಯವಾಗಿ ಈ ಕೆಲಸವನ್ನು ತೀರಿಸಿ ಬಿಡಬಹುದೆಂದು ನಂಜರಾಜಯ್ಯನು ಈ ಬಗೆಯ ಯೋಚನೆಯನ್ನು ಮಾಡಿದ್ದು; ಯೋಚನೆಯು ವಿಫಲವಾಗಿ ದೇವಾಜಮ್ಮಣ್ಣಿಯು ಹಟಹಿಡಿದ ಕೂಡಲೆ ನಂಜರಾಜಯ್ಯನು ಮನಸ್ಸಿನಲ್ಲಿ "ಇನ್ನು ವಿಳಂಬಮಾಡಬಾರದು. ಧೂರ್ತತನದಿಂದಲಾದರೂ ರಾಜನ ಅಧಿಕಾರವನ್ನು ಕೊನೆಗಾಣಿಸತಕ್ಕದ್ದೇ ಸರಿ" ಎಂದುಕೊಂಡು ತನ್ನ ಸೈನ್ಯವನ್ನು ಸಿದ್ಧಗೊಳಿಸಿಕೊಂಡು ಆತುರಪಟ್ಟನು. ದೇವರಾಜಯ್ಯನು "ಪೂರ್ವದಲ್ಲಿ ಚಾಮರಾಜ ಒಡೆಯರನ್ನು ಬಂಧಿಸಿ ಕಬ್ಬಾಳ ದುರ್ಗಕ್ಕೆ ಕಳುಹಿಸಿದಾಗಿನಿಂದ ನಮಗೆ ಅಪಖ್ಯಾತಿಯಿದೆ. ಅದನ್ನು ಹೆಚ್ಚಿಸುವ ಕೆಲಸವನ್ನು ಈಗ ನಾವು ಮಾಡಬಾರದು" ಎಂದು ಹೇಳಿದ್ದು ಕರಾಚೂರಿಗೆ ಸರಿಬೀಳಲಿಲ್ಲ. ತೀವ್ರವಾಗಿಯೇ ರಾಜನಿಗೆ ತಕ್ಕ ಶಾಸ್ತಿಯನ್ನು ಮಾಡಬೇಕೆಂದು ಅಣ್ಣನ ಹಿತವಾದವನ್ನು ಕೇಳದೆ ಸೈನ್ಯವನ್ನು ತೆಗೆದುಕೊಂಡು ಕೋಟೆಯ ಒಳಗೆ ಬಂದು ಹೆಬ್ಬಾಗಿಲ ಎದುರಿನಲ್ಲಿ ನಾಲ್ಕು ಫಿರಂಗಿಗಳನ್ನು ನಿಲ್ಲಿಸಿದನು. ಅರಮನೆಯವರು ತಕ್ಕ ಸನ್ನಾಹಮಾಡಿಕೊಂಡು ಎದುರಿಸಲು ಸಿದ್ಧರಾದರು. ಆಗ ನಂಜರಾಜಯ್ಯನು ಅರಮನೆಯ ಮೇಲೆಯೇ ಗುಂಡು ಹಾರಿಸಿ, ಕೋಟೆಯ ಬಾಗಿಲನ್ನು ಮದ್ದುಸುಟ್ಟು ಹಾರಿಸಿ ಒಳಕ್ಕೆ ನುಗ್ಗಿದನು. ಅರಮನೆಯಲ್ಲಿದ್ದ ರಾಜನ ಅನುಚರರು ಅಂತಃಪುರದ ಕಡೆಗೋಡಿದರು. ಆಗ ನಂಜರಾಜಯ್ಯನು ಅರಮನೆಯೊಳಗೆ ಬಂದು ರಾಜನನ್ನು ಕರೆಸಿ ಬಲವಂತದಿಂದ ಪೀಠದಲ್ಲಿ ಕುಳ್ಳಿರಿಸಿ ಧೂರ್ತವಿನಯದಿಂದ ನಮಸ್ಕರಿಸಿ "ಅರಮನೆಯನ್ನು ಹುಡುಕಿ ಸಿಕ್ಕ ಗಂಡಸರೆಲ್ಲರನ್ನೂ ಹಿಡಿದು ಬನ್ನಿ" ಎಂದು ತನ್ನ ಸೈನಿಕರನ್ನು ಕಳುಹಿಸಿದರು. ಅವರು ಹಾಗೆಯೇ ಹುಡುಕಿ ಅನೇ

ಕರನ್ನು ಎಳೆದುತಂದರು. ಅವರಲ್ಲಿ ಕೆಲವರಿಗೆ ರಾಜರೆದುರಿನಲ್ಲಿ ಸಂಕೋಲೆಗಳನ್ನು ಹಾಕಿಸಿದಮೇಲೆ ಉಳಿದವರ ಕಿವಿಮೂಗುಗಳನ್ನು ಕತ್ತರಿಸುವಂತೆ ಆಜ್ಞೆಮಾಡಿದನು. ಅವನ ಭಟರು ಹಾಗೆಯೇ ಕುಯ್ಯುತ್ತಿರಲು ರಾಜರು ಇದೆಲ್ಲವನ್ನೂ ನೋಡಿ ಸಹಿಸಿಕೊಂಡಿರಬೇಕಾಗಿತ್ತು. ತರುವಾಯ ನಂಜರಾಜಯ್ಯನು ಅಣಕಿಸುವ ಸ್ವರದಿಂದ "ಮಹಾಸ್ವಾಮಿಯವರೇ! ಇನ್ನು ಮುಂದೆ ನಿಮ್ಮ ಆಪ್ತರಾಗಿ ಊಳಿಗಮಾಡತಕ್ಕವರು ಇವರು" ಎಂದು ತನ್ನ ಕಡೆಯವರನ್ನು ತೋರಿಸಿ ಪುನಃ ನಮಸ್ಕಾರಮಾಡಿ ಒರಟುತನದಿಂದ ಹೊರಟು ಹೋದನು.

ನಂಜರಾಜಯ್ಯನ ಪ್ರವರ್ತನೆಯನ್ನು ಕೇಳಿ ದೇವರಾಜಯ್ಯನು ಮನಸ್ಸಿನಲ್ಲಿ ಮರುಗಿ "ನಾನೆಷ್ಟು ತಡೆದರೂ ಈ ಮೂರ್ಖನು ಮಾಡಬಾರದ ಕೆಲಸಗಳನ್ನೇ ಮಾಡುತ್ತಿದ್ದಾನೆ. ಇವನ ಸಂಗಡ ಇದ್ದು ಅಪಖ್ಯಾತಿಯನ್ನು ಕಟ್ಟಿಕೊಳ್ಳುವುದಕ್ಕಿಂತ ದೂರವಾಗಿರುವುದೇ ಲೇಸು" ಎಂದು ನಿರ್ಧರಮಾಡಿಕೊಂಡನು. ತನ್ನ ಸಂಸಾರವನ್ನೂ ಆಪ್ತರನ್ನೂ ಕರೆದುಕೊಂಡು, ೧೦೦೦ ರಾವುತರೂ ೨೦೦೦ ಕಾಲಾಳುಗಳೂ ಇದ್ದ ಪರಿವಾರವನ್ನು ಕರೆಸಿಕೊಂಡು, ಶ್ರೀರಂಗಪಟ್ಟಣವನ್ನು ಬಿಟ್ಟು ಹೊರಟು, ಗಜ್ಜಲಹಟ್ಟಿಯ ಮಾರ್ಗವಾಗಿ ಪ್ರಯಾಣಮಾಡಿ, ಸತ್ಯಮಂಗಲವನ್ನು ಸೇರಿ, ಅಲ್ಲಿಯೇ ನೆಲೆಸಿ ರಾಜಧಾನಿಗೆ ದೂರವಾಗಿರಬೇಕೆಂಬ ತನ್ನ ಇಷ್ಟವನ್ನು ಪೂರಯಿಸಿಕೊಂಡನು.

ಇತ್ತ ರಾಜಧಾನಿಯಲ್ಲಿ ನಂಜರಾಜಯ್ಯನು ತಾನೇ ತಾನಾದನು. ಆದರೆ ಸ್ವಲ್ಪ ಕಾಲದಲ್ಲಿಯೇ ಮರಾಟಿಯವರು ಮುತ್ತಿಕೊಂಡು ಬಂದರು. ಅವರನ್ನು ಪ್ರತಿಭಟಿಸಲಾರದೆ ನಂಜರಾಜಯ್ಯನು ಹಣತರಲು ಪ್ರಯತ್ನಿಸುತ್ತಿದ್ದ ವೇಳೆಯಲ್ಲಿ ಹೈದರಲ್ಲಿಯು ದಕ್ಷಿಣ ಪ್ರಾಂತ್ಯದಿಂದ ಬಂದು ರಾಜಧಾನಿಯಲ್ಲಿ ಸಿದ್ಧನಾದನು. ನಂಜರಾಜಯ್ಯನು ಇನ್ನು ಮುಂದೆ ಹೈದರನಿಗೆ ಸೋಲುವ ಪ್ರಸಂಗ ಬಂತು.

# ೨೯ ಹೈದರನೂ ಕರಾಚೂರಿ ನಂಜರಾಜಯ್ಯನೂ

ದಳವಾಯಿ ದೇವರಾಜಯ್ಯನು ಸತ್ಯಮಂಗಲಕ್ಕೆ ಹೊರಟು ಹೋದಮೇಲೆ ರಾಜಧಾನಿಯಲ್ಲಿ ಸರ್ವಶಕ್ತನಾಗಿದ್ದ ಕರಾಚೂರಿಯಾತನಿಗೆ ನಿಶ್ಚಿಂತೆಯಾಗಿರಲಿಲ್ಲ. ಅದೇ ಸಮಯಕ್ಕೆ ಮರಾಟಿಯವರು ರಾಜಧಾನಿಯ ಬಳಿ ಪ್ರತ್ಯಕ್ಷರಾಗಿ ಹಣಕ್ಕೆ ತೊಂದರೆ ಪಡಿಸಿದರು ; ಹಣವಿಲ್ಲವೆಂದು ನಂಜರಾಜಯ್ಯನು ಹೇಳಿದರೂ ಮರಾಟಿಯವರು ಹಟ ಹಿಡಿದು ರಾಜಧಾನಿಗೆ ಮುತ್ತಿಗೆಯನ್ನೇ ಹಾಕಿದರು. ಯುದ್ಧ ಮಾಡುವುದಾಗಿ ನಿಶ್ಚಯ ಮಾಡಿಕೊಂಡು ನಂಜರಾಜಯ್ಯನು ಸಾಹಸದಿಂದ ಹೋರಾಡಿದನು ; ಆದರೆ ಬಲಶಾಲಿಗಳಾದ ಮರಾಟಿಯವರೇ ಗೆದ್ದರು ; ನಂಜರಾಜಯ್ಯನು ಸೋಲನ್ನೊಪ್ಪಿಕೊಂಡು ೩೨ ಲಕ್ಷ ರೂಪಾಯಿಗಳನ್ನು ಕೊಡಲೊಪ್ಪಿಕೊಳ್ಳಬೇಕಾಯಿತು. ಬೊಕ್ಕಸದಲ್ಲಿದ್ದ ಹಣವೂ ಆಭರಣಗಳ ಬೆಲೆಯೂ ಸೇರಿ ೫ ಲಕ್ಷಗಳೇ ಆದವು ; ಉಳಿದ ಹಣಕ್ಕೆ ನಂಜರಾಜಯ್ಯನು ವಿಸ್ತಾರವಾದ ಕ್ಷೇತ್ರಗಳನ್ನು ಅಡಮಾನವಿಡಬೇಕಾಯಿತು.

ಹೀಗೆ ನಂಜರಾಜಯ್ಯನು ಹಣಗಾಡುತ್ತಿರಲು ಅಲ್ಲಿಗೆ ದಿಂಡುಗಲ್ಲು ಪ್ರಾಂತ್ಯದಿಂದ ಹೈದರನು ಬಂದು ಸಿದ್ಧನಾದನು. ಹೈದರನ ಮಿತ್ರನಾಗಿದ್ದ ಖಂಡೇರಾಯನು ದೇವರಾಜಯ್ಯನು ಸತ್ಯಮಂಗಲಕ್ಕೆ ಹೊರಟಕೂಡಲೆ "ನಿನ್ನ ಜಹಗೀರುಗಳು ನಿನ್ನ ಕೈತಪ್ಪಿ ದೇವರಾಜಯ್ಯನಿಂದಿರ ಕೈಸೇರುವಂತಿವೆ. ಆದಷ್ಟು ಬೇಗನೆ ನೀನು ಬರುವುದು ಅವಶ್ಯ" ಎಂದು ಹೈದರನಿಗೆ ಹೇಳಿಕಳುಹಿಸಿದ್ದನು. ಅದರಂತೆ ಹೈದರನು ಹಿಂತಿರುಗಿ ಬಂದು ದುರವಸ್ಥೆಯಲ್ಲಿ ಸಿಲುಕಿದ್ದ ನಂಜರಾಜಯ್ಯನೊಡನೆ "ಅಂತಹ ಸಮಯ ಬಂದಾಗ

ನನಗೆ ಹೇಳಿಕಳುಹಿಸಿದ್ದರೆ ನಾನು ನನ್ನ ದಂಡಿನೊಡನೆ ಬಂದು ಈ ನಷ್ಟವನ್ನು ತಡೆಯುತ್ತಿದ್ದೆ. ಈಗಲಾದರೂ ಮರಾಟೆಯವರಿಗೆ ಉಳಿದ ಹಣ ಕೊಡುವ ಯೋಚನೆ ಮಾಡಬೇಡಿ'' ಎಂದು ಹೇಳಿ ನಂಬಿಕೆ ಹುಟ್ಟಿಸಿದನು. ತರುವಾಯ ದೇವರಾಜಯ್ಯನನ್ನು ಕಾಣಲು ತನಗೆ ಸಲಿಗೆಯಿಲ್ಲದುದರಿಂದ ಖಂಡೇರಾಯನನ್ನು ಸಂಗಡ ಕರೆದುಕೊಂಡು ಸತ್ಯಮಂಗಲಕ್ಕೆ ಹೊರಟನು. ಅಲ್ಲಿ ಖಂಡೇರಾಯನ ಜಾಣತನದಿಂದ ಹೈದರನ ಜಹಗೀರುಗಳು ಉಳಿಯುವಂತಾಯಿತು. ಈ ಕೆಲಸವು ಮುಗಿದ ಕೂಡಲೆ ಹೈದರನು ದಿಂಡುಗಲ್ಲಿಗೆ ಹೊರಟು ತನ್ನ ಸೈನ್ಯವನ್ನು ಸೇರಿಕೊಂಡನು.

ಈ ರೀತಿಯಲ್ಲಿ ಹೈದರನು ಹೊರಟುಹೋದ ತರುವಾಯ ರಾಜಧಾನಿಯಲ್ಲಿ ಕರಾಚೂರಿ ನಂಜರಾಜಯ್ಯನು ಸ್ವಲ್ಪ ಕಾಲದಲ್ಲಿಯೇ ಇರುಕಿನಲ್ಲಿ ಸಿಕ್ಕಿಕೊಂಡನು, ಸೈನಿಕರ ಸಂಬಳಸಾರಿಗೆಗಳು ಬಹು ಕಾಲದಿಂದಲೂ ಸಂದಿರಲಿಲ್ಲ; ಅವುಗಳನ್ನು ಪಡೆಯಲು ಬೇರೆ ಗತಿಗಾಣದೆ ನಂಜರಾಜಯ್ಯನ ಮನೆ ಮುಂದೆ ಸಾಲು ಸಾಲಾಗಿ ಧಾರಣಾವ್ರತ ಹಿಡಿದು ಅವರು ಕುಳಿತುಬಿಟ್ಟರು; ಮನೆಯೊಳಕ್ಕೆ ಆಹಾರದ ದಿನಸಾಗಲಿ ನೀರಾಗಲಿ ಸಾಗುವುದಕ್ಕೇ ಅವಕಾಶವಿಲ್ಲದಾಯಿತು. ನಂಜರಾಜಯ್ಯನು ಗತ್ಯಂತರವಿಲ್ಲದೆ ಉಗ್ರಾಣಗಳ ಧಾನ್ಯದವಸವನ್ನು ಮಾರಿದನು; ಆದರೂ ಸೈನಿಕರ ಸಾಲವು ತೀರದಾಯಿತು. ತತ್ಕಾಲಕ್ಕೆ ಮಾತ್ರ ಅವರ ಮನಸ್ಸಿನ ಕೋಪವಿಳಿಯಿತು.

ಈ ಸಮಾಚಾರವನ್ನು ಕೇಳಿದೊಡನೆಯೇ ಹೈದರನು ಖಂಡೇರಾಯನಿಗೆ ತನ್ನನ್ನು ಸತ್ಯಮಂಗಲದ ಬಳಿ ಕಾಣುವಂತೆ ಹೇಳಿ ಕಳುಹಿಸಿ ತನ್ನ ಸೈನ್ಯದೊಡನೆ ಪ್ರಯಾಣ ಮಾಡಿ ಅಲ್ಲಿಗೆ ಬಂದನು. ಸತ್ಯಮಂಗಲದಲ್ಲಿಯೇ ದೇವರಾಜಯ್ಯನಿದ್ದುದು; ಹೈದರನು ಅಲ್ಲಿ ತಲುಪಿದ ಕೂಡಲೆ ತಾನೊಬ್ಬೊಂಟಿಗನಾಗಿಯೇ ಆತನಲ್ಲಿಗೆ ಹೊರಟು "ರಾಜ್ಯದ ಆಡಳಿತವು ಕೆಡುತ್ತಲಿದೆ. ತಾವು ದೊಡ್ಡವರು; ತಮ್ಮಂತಹವರು ಆಗ್ರಹಗೊಂಡು ದೂರವಾಗಿದ್ದರೆ ರಾಜ್ಯವು ಕೆಡುವುದು.

ತಾವು ಸಮಾಧಾನದಿಂದ ರಾಜಧಾನಿಗೆ ಚಿತ್ತೈಸಿದರೆ ಪುನಃ ಎಲ್ಲರಲ್ಲಿಯೂ ಸಮಾಧಾನವು ಹುಟ್ಟೀತು. ತಾವು ದಯೆಯಿಟ್ಟು ಆ ರೀತಿಗೆಯ್ಯಬೇಕು" ಎಂದು ವಿನಯದಿಂದ ಹೇಳಿ ಖಂಡೇರಾಯನಿಂದಲೂ ಅದೇ ಮಾತುಗಳನ್ನೇ ಹೇಳಿಸಿದನು. ದೇವರಾಜಯ್ಯನು ದೊಡ್ಡಮನಸ್ಸು ಮಾಡಿ ಒಪ್ಪಿದನು. ಆಗ ಮೂವರೂ ಒಟ್ಟುಗೂಡಿ ಗಜ್ಜಲ ಹಟ್ಟಿಯ ಮಾರ್ಗವಾಗಿ ಸಂಚರಿಸಿ ಹರದನಹಳ್ಳಿಯೆಂಬಲ್ಲಿಗೆ ಬಂದು, ಅಲ್ಲಿ ಹದಿನೈದು ದಿನಗಳಿದ್ದು, ಆ ಮೇಲೆ ಮೈಸೂರಿಗೆ ಹೊರಟರು. ಮೈಸೂರನ್ನು ತಲುಪಿದಕೂಡಲೆ ದೇವರಾಜಯ್ಯನು "ನಾನಿಲ್ಲಿಯೇ ಇರುತ್ತೇನೆ. ನನ್ನ ತಮ್ಮಂದಿರು ನಂಜರಾಜಯ್ಯನವರು ಅಂದು ದೊರೆಗಳನ್ನು ಅವಮಾನಪಡಿಸಿ ನಮ್ಮ ಮನೆಗೆ ತಂದಿಟ್ಟಿರುವ ಕಳಂಕವನ್ನು ತೊಡೆದುಹಾಕುವವರೆಗೂ ಅವರನ್ನು ನೋಡಲಾರೆವು. ಈ ಮಾತನ್ನು ನೀವು ತಿಳುಹಿಸಿ" ಎಂದು ಹೈದರಲ್ಲಿ ಮತ್ತು ಖಂಡೇರಾಯರನ್ನು ಶ್ರೀರಂಗಪಟ್ಟಣಕ್ಕೆ ಕಳುಹಿಸಿದನು ಅವರು ಹೇಳಿದ ಮಾತುಗಳಿಗೆ ನಂಜರಾಜಯ್ಯನೊಪ್ಪಿಕೊಂಡು ರಾಜರ ಬಳಿ ಹೋಗಿ ಹಿಂದೆ ತಾನು ಮಾಡಿದ ಮಹಾಪರಾಧವನ್ನು ಮನ್ನಿಸಬೇಕೆಂದು ಕೇಳಿಕೊಂಡು ಅಣ್ಣನನ್ನು ಕಾಣಲು ಸಿದ್ಧನಾದನು. ಹೈದರಲ್ಲಿ ಮತ್ತು ಖಂಡೇರಾಯರು ನಂಜರಾಜಯ್ಯನನ್ನೂ ಮುಖ್ಯಾಧಿಕಾರಿಗಳನ್ನೂ ಇತರ ಪುರಪ್ರಧಾನರನ್ನೂ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಮೆರವಣಿಗೆ ಮಾಡಿಸಿದಂತೆ ಪ್ರಯಾಣ ಮಾಡಿಸಿದರು. ಮೈಸೂರನ್ನು ಸೇರಿದಕೂಡಲೆ ನಂಜರಾಜಯ್ಯನು ದೇವರಾಜಯ್ಯನಿಗೆ ಪ್ರಣಾಮ ಮಾಡಿ ಹಿಂದೆ ತಾನು ಗೈದಿದ್ದ ಅಪರಾಧಗಳನ್ನು ಮನ್ನಿಸಬೇಕೆಂದು ನಮ್ರತೆಯಿಂದ ಕೇಳಿಕೊಂಡನು. ದೇವರಾಜಯ್ಯನೂ ಸಂತುಷ್ಟನಾಗಿ ವಂಶಕ್ಕೆ ಅಂಟಿದ್ದ ಕೆಟ್ಟ ಹೆಸರು ಹೋಯಿತೆಂದು ನೆನಸಿ ತಮ್ಮನನ್ನು ಆಲಿಂಗನ ಮಾಡಿಕೊಂಡು ರಾಜಧಾನಿಗೆ ಎಲ್ಲರೊಡನೆ ಹೊರಟನು. ಆದರೆ ಒಂದು ಸೇರಿದ ೬ ದಿನಗಳಲ್ಲಿಯೇ ವ್ಯಾಧಿಪೀಡಿತನಾಗಿ ದೇವರಾಜಯ್ಯನು ಕಾಲವಾದನು. ಪುನಃ ನಂಜರಾಜಯ್ಯನ ಆಡಳಿತವೇ ಉಳಿಯಿತು. ಹೈದರಲ್ಲಿ ಖಂಡೇ

ರಾಜಪರ ಪ್ರಯತ್ನವು ಈ ರೀತಿ ದುರ್ದೈವದಿಂದ ನೆರವೇರದಾಯಿತು.

ದೇವರಾಜಯ್ಯನು ಸತ್ತಕೂಡಲೆ ಸೈನಿಕರಲ್ಲಿ ಸ್ವಲ್ಪಕಾಲ ಮಾತ್ರ ಅಡಗಿದ್ದ ಅಸಮಾಧಾನವು ಪುನಃ ಪ್ರಬಲವಾಯಿತು. ತಮ್ಮ ಸಂಬಳಗಳು ಸಲ್ಲುವುವೋ ಇಲ್ಲವೋ ಎಂಬ ಶಂಕೆಯು ಅವರಲ್ಲಿ ಪ್ರಬಲವಾಯಿತು. ಅವರಲ್ಲಿ ಎಲ್ಲರೂ ಸಂಜರಾಜಯ್ಯನನ್ನು ಬಯ್ಯಲು ಮೊದಲಿಟ್ಟರು; ಸಂಜರಾಜಯ್ಯನು ಹೊರಗೆ ಕಾಣಿಸಿಕೊಳ್ಳುವುದೇ ಕಷ್ಟವಾಯಿತು. ಇಂತಹ ಸಂದರ್ಭದಲ್ಲಿ ಸಂಜರಾಜಯ್ಯನು ಅಣ್ಣನ ಮರಣದಿಂದ ಮತ್ತೂ ಖಿನ್ನನಾಗಿ ಸ್ವಂದರಲ್ಲಿ ಖಂಡೇರಾಯರನ್ನು ಕರೆಸಿಕೊಂಡು "ನಾಯಕರೇ! ಏನಾದರೂ ಮಾಡಿ ಈ ಸೈನಿಕರ ಗದ್ದಲವನ್ನು ನಿಲ್ಲಿಸಿ. ನಮಗೆ ಈಗ ಶೋಕಸಮಯವಾಗಿದೆ" ಎಂದು ಹೈದರನಿಗೆ ಈ ಕೆಲಸವನ್ನು ಒಪ್ಪಿಸಿದನು. ಆಗ ದೊರೆಗಳೂ ಕೂಡ ಹೈದರನಿಗೆ "ಈಗ ಸಂಭಯಗಳಿಂದ ಫೌಜಿನ ದಾಗೆಯನ್ನು ನಿವಾರಿಸು" ಎಂದು ಹೇಳಿದರು. ಹೈದರನ ಸಹಾಯದಿಂದ ಕಳಲೆಯವರ ಹಾವಳಿಯು ನಿಂತೀತೆಂದು ದೊರೆಗಳು ಆಸೆಪಟ್ಟರು; ಸಂಜರಾಜಯ್ಯನು ತನ್ನ ಕಷ್ಟಗಳಿಂದ ಪಾರಾಗಲು ಹೈದರನ ಸಹಾಯದಿಂದ ಸಾಧ್ಯವೆಂದು ಹೈದರನನ್ನು ನಂಬಿದ್ದನು. ಸೈನಿಕರು ಹೈದರನಲ್ಲಿಯು ಪ್ರಯತ್ನಪಟ್ಟರೆ ತಮ್ಮ ಸಂಬಳಗಳು ದೊರಕುವುವೆಂದಿದ್ದರು. ಇತರ ಜನರು ನೋಡದರಿಬ್ಬರಿಗೂ ಸಮಾಧಾನವನ್ನು ಮಾಡಿಸಿದ ಹೈದರಲ್ಲಿಯೇ ಮುಂದಕ್ಕೆ ಪ್ರಬಲನಾಗುವನೆಂದು ತಿಳಿದಿದ್ದರು. ಹೀಗೆ ಎಲ್ಲರಿಗೂ ಹೈದರನು ಬೇಕಾದವನಾದನು.

ಸೈನ್ಯದಲ್ಲಿ ಗುಮಾಸ್ತೆಗಳೂ ಶಾನಭಾಗರೂ ಲೆಕ್ಕಗಳನ್ನಿಡುವುದರಲ್ಲಿ ಮೋಸ ಮಾಡಿ ಸುಳ್ಳು ಲೆಕ್ಕಗಳನ್ನಿಡುವ ಪದ್ಧತಿಯು ಹೈದರನಿಗೆ ತಿಳಿದಿತ್ತು. ಆದ್ದರಿಂದ ಹೈದರನು ಅವರೆಲ್ಲರನ್ನೂ ಕರೆಸಿ ಕೆಲವರನ್ನು ಗದರಿಸಿ ಕೆಲವರನ್ನು ಹಿಂಸೆಗೆ ಗುರಿಮಾಡಿ ನಿಜಸ್ಥಿತಿಗಳನ್ನು ತಿಳಿದನು. ರಾಜಧಾನಿಯಲ್ಲಿದ್ದ ಆನೆ ಕುದುರೆಗಳನ್ನು

ಮೊದಲುಗೊಂಡು ಎಲ್ಲ ವಸ್ತುಗಳನ್ನೂ ತರಿಸಿದನು. ಈ ಒಟವಾಡೆಯ ಗಲಭೆಯು ಹೆಚ್ಚಾಗಿಯೇ ಇತ್ತು; ಎಲ್ಲಿಯೂ ಅಕ್ರಮ ನಡೆಯದಂತೆ ಹೈದರನು ರಾಜಧಾನಿಯಲ್ಲಿ ತನ್ನ ಸ್ವಂತ ಸೈನ್ಯದವರನ್ನೇ ಕಾವಲಿಗಾಗಿ ನಿಯಮಿಸಿದನು. ತರುವಾಯ ಮುಖ್ಯಾಧಿಕಾರಿಗಳನ್ನೂ ಸಿರಿವಂತರಾದ ಪ್ರಜೆಗಳನ್ನೂ ಕರೆಕಳುಹಿಸಿ ನಯಭಯಗಳಿಂದ ಅವರಿಂದ ನಜರಾಣೆಯನ್ನು ತೆಗೆದುಕೊಂಡು ಹಣವನ್ನು ಕೂಡಿಸಿದನು. ಸೈನಿಕರೆಲ್ಲರಿಗೂ ಬಾಕಿಯಿದ್ದ ಸಂಬಳಗಳನ್ನು ಕೊಡುವುದಾಗಿ ಸಾರಿದನು; ಆದರೆ ಅದೇ ಸಮಯದಲ್ಲಿಯೇ ತನ್ನ ಸ್ವಂತ ಸೇನೆಯಲ್ಲಿ ಆಪ್ತರಾಗಿದ್ದ ನಾಯಕರನ್ನು ಕರೆಸಿ "ಈ ಸೈನಿಕರು ಇಲ್ಲಿ ಸಂಬಳಗಳನ್ನು ಪಡೆದು ಹಣದ ಚೀಲಗಳನ್ನು ಹೊತ್ತುಕೊಂಡು ಕೋಟೆಯನ್ನು ಬಿಟ್ಟು ತಮ್ಮ ಊರುಗಳಿಗೆ ಹೊರಡುತ್ತಾರೆ. ನೀವು ವೇಷವನ್ನು ಬದಲಾಯಿಸಿಕೊಂಡು ಅವರ ಮಾರ್ಗದಲ್ಲಿ ಕಾದಿದ್ದು ಅವರು ಕಾಣಿಸಿಕೊಂಡ ಕೂಡಲೆ ಅವರಿಂದ ಅವರ ಗಂಟನ್ನು ಕಸುಕೊಂಡು ನನಗೆ ಒಪ್ಪಿಸತಕ್ಕದ್ದು" ಎಂದು ರಹಸ್ಯವಾಗಿ ಆಜ್ಞೆ ಕೊಟ್ಟನು. ನಡೆದುದೂ ಹಾಗೆಯೇ ಆಯಿತು. ಸಂಬಳಗಳನ್ನು ತೆಗೆದು ಗಂಟು ಕಟ್ಟಿಕೊಂಡು ಸೈನಿಕರಾಗಿದ್ದವರು ಕೋಟೆಯಿಂದ ಹೊರಟು ತಮ್ಮ ಊರುಗಳ ದಾರಿಗಳನ್ನು ಹಿಡಿದದ್ದೇ ತಡ, ಅಲ್ಲಿ ಕಾದಿದ್ದ ಹೈದರನ ಸೈನಿಕರು ಕಳ್ಳರಂತೆ ಅವರಮೇಲೆ ಬಿದ್ದು ಗಂಟನ್ನು ಕಸಿದುಕೊಂಡುಬಿಟ್ಟರು. ಅತ್ತ ಒಟವಾಡೆಯಾದ ಹಣವೆಲ್ಲವೂ ಮರುದಿನ ಈ ಉಪಾಯದಿಂದ ಹೈದರನ ಬೊಕ್ಕಸಕ್ಕೆ ಬಂದು ಸೇರಿತು. ಮೊದಲು ಹೈದರನು ನಾಲ್ಕು ಸಾವಿರ ಕುದುರೆಯವರನ್ನು ಈ ರೀತಿ ತೊಲಗಿಸಿ ಅವರ ಸೈನ್ಯವನ್ನು ಬರತರಫ್ ಮಾಡಿಸಿದನು. ದಂಗೆಯೇಳಲು ಸಿದ್ಧರಾಗಿದ್ದವರ ತೊಂದರೆಯನ್ನು ತಪ್ಪಿಸಿಕೊಂಡಮೇಲೆ ಹೈದರನು ಉಳಿದವರಿಗೆ ಸ್ವಲ್ಪಭಾಗವನ್ನು ಸಲ್ಲಿಸಿ, ಉಳಿದ ಭಾಗವು ಮುಂದಕ್ಕೆ ಸಲ್ಲುವಂತೆ ತನ್ನ ವಾಗ್ದಾನವನ್ನೇ ಕೊಟ್ಟನು. ಸೈನಿಕರಿಗೆ ಹೈದರಸಲ್ಲಿ ನಂಬಿಕೆಯಿತ್ತು; ಆದ್ದರಿಂದ ಅವನ ಮಾತನ್ನು ನಂಬಿದರು.

ಇದೇ ವೇಳೆಯಲ್ಲಿಯೇ ಮರಾಟೆಯವರು ದಂಡೆತ್ತಿ ಬಂದರು. ಎಲ್ಲರೂ ಹೈದರಲ್ಲಿಯ ಸೈನ್ಯದ ಮೇಲೆಯೇ ಭಾರವನ್ನು ಹಾಕಿದರು. ಹೈದರನೂ ದಂಡೆತ್ತಿ ಹೊರಟು ಚನ್ನಪಟ್ಟಣದ ಬಳಿ ಮರಾಟೆಯವರೊಡನೆ ಚಾತುರ್ಯದಿಂದ ಯುದ್ಧವನ್ನು ನಡೆಸಿದನು. ಮರಾಟೆಯವರಿಗೆ ಬೇಸರವಾದುದಲ್ಲದೆ ಪ್ರಬಲವಾದ ಕಾರಣಗಳು ಇತರೆಡೆಗಳಲ್ಲಿ ಹುಟ್ಟಿಕೊಂಡು ಹಿಂತಿರುಗುವ ಅವಶ್ಯಕತೆಯು ಹುಟ್ಟಿತು; ಅವರು ತಮ್ಮ ಹಣ ಸಲ್ಲುವುದಕ್ಕೆ ಆತುರದ ಏರ್ಪಾಡುಗಳನ್ನು ಹೈದರನೊಡನೆ ನಡೆಸಿಕೊಂಡು ಪುಣೆಗೆ ಹೊರಟರು. ಹೈದರನ ಕೀರ್ತಿಯು ಮೈಸೂರು ರಾಜ್ಯದಲ್ಲೆಲ್ಲ ಹರಡಿತು. ರಾಜಧಾನಿಗೆ ಹೈದರನು ಹಿಂತಿರುಗಿದಾಗ ಎಲ್ಲರೂ ಅವನನ್ನು ಗೌರವಿಸಿದರು. ದೊರೆಗಳು ಆಸ್ಥಾನದಲ್ಲಿ ಕುಳಿತು ಹೈದರನನ್ನು ಮರ್ಯಾದೆಯಿಂದ ಬರಮಾಡಿಕೊಂಡು ಫತ್ತೇ ಹೈದರಾಬಹಾದುರ್ ಎಂಬ ಬಿರುದನ್ನು ಕೊಟ್ಟರು. ಆಸ್ಥಾನದಲ್ಲಿದ್ದ ಕರಾಚೂರಿ ನಂಜರಾಜಯ್ಯನು ಹೈದರನು ಸಮೀಪಿಸಿದ ಕೂಡಲೆ ಮರ್ಯಾದೆತೋರಲು ಎದ್ದು ನಿಂತು ಅವನನ್ನು ತಬ್ಬಿಕೊಂಡನು.

ಹೈದರನು ಪ್ರಬಲನಾಗಿದ್ದ ಕಾಲದಿಂದ ದೊರೆಗಳ ಮನಸ್ಸಿನಲ್ಲಿ ತಮ್ಮ ದುರ್ದಿನಗಳು ಶೀಘ್ರದಲ್ಲಿಯೇ ಕಳೆದುಬಿಡಬಹುದೆಂದು ತೋರಿತ್ತು; ದೇವರಾಜಯ್ಯನ ಮರಣಾನಂತರ ಆ ಆಸೆಯು ಇನ್ನೂ ಬಲಿಯಿತು. ಮರಾಟೆಯವರೊಡನೆ ಚನ್ನಪಟ್ಟಣದಲ್ಲಿ ಹೈದರನು ಹೆಣಗಾಡುತ್ತಿದ್ದ ಕಾಲದಲ್ಲಿ ಖಂಡೇರಾಯನು ಅರಮನೆಗೆ ಆಗಾಗ್ಗೆ ಹೋಗಿ ಬರುತ್ತ ರಾಜರಿಗೂ ರಾಣೀವಾಸದವರಿಗೂ ಆಪ್ತನೆನಿಸಿದನು. ಜಯಶಾಲಿಯಾಗಿ ಹೈದರನು ಹಿಂತಿರುಗಿ ಬಂದಮೇಲೆ ಖಂಡೇರಾಯನು ನಂಜರಾಜಯ್ಯನ ಅಧಿಕಾರವನ್ನು ಕೊನೆಗಾಣಿಸುವ ಸಂಧಾನವನ್ನು ದೊರೆಗಳೊಡನೆಯೂ ಹೈದರನೊಡನೆಯೂ ಆಲೋಚಿಸಿ ಹೂಡಿದನು. ಸೈನ್ಯದಲ್ಲಿ ಕೆಲವರು ಅಧಿಕಾರಗಳನ್ನು ಖಂಡೇರಾಯನು ಗೋಪ್ಯವಾಗಿ ಕರೆಯಿಸಿಕೊಂಡು ಅವರು ಮಾಡಬೇಕಾಗಿದ್ದುದನ್ನು ಹೇಳಿಕೊಟ್ಟು ಕಳುಹಿಸಿದನು.

ಮೊದಲು ಸೈನ್ಯಾಧಿಕಾರಿಗಳು ಹೈದರನ ಬಿಡದಿಗೆ ಹೊರಟು ತಮ್ಮ ಸಂಬಳಗಳು ಬಹಳ ಕಾಲದಿಂದಲೂ ಸಂದಾಯವಾಗದಿವೆಯೆಂದೂ ಎಷ್ಟು ಕಾಲವನ್ನು ತಾವು ತಳ್ಳಬಹುದೆಂದೂ ವಿನಯದಿಂದ ಹೇಳಿಕೊಂಡು ತಮ್ಮ ಸಂಬಳಗಳು ದೊರಕುವಂತೆ ಪ್ರಯತ್ನಪಡಬೇಕೆಂದು ಆತನನ್ನು ಕೇಳಿಕೊಂಡರು. ಹೈದರನು ಅದಕ್ಕುತ್ತರವಾಗಿ "ನನ್ನ ಸೈನ್ಯದ ಖಟವಾಡೆಗೆ ಗೊತ್ತಾದ ಆದಾಯವು ನನ್ನ ಕೈಯಲ್ಲಿಯೇ ಇದೆ. ಆದ್ದರಿಂದ ನನ್ನ ಸೈನಿಕರಿಗೆ ಕ್ರಮವಾಗಿ ಸಂಬಳಗಳನ್ನು ಸಲ್ಲಿಸಲು ನಾನು ಶಕ್ತನಾಗಿದ್ದೇನೆ. ನಿಮಗಾಗಿ ಗೊತ್ತಾಗಿರುವ ಆದಾಯವು ನನ್ನ ಸ್ವಾಧೀನಕ್ಕೆ ಬರುವುದಿಲ್ಲ; ನಾನು ಹೇಗೆ ನಿಮಗೆ ಕೊಡಿಸಲಿ?" ಎಂದನು. ಅದಕ್ಕವರು "ಆ ಆದಾಯವು ನಂಜರಾಜಯ್ಯನವರ ಸ್ವಾಧೀನವಾಗಿರುತ್ತದೆ. ಅವರಿಗೆ ಹೇಳಿ ಪ್ರಯತ್ನಪಟ್ಟರೆ ಆಗುವುದು" ಎಂದರು. ದಿನೇ ದಿನೇ ಸೈನಿಕರು ಹೈದರನ ಬಿಡಾರಕ್ಕೆ ಬಂದು ಅವನನ್ನು ಬಲವಂತಪಡಿಸಿದರು; ಕಡೆಗೊಂದು ದಿನ ತಮ್ಮೆಲ್ಲರನ್ನೂ ಹೈದರನೇ ಮುಂದಾಳಾಗಿ ಕರೆದುಕೊಂಡು ನಂಜರಾಜಯ್ಯನ ಮನೆಯ ಮುಂದೆ ಧಾರಣಾವ್ರತ ಹಿಡಿದು ಮುಷ್ಕರವಾಗಬೇಕೆಂದು ನಿರ್ಬಂಧಪಡಿಸಿದರು ಹೈದರನು ಬಲವಂತಕ್ಕೊಪ್ಪಿದಂತೆ ಒಪ್ಪಿಕೊಂಡನು. ಇದರ ವಿವರವು ಸ್ವಲ್ಪ ಸ್ವಲ್ಪವಾಗಿ ನಂಜರಾಜಯ್ಯನ ಕಿವಿಗೆ ಆಗಲೇ ಬಿದ್ದಿತ್ತು. ಹೈದರನೂ ಇದರಲ್ಲಿ ಸೇರಿದ್ದುದರಿಂದ ಪಿತೂರಿಯು ಬಲವಾದುದೆಂದು ನಂಜರಾಜಯ್ಯನು ಮನಸ್ಸಿನಲ್ಲಿ ಗ್ರಹಿಸಿದನು; ಹಿಂದೆ ನಡೆದ ಸೈನಿಕರ ಮುಷ್ಕರವಿನ್ನೂ ನೆನಪಿನಲ್ಲಿತ್ತು. ಆದ್ದರಿಂದ ಆತನು ಬೇಗಲೇ ನಿಶ್ಚಯಮಾಡಿಕೊಂಡನು. ಹೈದರನನ್ನು ಮನೆಯೊಳಕ್ಕೆ ಕರೆಸಿಕೊಂಡು ಅಧಿಕಾರದಿಂದ ನಿವೃತ್ತನಾಗಲು ತಾನು ಒಪ್ಪಿರುವುದಾಗಿಯೂ ತನ್ನ ವಿಶ್ರಾಂತಿಗಾಗಿ ಸಾಕಾದಷ್ಟು ಉತ್ಪತ್ತಿಯನ್ನು ಕೊಡಿಸಿದರೆ ತಾನು ರಾಜಧಾನಿಯನ್ನು ಬಿಟ್ಟು ಬೇರೆಡೆಯಲ್ಲಿರುವುದಾಗಿಯೂ ತಿಳಿಸಿದನು. ತರುವಾಯ ತನ್ನ ಮನೆ ಬಾಗಿಲಿಗೆ ಬಂದು "ಸೈನಿಕ ಜನರೇ! ಈಗ ನಾವು ನಿವೃತ್ತರಾಗಲು

ನಿಶ್ಚಯಿಸಿದ್ದೇವೆ. ದೊರೆಗಳೂ ನನಗೆ ವಿಶ್ರಾಂತಿಯನ್ನು ಕೊಡಲು ಮನಸಮಾಡಿ ತಾವೇ ಆಡಳಿತವನ್ನು ಕೈಕೊಳ್ಳಲು ಇಷ್ಟಪಟ್ಟಿರುತ್ತಾರೆ. ನಾನು ಅಧಿಕಾರವನ್ನು ಬಿಟ್ಟು ಹೊರಡಲು ಸಿದ್ಧನಾಗಿದ್ದೇನೆ. ಆದ್ದರಿಂದ ನನ್ನನ್ನು ತೊಂದರೆಪಡಿಸುವುದು ಧರ್ಮವಲ್ಲ" ಎಂದೆಲ್ಲರಿಗೂ ಹೇಳಿದನು. ಇದನ್ನೂ ಪಿತೂರಿಗಾರರು ನಿರೀಕ್ಷಿಸಿಯೇ ಇದ್ದರು; ಬಾಗಲಿನ ಬಳಿಯಿದ್ದ ಕೆಲವರು ಸೈನಿಕರು "ಇದು ನ್ಯಾಯವೇ ಸರಿ. ಇನ್ನು ಮುಂದೆ ಇಲ್ಲಿ ಮುಷ್ಕರವಿಲ್ಲ" ಎಂದು ಬಾಗಿಲ ಕಾಯುವುದನ್ನು ಬಿಟ್ಟರು. ತರುವಾಯ ಸೈನಿಕರು ಹೈದರನನ್ನು ಮುಂದಿಟ್ಟುಕೊಂಡು ಅರಮನೆಗೆ ಹೊರಟರು.

ಅರಮನೆಯ ಮುಂದೆ ಒಂದುಕೂಡಲೆ ರಾಜರನ್ನು ಕಾಣಲು ಖಂಡೇರಾಯನು ಒಳಕ್ಕೆ ಒರಬಹುದೆಂದು ಸಮುಖದ ದೂತನೊಬ್ಬನು ಬಂದು ಹೇಳಿದನು. ಅದರಂತೆಯೇ ಖಂಡೇರಾಯನು ಅರಮನೆಯೊಳಕ್ಕೆ ಹೋಗಿ ರಾಜರೊಡನೆ ಮಾತನಾಡಿ ಬಂದು "ರಾಜರು ನಂಜರಾಜಯ್ಯಂದಿರು ನಿವೃತ್ತರಾಗುವಂತೆ ತಕ್ಕ ಏರ್ಪಾಡುಗಳನ್ನು ಮಾಡುತ್ತಾರೆ. ಹೈದರಲ್ಲಿಯು ಎಲ್ಲರ ಎದುರಿನಲ್ಲಿಯೂ 'ಇನ್ನು ಮುಂದೆ ನಂಜರಾಜಯ್ಯನ ನೌಕರಿಗೆ ಆಸೆಪಡುವುದಿಲ್ಲ, ರಾಜಾಜ್ಞೆಯನ್ನೇ ಶಿರಸಾವಹಿಸುತ್ತೇನೆ' ಎಂದು ಪ್ರಮಾಣ ಮಾಡಿದರೆ ಸೈನಿಕರ ಹೇಳಿಕೆಯನ್ನು ರಾಜರು ಲಾಲಿಸುತ್ತಾರೆ" ಎಂದು ಹೇಳಿದನು. ಹೈದರನು ಬಲವಂತಕ್ಕೆ ಸಿಕ್ಕಿದವನಂತೆ ತೋರ್ಪಡಿಸುತ್ತ ಅದೇ ರೀತಿಯಲ್ಲಿ ಪ್ರಮಾಣ ಮಾಡಿದನು. ಕೂಡಲೆ ಅರಮನೆಯ ಒಳಕ್ಕೆ ಹೋಗಿ ರಾಜರನ್ನು ಕಂಡುಬಂದು ಸೈನಿಕರಿಗೆ "ನಿಮ್ಮ ಸಂಬಳಗಳ ಬಟವಾಡೆಗೆ ತಕ್ಕ ಏರ್ಪಾಡುಗಳು ನಡೆಯುತ್ತಲಿವೆ. ಅವುಗಳೆಲ್ಲವೂ ಕ್ರಮಪಡುವುದಕ್ಕೆ ನಾಲ್ಕೈದು ದಿನಗಳಾದೀತು. ನೀವು ಸ್ವಲ್ಪ ಸಿದಾನಿಸಬೇಕು. ನಾನೇ ನಿಮ್ಮ ಸಂಬಳಗಳಿಗೆ ಜವಾಬ್ದಾರನಾಗಿರುತ್ತೇನೆ" ಎಂದು ಹೇಳಿದನು.

ಸೈನಿಕರು ಆ ಮಾತುಗಳನ್ನು ನಂಬಿ ಸಮಾಧಾನದಿಂದ ಅಲ್ಲಿಂದ ಹೊರಟರು. ಈ ನಾಟಕವು ಇಲ್ಲಿಗೆ ಮುಗಿದಂತಾಯಿತು.

ಅನಂತರ ಖಂಡೇರಾಯನಿಗೆ ದಿವಾನ ಪದವಿಯೂ ಹೈದರನಿಗೆ ದಳವಾಯಿತನವೂ ಗೊತ್ತಾದವು. ನಂಜರಾಜಯ್ಯನಿಗೆ ಸರ್ವಾಧಿಕಾರಿಯೆಂಬ ಹೆಸರುಮಾತ್ರ ಉಳಿಯಿತು. ರಾಜ್ಯದ ಉಪಯೋಗಕ್ಕಾಗಿ ೧೦೦೦ ಕುದುರೆಗಳನ್ನೂ ೩೦೦೦೦ ಪದಾತಿಗಳನ್ನೂ ಆತನು ಇಟ್ಟುಕೊಂಡಿರಬೇಕೆಂದೂ ಅದಕ್ಕಾಗಿ ೩ ಲಕ್ಷ ವರಹಗಳ ಉತ್ಪತ್ತಿಯುಳ್ಳ ಜಹಗೀರು ಆತನಿಗಿರಬೇಕೆಂದೂ ನಿರ್ಧರವಾಯಿತು. ಅದರಂತೆ ನಂಜರಾಜಯ್ಯನು ರಾಜಧಾನಿಯನ್ನುಬಿಟ್ಟು ಹೊರಟು ನಂಜನಗೂಡಿನಲ್ಲಿ ಶ್ರೀಕಂಠೇಶ್ವರದೇವರ ದರ್ಶನಮಾಡಿಕೊಂಡು ಹೊರಡುವ ನೆಪದಿಂದ ಮೈಸೂರು ಮಾರ್ಗವನ್ನುಹಿಡಿದು ಮೈಸೂರನ್ನು ಸೇರಿದಕೂಡಲೆ ಅಲ್ಲಿಯೇ ನಿಂತುಬಿಟ್ಟನು. ಕೆಲವು ತಿಂಗಳುಗಳು ಹೀಗೆ ಕಳೆದವು; ಪೂರ್ವ ರಾಜಧಾನಿಯಾದ ಮೈಸೂರಿನಲ್ಲಿಯೇ ಈತನಿದ್ದುದು ತೃಪ್ತಿಕರವಾಗಿರಲಿಲ್ಲ. ಇದಲ್ಲದೆ ನಂಜರಾಜಯ್ಯನು ಮೈಸೂರ ಕೋಟೆಯನ್ನು ಭದ್ರಪಡಿಸುತ್ತಿದ್ದನು. ಆಗ ಆತನಿಗಾಗಿ ಗೊತ್ತಾಗಿದ್ದ ಜಹಗೀರುಗಳನ್ನು ಪುನಃ ಅರಮನೆಯ ಸ್ವಾಧೀನಕ್ಕೆ ತೆಗೆದುಕೊಂಡು ರಾಜರು "ನೀವು ಮೈಸೂರನ್ನುಬಿಟ್ಟು, ಮತ್ತೆಲ್ಲಿಯಾದರೂ ವಾಸಮಾಡಬೇಕು" ಎಂದು ಹೇಳಿಕಳುಹಿಸಿದರು. ಆಗ ನಂಜರಾಜಯ್ಯನು ಯಾವ ಮಾರ್ಗವನ್ನೂ ಕಾಣವೆ ಮನಸ್ಸಿನಲ್ಲಿ ಹೈದರನು ದ್ರೋಹಮಾಡಿದನೆಂದು ತಿಳಿದು ಹೈದರನಿಗೆ "ನೀನು ನನ್ನ ಉಪ್ಪುತಿಂದು ಬೆಳೆದಿದ್ದೀಯೆ. ಈಗಿನ ಅಧಿಕಾರವೆಲ್ಲವೂ ನನ್ನಿಂದಲೇ ಅಲ್ಲವೇ ನಿನಗೆಬಂದುದು. ಆದರೂ ದ್ರೋಹಿಯಾಗಿ ನಡೆಯುತ್ತ ಈಗ ನನ್ನ ತಲೆಯನ್ನುಳಿಸಿಕೊಳ್ಳಲು ಮಾರ್ಗವಿಲ್ಲದೆ ಮಾಡಿರುತ್ತೀಯೆ! ನಿನ್ನ ಇಷ್ಟವಿದ್ದಂತೆಮಾಡು; ನಿನ್ನ ಕೈಲಾದುದನ್ನುಮಾಡು. ನಾನೇನೋ ಮೈಸೂರನ್ನುಬಿಟ್ಟು ಕದಲುವುದಿಲ್ಲ" ಎಂದು ಹೇಳಿಕಳುಹಿಸಿದನು. ಈ ಸಂಗತಿಯನ್ನು ತಿಳಿದಕೂ

ಡಲೆ ದೊರೆಗಳು ಹೈದರಿಗೆ ಸೈನ್ಯದೊಡನೆ ಹೊರಟು ಮೈಸೂರು ಕೋಟೆಯನ್ನು ಮುತ್ತಿಹಿಡಿದು, ಹಿಂದಿನ ರಾಜಾಜ್ಞೆಯನ್ನು ನಂಜರಾಜಯ್ಯನ ವಿಷಯದಲ್ಲಿ ನಡೆಸತಕ್ಕದ್ದೆಂದು ಆಜ್ಞೆಮಾಡಿದರು. ಅದರಂತೆಯೇ ಹೈದರನು ಹೊರಟು ಮೈಸೂರನ್ನು ಮುತ್ತಿದನು. ಮೂರುತಿಂಗಳಕಾಲ ಮುತ್ತಿಗೆಯು ನಡೆಯಿತು. ಕಡೆಗೆ ನಂಜರಾಜಯ್ಯನು ಸೋಲನ್ನೊಪ್ಪಿಕೊಂಡು ಮೈಸೂರಿನಿಂದ ೨೫ ಮೈಲಿ ದೂರದಲ್ಲಿರುವ ಕೊಣನೂರಿನಲ್ಲಿರುತ್ತೇನೆಂದೊಪ್ಪಿಕೊಂಡು ಮೈಸೂರನ್ನುಬಿಟ್ಟು ತೆರಳಿದನು.

ನಂಜರಾಜಯ್ಯನ ಗತಿಯು ಈರೀತಿಯಾಯಿತು. ಆದರೆ ಇದೇ ಕಡೆಯಾಗಲಿಲ್ಲ. ಪುನಃ ಹೈದರನ ಸಂಧಾನದಿಂದಲೇ ಶ್ರೀರಂಗಪಟ್ಟಣಕ್ಕೆಬಂದು ಕಡೆಗೆ ಅವಮಾನಪಟ್ಟು ಪ್ರಾಣಬಿಡುವ ಕಾಲವನ್ನೂ ಅನುಭವಿಸಬೇಕಾಯಿತು.

# ೩೦ ಹೈದರಲ್ಲಿಯೂ ಹರಿಸಿಂಗನೂ

ಮೈಸೂರಿನ ಸೈನ್ಯದಲ್ಲಿ ದಳವಾಯಿಗಳ ಕಾಲದಲ್ಲಿ ಇವರಿಬ್ಬರೂ ಶೂರರೆಂದು ಹೆಸರುಪಡೆದಿದ್ದವರು. ಹರಿಸಿಂಗನನ್ನು ದಳವಾಯಿ ದೇವರಾಜಯ್ಯನು ಕೆಲಸದಲ್ಲಿ ಸೇರಿಸಿಕೊಂಡು ಸನ್ಮಾನಿಸುತ್ತಲಿದ್ದನು; ಕರಾಚೂರಿ ನಂಜರಾಜಯ್ಯನು ಹೈದರನನ್ನು ಕೆಲಸಕ್ಕೆ ಸೇರಿಸಿ ದೊಡ್ಡವನನ್ನಾಗಿಮಾಡಿದನು. ಹೈದರನು ಶೂರನೂ ಚತುರನೂ ಆಗಿದ್ದರೂ ನಡೆನುಡಿಗಳಲ್ಲಿ ಗಾಂಭೀರ್ಯವಿಲ್ಲದೆ ಇದ್ದನು. ಇದನ್ನು ಕಂಡು ಹರಿಸಿಂಗನೂ ಆತನ ಕಡೆಯವರೂ ಹೈದರನನ್ನು ಹಾಸ್ಯಮಾಡುತ್ತಿದ್ದರು; ಮತ್ತು ಹೈದರನು ಸಂಧಾನದಿಂದಲೇ ದೊಡ್ಡ ಪದವಿಗೇರಿದನೆಂದು ಹೇಳುತ್ತ, ಸಮಯ ಬಂದಂತೆ ಹೈದರನಿಗೆ ಹೆಚ್ಚು ಹೆಚ್ಚು ಅಧಿಕಾರವನ್ನು ಕೊಡುವುದು ಯುಕ್ತವಲ್ಲವೆಂದು ದೇವರಾಜಯ್ಯನಿಗೆ ಹೇಳುತ್ತಿದ್ದರು. ಹೈದರನಿಗೂ ಹರಿಸಿಂಗನನ್ನು ಕಂಡರೆ ಆಗುತ್ತಿರಲಿಲ್ಲ. ಹರಿಸಿಂಗನು ರಾಜಪುತ್ರನಾಗಿದ್ದನು; ರಾಜಪುತ್ರ ಜಾತಿಯ ಗುಣಗಳು ಆತನಿಗೆ ಸಹಜವಾಗಿದ್ದುವು; ಆ ಗುಣಗಳು ಹೈದರನಲ್ಲಿರಲಿಲ್ಲ. ಆದ್ದರಿಂದ ಹೈದರನಿಗೆ ಆತನಲ್ಲಿ ದ್ವೇಷವಾಗಿತ್ತು. ಹರಿಸಿಂಗನು ಹೈದರನನ್ನು ತನ್ನ ಸಮಾನನಂತೆಕಂಡು ಮರ್ಯಾದೆ ಮಾಡುತ್ತಿರಲಿಲ್ಲ; ಎದುರುಸಲ್ಲಿ ಕಂಡಾಗ "ಏನು ನಾಯಕರೇ" ಎಂಬ ಮಾತುಗಳಷ್ಟೋ ಅಷ್ಟೇ ಹರಿಸಿಂಗನ ಬಾಯಿಯಿಂದ ಹೊರಡುತ್ತಿದ್ದುವು.

ಕರಾಚೂರಿ ನಂಜರಾಜಯ್ಯನು ತಿರುಚನಾಪಳ್ಳಿಯ ಪ್ರಾಂತ್ಯದಲ್ಲಿ ಇಂಗ್ಲೀಷರ ಮತ್ತು ಫ್ರೆಂಚರ ವ್ಯಾಜ್ಯದಲ್ಲಿಹೊಕ್ಕು ತನ್ನ ಕೈತೋರಬೇಕೆಂದು ಹವಣಿಸುತ್ತಿದ್ದಾಗ ಇವರಿಬ್ಬರಿಗೂ ವಿಷಮ

ಕಾಲವೊಂದು ಒದಗಿತು. ಒಂದು ಸಂದರ್ಭದಲ್ಲಿ ಇಂಗ್ಲೀಷರದಳವೊಂದು ಮರಗಳ ಗುಂಪಿನ ಮರೆಯಲ್ಲಿ ಸಂಚರಿಸುತ್ತಿತ್ತು; ಆಗ ಅವರಮೇಲೆನುಗ್ಗಿ ಹೊಡೆದೋಡಿಸಬೇಕೇ ಬೇಡವೇ ಎಂಬ ವಿಚಾರವು ಹೊಂಚುತ್ತಿದ್ದ ಹರಿಸಿಂಗನ ಮನಸ್ಸಿನಲ್ಲಿಯೂ ಹೈದರನ ಮನಸ್ಸಿನಲ್ಲಿಯೂ ಏಕಕಾಲದಲ್ಲಿ ತೋರಿತು. ಇಬ್ಬರೂ ಈರೀತಿಯಲ್ಲಿ ಫಲಾಫಲಗಳನ್ನು ಗುಣಿಸುತ್ತ ಒಬ್ಬರನ್ನೊಬ್ಬರು ಹೊಂಚಿನೋಡುತ್ತಿದ್ದ ವೇಳೆಯಲ್ಲಿ ಹೈದರನಕಡೆ ಮೀರಲ್ಲಿರಸಾ ಎಂಬಾತನ ಕುದುರೆಯು ಲವಲವಿಕೆ ಹೆಚ್ಚಾಗಿ ತುಂಟಾಟಕ್ಕೆ ಮೊದಲುಮಾಡಿತು; ಅದಕ್ಕೆ ಆತನೆರಡೇಟನ್ನುಕೊಡಲು ಅದಕ್ಕಿನ್ನೂರೇಗಿ ಆತನನ್ನು ಹೊತ್ತುಕೊಂಡು ಇಂಗ್ಲೀಷುಸೈನ್ಯವಿದ್ದೆಡೆಗೆ ದೌಡಾಯಿಸಿತು. ಇದನ್ನು ನೋಡಿದ ಹರಿಸಿಂಗನು "ಓಹೋ! ಹೈದರನ ಅಧಿಕಾರಿಯು ಶತ್ರುಗಳಮೇಲೆ ಹೊರಟಿದ್ದಾನೆ; ಅವನ ಸೈನ್ಯವೂ ಇನ್ನೊಂದೆರಡು ಕ್ಷಣದಲ್ಲಿಯೇ ಆತನಹಿಂದೆ ಹೊರಡುವುದು. ಶತ್ರುಗಳನ್ನು ಹೊಡೆದೋಡಿಸಿದ ಹೆಸರು ನಮಗೆ ತಪ್ಪಿಹೋಗುವುದು. ಆದ್ದರಿಂದ ನಾನು ಸುಮ್ಮನಿರಬಾರದು" ಎಂದುಕೊಂಡು ತನ್ನ ಸೈನಿಕರಿಗೆ ಆಜ್ಞೆಕೊಟ್ಟು ತನ್ನ ದಳವನ್ನು ಇಂಗ್ಲೀಷರಮೇಲೆ ಬಿಟ್ಟನು. ಎಲ್ಲ ಕಡೆಯಲ್ಲೂ ತನ್ನ ಸೈನಿಕರನ್ನು ಹಂಚಿಕೊಟ್ಟು, ಇಂಗ್ಲೀಷರು ತಮ್ಮ ಫಿರಂಗಿ ಬಂದೂಕುಗಳನ್ನು ಹಾರಿಸುವುದಕ್ಕೆಮೊದಲೇ ಅವರ ಪಲ್ಟನುಗಳನ್ನು ಕತ್ತರಿಸಿಬಿಟ್ಟನು. ಇತ್ತ ಹೈದರನು ಮೊದಲು ತುಂಟಕುದುರೆಯೋಡುವುದನ್ನೂ ತರುವಾಯ ಹರಿಸಿಂಗನು ಉರುಬಿಕೊಂಡು ಹೊರಟುದನ್ನೂ ಕಂಡು ಹಿಂದೆಯೇ ಬಂದು ಇಂಗ್ಲೀಷರ ಫಿರಂಗಿಗಳನ್ನು ಆಕ್ರಮಿಸಿಕೊಂಡನು. ಇಂಗ್ಲೀಷರ ಪಲ್ಟನುಗಳನ್ನೋಡಿಸಿದಮೇಲೆ ಹರಿಸಿಂಗನು ಆದುದನ್ನು ತಿಳಿದವನಾಗಿ ಕಡೆಗೆ ಇಂಗ್ಲೀಷರ ಫಿರಂಗಿಗಳನ್ನಾದರೂ ಸಾಗಿಸಿಕೊಂಡು ಹೋಗೋಣವೆಂದು ಫಿರಂಗಿಗಳಕಡೆ ನೋಡಿದರೆ ಅಲ್ಲಿ ಹೈದರನು ಬಂದು ಆಗಲೇ ಅವುಗಳನ್ನಾಕ್ರಮಿಸಿದ್ದನು. ಇದ್ದ ಫಿರಂಗಿಗಳು ನಾಲ್ಕು; ಹರಿಸಿಂಗನು ಅವುಗಳು ತನಗೆ ಸೇರಿದ್ದೆಂದುಹೇಳಲು ಹೈದರನು ಬಿಟ್ಟುಕೊ

ದಲೊಪ್ಪಲಿಲ್ಲ. ಕಡೆಗೆ ಹರಿಸಿಂಗನು ಒಂದು ಫಿರಂಗಿಯನ್ನು ತೆಗೆಸಿಕೊಂಡು ತೃಪ್ತನಾಗಬೇಕಾಯಿತು. ಹೊಡೆದಾಡಿದವನು ಹರಿಸಿಂಗ; ಆತನಿಗೇ ನ್ಯಾಯವಾಗಿ ಅವುಗಳು ಸೇರಬೇಕಾಗಿದ್ದುವು. ಆದರೆ ಹೈದರನು ಬಿಟ್ಟುಕೊಡಲಿಲ್ಲ; ಕೊಳ್ಳೆಯನ್ನು ಸಾಧಿಸುವುದರಲ್ಲಿ ಹೈದರನು ಅಸಮಾನನಾಗಿದ್ದನು. ಹರಿಸಿಂಗನ ಕಡೆಯವರು ಗಟ್ಟಿಯಾಗಿಯೇ "ಹೈದರಲ್ಲಿಯ ಕ್ಷುದ್ರವನ್ನು ಹೊಸದಾಗಿ ಕಾಣಬೇಕೆ? ಪ್ರಾಣಕೊಟ್ಟು ಶತ್ರುಗಳನ್ನು ಹೊಡೆದವರು ನಾವು; ನಮ್ಮ ಹಿಂದೆ ಬಂದು ಲೂಟಿಮಾಡುವುದರಲ್ಲಿ ಪ್ರವೀಣರು ಇವರು" ಎಂದು ದೂಷಿಸಿದರು.

ಈ ಸಂಗತಿಯು ನಡೆದಂದಿನಿಂದ ಹೈದರನಿಗೆ ಹರಿಸಿಂಗನನ್ನು ಏನಾದರೂ ಮಾಡಿ ದೂರಮಾಡುವುದೋ ಕೊಲ್ಲಿಸುವುದೋ ಅಂತೂ ಹೇಗಾದರೂ ನಾಶಮಾಡಬೇಕೆಂಬ ಉದ್ದೇಶವು ಮನಸ್ಸಿನಲ್ಲಿ ನಾಟಿತು. ಹರಿಸಿಂಗನು ಶೂರನಾಗಿದ್ದನೇ ಹೊರತು ಪಿತೂರಿಗಳ ಬಲೆಯನ್ನು ಹೆಣೆಯುವುದರಲ್ಲಿ ಹಸುಳೆಯಂತಿದ್ದನು. ಹೈದರನಾದರೋ ಆ ಕೆಲಸದಲ್ಲಿ ನಿಸ್ಸೀಮ ಪಾಂಡಿತ್ಯವನ್ನು ಪಡೆದಿದ್ದನು. ಹರಿಸಿಂಗನನ್ನು ನಾಶಮಾಡಲು ಹೊಂಚುತ್ತಿದ್ದ ಹೈದರನಿಗೆ ಸಮಯವೂ ಸ್ವಲ್ಪ ಕಾಲದಲ್ಲಿಯೇ ಕೈಗೂಡಿತು.

ತಿರುಚನಾಪಳ್ಳಿಯ ಪ್ರಾಂತ್ಯದಲ್ಲಿ ಕರಾಚೂರಿ ನಂಜರಾಜಯ್ಯನು ಏನನ್ನೂ ಸಾಧಿಸದೆ ರಾಜಧಾನಿಗೆ ಹಿಂತಿರುಗಿಬಂದು ಅಣ್ಣನ ಮಾತನ್ನು ಕೇಳದೆ ಚಿಕ್ಕರಾಜಒಡೆಯರಿಗೆ ಆಸ್ಥಾನದಲ್ಲಿಯೇ ಅವಮಾನಮಾಡಿಸಿದನಷ್ಟೆ. ಆ ಸಮಯದಲ್ಲಿ ದಳವಾಯಿ ದೇವರಾಜಯ್ಯನು ಸತ್ಯಮಂಗಲದಲ್ಲಿ ನೆಲೆಸಿದನು; ಆದರೆ ಹೈದರನು ಖಂಡೇರಾಯನೆಂಬ ಆಪ್ತನಮೂಲಕ ಆತನನ್ನು ರಾಜಧಾನಿಗೆ ಬರಮಾಡಿಸಿ ಸೋದರರಿಗೆ ರಾಜಿಮಾಡಿಸಿದನು. ಮಲೆಯಾಳ ಪ್ರಾಂತ್ಯದಲ್ಲಿ ಮೈಸೂರಿಗೆ ಹಣ ಬರಬೇಕಾಗಿತ್ತು; ಅದನ್ನು ವಸೂಲುಮಾಡಿಕೊಂಡುಬರಲು ಹರಿಸಿಂಗನು ನಿಯಮಿತನಾಗಿ ಹೊರಟನು; ಅಲ್ಲಿಗೆ ಹೋದಮೇಲೆ

ಕಣದ ವಸೂಲಿಯು ಕಷ್ಟವಾಗಿತ್ತು; ಅಂತಹ ವೇಳೆಯಲ್ಲಿ ತನ್ನ ಧಣಿ ದಳವಾಯಿ ದೇವರಾಜಯ್ಯನು ಮೃತಪಟ್ಟ ಸಮಾಚಾರವು ತಿಳಿಯಬಂದಿತು. ಆಗ ಹರಿಸಿಂಗನು ವಿಳಂಬ ಮಾಡದೆ ರಾಜಧಾನಿಗೆ ಹೊರಡಬೇಕೆಂದು ಮಲೆಯಾಳದಿಂದ ಹೊರಟು ಮುಂಗಾರು ಮಳೆಯ ಹೊಡೆತವನ್ನು ಲಕ್ಷಿಸದೆ ಪ್ರಯಾಣ ಮಾಡಿ ಕೊಯಿಮುತ್ತೂರು ಪ್ರಾಂತ್ಯವನ್ನು ತಲಪಿದನು. ಅಲ್ಲಿ ರಾಜಧಾನಿಯಲ್ಲಿ ನಡೆದುದನ್ನು ವಿವರವಾಗಿ ಕೇಳಿ ವ್ಯಸ್ತನಾಗಿ ರಾಜಧಾನಿಗೆ ಹೊರಟು ಹೈದರನ ವಶನಾಗುವುದಕ್ಕಿಂತ ಬೇರೆಲ್ಲಿಯಾದರೂ ಹೋಗಬೇಕೆಂದು ಚಿಂತಿಸಿ, ತಂಜಾವೂರು ರಾಜರ ಬಳಿ ಸೇರಲು ಯೋಚಿಸುತ್ತ, ಹರಿಸಿಂಗನು ವಿಶ್ರಾಂತಿಗೆಂದು ಪ್ರಕಟವಾಗಿ ಹೇಳಿ ಅವಿನಾಶಿಯೆಂಬ ಸ್ಥಳದಲ್ಲಿ ಶಿಬಿರ ಮಾಡಿದನು. ಧೀರನಾಗಿದ್ದ ಹರಿಸಿಂಗನು ಅಲ್ಲಿ ಮೋಸ ನಡೆಯುವುದೆಂದು ನೆನಸಲಿಲ್ಲ.

ಅವಿನಾಶಿಯಲ್ಲಿ ಹರಿಸಿಂಗನು ತಂಗಿದ್ದ ಸುದ್ದಿಯನ್ನು ಕೇಳಿದೊಡನೆಯೇ ಹೈದರನು ತಾನು ಕಾದಿದ್ದ ಸಮಯ ಬಂತೆಂದು ಆಂದುಕೊಂಡನು. ದಿಂಡುಗಲ್ಲು ಪ್ರಾಂತ್ಯಕ್ಕೆ ಸೈನ್ಯದೊಂದು ಭಾಗವನ್ನು ಹಿಂದಕ್ಕೆ ಕಳುಹಿಸುವುದಾಗಿ ಪ್ರಕಟವಾಗಿ ಹೇಳಿಸಿ, ಆಸೈನ್ಯದ ನಾಯಕನಾಗಿದ್ದ ಮೊಖದುಂ ಸಾಹೇಬನಿಗೆ ಏಕಾಂತದಲ್ಲಿ ತನ್ನ ಇಷ್ಟವನ್ನು ಸೂಚಿಸಿದರು. ಮೊಖದುಂ ಸಾಹೇಬನು ಆದೇಶ ಪ್ರಕಾರ ೧೦೦೦ ರಾವುತರು ಮತ್ತು ೨೦೦೦ ಪದಾತಿಗಳೊಡನೆ ಹೊರಟು, ಸ್ವಲ್ಪ ದೂರ ಕಳೆದ ಮೇಲೆ ಅವಿನಾಶಿಯಕಡೆ ತಿರುಗಿ ಮಧ್ಯರಾತ್ರಿಯ ವೇಳೆಗೆ ಹರಿಸಿಂಗನ ಶಿಬಿರಕ್ಕೆ ಬಂದನು. ಹರಿಸಿಂಗನು ಮೋಸವಾದೀತೆಂಬ ಚಿಂತೆಯಿಲ್ಲದೆ ಮಲಗಿ ನಿದ್ರಿಸುತ್ತಿದ್ದನು; ಆತನ ಭಟರೂ ನಿದ್ದೆ ಮಾಡುತ್ತಿದ್ದರು. ಅಂತಹ ಸಮಯದಲ್ಲಿ ಮೊಖದುಂ ಸಾಹೇಬನು ಸದ್ದಿಲ್ಲದೆ ತನ್ನ ಭಟರೊಡನೆ ಒಳನುಗ್ಗಿ ನಿದ್ರಿಸುತ್ತಿದ್ದವರನ್ನು ಹಾಗೆಯೇ ಕೊಲೆಮಾಡಿಸಿದನು. ಎಚ್ಚರಗೊಂಡು ಪ್ರಾಣವನ್ನುಳಿಸಿಕೊಂಡು ಓಡಿಹೋದವರು ಅತ್ಯಲ್ಪ ಮಂದಿ; ಹರಿಸಿಂಗನೂ ಆತನ ಸೈನಿಕರಲ್ಲಿ ಬಹು ಭಾಗದವರೂ ಈ

ಕಾಳರಾತ್ರಿಯ ಕೊಲೆಗೆ ಸಿಲ್ಕಿ ಮೃತರಾದರು. ಹೈದರನ ಪ್ರತಿ ಕಕ್ಷಿಯೂ ಈ ರೀತಿಯಲ್ಲಿ ಮಾಯವಾದನು.

# ೩೧ ಹೈದರಲ್ಲಿಯ ಸಾಹಸ ಪರೀಕ್ಷೆ

ದಳವಾಯಿ ಪದವಿಯಲ್ಲಿದ್ದ ಹೈದರಲ್ಲಿಯು ನಂಜರಾಜಯ್ಯನನ್ನು ಕೊಣನೂರಿಗೆ ಕಳುಹಿಸಿದ ಬಳಿಕ ರಾಜಧಾನಿಗೆ ಒಂದು ಮೈಸೂರಿನ ಮುತ್ತಿಗೆಯಲ್ಲಿ ನಡೆದ ವೆಚ್ಚಕ್ಕಾಗಿ ತನಗೆ ಇದ್ದ ಆದಾಯ ಸಾಲದೆಂದೂ ಇನ್ನೂ ಹೆಚ್ಚಿನ ಆದಾಯವು ಬೇಕೆಂದೂ ರಾಜರಲ್ಲಿ ಅರಿಕೆ ಮಾಡಿದನು. ಖಂಡೇರಾಯನಿಗೆ ಇದು ಹೈದರನ ಹಣದಾಸೆಯ ಫಲವೆಂದು ತಿಳಿದು ಹೈದರನು ಸುಳ್ಳುನೆವಗಳನ್ನು ಹೇಳಿ ಹಣವನ್ನು ಸ್ವೀಕರಿಸುತ್ತಾನೆಂದು ಅರಮನೆಯಲ್ಲಿ ತಿಳಿಸಿದನು. ಏಕೆಂದರೆ ಖಂಡೇರಾಯನಿಗೆ ಹೈದರನ ಪೂರ್ವ ವೃತ್ತಾಂತವೂ ಸ್ವಭಾವವೂ ಚನ್ನಾಗಿ ತಿಳಿದಿತ್ತು.

ವೃತ್ತಾಂತಕ್ಕೆ ಹಿಂದೆ ಒಂದುಸಲ ನಂಜರಾಜಯ್ಯನು ಅಧಿಕಾರ ಮಾಡುತ್ತಿದ್ದಾಗ ಹೈದರನು ಕೆಲವು ಪಾಳಯಗಾರರನ್ನು ಅಡಗಿಸಲು ಸೈನ್ಯದೊಡನೆ ಹೊರಟು ಅವರನ್ನು ಉಪಾಯದಿಂದ ವಶಮಾಡಿಕೊಂಡು ನಂಜರಾಜಯ್ಯನಲ್ಲಿಗೆ ತಾನು ಹೆಚ್ಚಾಗಿ ಯುದ್ಧಮಾಡಿದಂತೆಯೂ ಸೈನಿಕರಲ್ಲಿ ಅನೇಕರು ಗಾಯಪಟ್ಟನಂತೆಯೂ ವರದಿಯನ್ನು ಬರೆಸಿದನು. ನಂಜರಾಜಯ್ಯನು ಹೈದರನಿಗೂ ಇತರ ಅಧಿಕಾರಿಗಳಿಗೂ ಖಿಲ್ಲತ್ತುಗಳನ್ನೂ ಗಾಯಪಟ್ಟವರಿಗೆ ಜಖಂ ಪಟ್ಟಿಯನ್ನೂ ಒಬ್ಬ ಅಧಿಕಾರಿಯೊಡನೆ ಕೊಟ್ಟು ಕಳುಹಿಸಿದನು. ಜಖಂ ಪಟ್ಟಿಯೆನ್ನುವುದು ಗಾಯಪಟ್ಟವರಿಗೆ ಗುಣವಾಗುವವರೆಗೆ ತಿಂಗಳಿಗೆ ೧೪ ರೂ. ಯಂತೆ ವೇತನಕ್ಕೂ ಔಷಧೋಪಚಾರಗಳ ಸಹಾಯ ದ್ರವ್ಯಕ್ಕೂ ಹೆಸರಾಗಿತ್ತು. ಅಧಿಕಾರಿಯು ಗಾಯ ಪಡೆದವರನ್ನು ಸ್ವತಃ ನೋಡಿ ಜಖಂ ಪಟ್ಟಿಯನ್ನು ಕೊಡಿಸಬೇಕಾಗಿತ್ತು. ಆಗ

ಹೈದರನು ಮಾಡಿದ್ದೇನು? ನಿಜವಾಗಿ ಗಾಯಪಟ್ಟಿದ್ದವರು ೬೭ ಮಂದಿ; ಆದರೆ ಹೈದರನು ಸುಮಾರು ಏಳುನೂರು ಮಂದಿ ಸೈನಿಕರ ಕೈಕಾಲುಗಳಿಗೆ ಅರಿಶಿನದ ಅರಿವೆಗಳನ್ನು ಕಟ್ಟಿಸಿ ಅಧಿಕಾರಿಗೆ ತೋರಿಸಿದನು. ಆ ಸೈನಿಕರೂ ಹೈದರನ ಇಷ್ಟದಂತೆ ನಟಿಸಿದರು. ಈ ರೀತಿಯಲ್ಲಿ ೬೭ ಮಂದಿಗೆ ಬದಲಾಗಿ ೭೦೦ ಮಂದಿಗೆ ಲೆಕ್ಕವಾಗಿ ಪ್ರತಿಯೊಬ್ಬರಿಗೂ ೧೪ ರೂ. ಗಳಂತೆ ಸಂದಾಯವಾಯಿತು. ಅದರಲ್ಲಿ ಹೈದರನು ನಿಜವಾಗಿ ಗಾಯ ಪಡೆದಿದ್ದವರಿಗೆ ತಲೆಗೇಳು ರೂಪಾಯಿನಂತೆ ಕೊಟ್ಟು ಉಳಿದುದನ್ನು ತನ್ನ ಸ್ವಂತ ಬೊಕ್ಕಸಕ್ಕೆ ಸೇರಿಸಿದನು. ಇಂತಹ ಚಾತುರ್ಯಗಳು ಎಷ್ಟೋ ನಡೆದಿದ್ದವು. ಸಾಧಾರಣವಾಗಿ ಖಂಡೇರಾಯನು ಅವುಗಳೆಲ್ಲವನ್ನೂ ಬಲ್ಲವನಾಗಿದ್ದನು.

ಖಂಡೇರಾಯನಂತೆಯೇ ರಾಣಿವಾಸದ ಮಾತುಶ್ರೀಯವರೂ ಹೈದರನ ನಡತೆಯನ್ನು ಕಂಡು ಬೇಸರಪಟ್ಟರು. ಕರಾಚೂರಿ ನಂಜರಾಜಯ್ಯನ ಅಧಿಕಾರದಿಂದ ಪಾರಾಗಿ ಹೈದರನ ಅಧಿಕಾರಕ್ಕೊಳಗಾಗುವುದು ಖಂಡಿತವೆಂದು ತಿಳಿದು ಮಾತೃಶ್ರೀಯವರು ಖಂಡೇರಾಯನನ್ನು ಗೋಪ್ಯವಾಗಿ ಕರೆಸಿ ಪ್ರಮಾಣಮಾಡಿಸಿ, ಆತನೊಡನೆಯೂ ದೊರೆಗಳೊಡನೆಯೂ ಆಲೋಚನೆ ಮಾಡಿದರು. ಹೈದರಲ್ಲಿಯನ್ನು ಆದಷ್ಟು ಬೇಗನೆ ಅಡಗಿಸದಿದ್ದರೆ ರಾಜ್ಯವನ್ನೇ ಅಪಹಾರ ಮಾಡುವನೆಂಬುದು ಎಲ್ಲರಿಗೂ ಸ್ಪಷ್ಟವಾಗಿತ್ತು. ಆತನನ್ನು ಅಡಗಿಸಲು ಆ ಸಮಯವು ಅನುಕೂಲವಾಗಿತ್ತು; ಏಕೆಂದರೆ ಆತನ ಸೈನ್ಯದ ಬಹು ಭಾಗವು ಘಟ್ಟದ ಕೆಳಗಿನ ಸೀಮೆಯಲ್ಲಿತ್ತು; ಆತನು ಅಲ್ಪ ಸೈನ್ಯದೊಡನೆ ರಾಜಧಾನಿಯಲ್ಲಿ ಕೋಟೆಯ ಹೊರಗೆ ಇರುತ್ತಿದ್ದನು. ಮತ್ತು ಮರಾಟೆಯವರ ದಂಡು ರಾಜ್ಯದ ಉತ್ತರ ಭಾಗದಲ್ಲಿಯೇ ಇತ್ತು. ಮೊದಲು ಮರಾಟೆಯವರ ಸರದಾರ ವೀಸಾಜಿಪಂಡಿತನಲ್ಲಿಗೆ ಆಪ್ತನಾದವನೂ ಉಭಯ ಪರಿಚಿತನೂ ಆಗಿದ್ದ ಒಬ್ಬ ಸಾಹುಕಾರನನ್ನು ಕಳುಹಿಸಿ ಆತನ ಸೈನ್ಯವು ಸಮಯದಲ್ಲಿ ಸಹಾಯವಾಗಿ ಬರುವಂತೆ ಮಾಡಿಕೊಂಡು, ಹೈದ

ರನ ಅಲ್ಪ ಸೈನ್ಯವನ್ನು ಕೋಟೆಯ ಸೈನ್ಯದಿಂದ ಸೋಲಿಸಿ ಹೈದರನನ್ನು ಹಿಡಿಯಬಹುದೆಂದು ಆಲೋಚನೆ ನಡೆಯಿತು. ಮೊದಲು ಖಂಡೇರಾಯನು ಇಷ್ಟಪಡಲಿಲ್ಲ; ಏಕೆಂದರೆ ಹೈದರನ ಉಪ್ಪನ್ನು ತಿಂದು ಅಭಿವೃದ್ಧಿಗೆ ಬಂದಿದ್ದನು. ಆದರೆ ಹಿಂದೂ ರಾಜ್ಯವಾಗಿದ್ದುದು ಮುಸಲ್ಮಾನ ಕೈಗೆ ಸಿಕ್ಕಿಬಿಟ್ಟಿತೆಂಬ ಯೋಚನೆಯು ಹುಟ್ಟಿ ಖಂಡೇರಾಯನು ಅರಮನೆಯಲ್ಲಿ ನಡೆದ ಯೋಚನೆಯಲ್ಲಿ ಭಾಗಿಯಾದನು. ಈ ಯೋಚನೆಯಂತೆಯೇ ಎಲ್ಲ ಸನ್ನಾಹವೂ ನಡೆಯಿತು. ಮರಾಟೆಯವರು ಸಮಯಕ್ಕೆ ಬರುವುದಾಗಿ ಒಪ್ಪಿದರು. ಖಂಡೇರಾಯನು ಅವರ ಸಮಾಚಾರ ಬಂದೊಡನೆಯೇ ಕಾರ್ಯಭಾಗಕ್ಕೆ ಸಿದ್ಧನಾದನು.

ಆಗಸ್ಟ್ ೧೨ನೇ ತಾರೀಖಿನ ದಿನ ಮರಾಟೆಯವರು ಬಂದು ಸೇರುವುದಾಗಿ ಹೇಳಿಕಳುಹಿದ್ದರಾದುದರಿಂದ ಖಂಡೇರಾಯನು ಆ ದಿನ ಬೆಳಿಗ್ಗೆ ಕೋಟೆಯ ಬಾಗಿಲನ್ನು ನಿತ್ಯದಂತೆ ತೆಗೆಯದೆ ಮುಚ್ಚಿರತಕ್ಕದ್ದೆಂದು ಅಪ್ಪಣೆ ಮಾಡಿದನು. ಹೈದರನು ಸ್ವಲ್ಪ ಸೈನ್ಯದೊಡನೆ ಮಹಾನವಮಿಮಂಟಪದ ಬಳಿ ಇದ್ದನು. ಕೋಟೆಯ ಬಾಗಿಲು ಭದ್ರವಾದಮೇಲೆ ಖಂಡೇರಾಯನು ಗೋಡೆಯ ಮೇಲಿನ ಫಿರಂಗಿಗಳನ್ನು ಹೈದರನ ಬೀಡಿನ ಕಡೆ ತಿರುಗಿಸಿ ಗುಂಡು ಹಾರಿಸಿದನು. ಹೈದರನಿಗೆ ಈ ಫಿರಂಗಿಗಳ ಧಂಕೃತಿಯು ಆಶ್ಚರ್ಯವನ್ನು ಮಾಡಿತು. ಇದೇನೆಂದು ತಿಳಿಯಲು "ಖಂಡೇರಾಯರನ್ನು ಕರಕೊಂಡು ಬಾ" ಎಂದು ದೂತನೊಬ್ಬನನ್ನು ಅಟ್ಟಿದನು. ಆತನು ಕೋಟೆಯ ಕಡೆ ಹೋಗಿ ಬಂದು "ಕೋಟೆಯ ಬಾಗಿಲು ಹಾಕಿದೆ; ಮತ್ತು ಖಂಡೇರಾಯರೇ ಗೋಡೆಯ ಮೇಲೆ ನಿಂತು ಫಿರಂಗಿಗಳನ್ನು ಹೊಡೆಸುತ್ತಿದ್ದಾರೆ" ಎಂದು ತಾನು ಕಂಡುದನ್ನು ತಿಳಿಸಿದನು. ಕುಶಾಗ್ರಮತಿಯಾದ ಹೈದರನು ತಕ್ಷಣವೇ ಅನುಮಾನಶಕ್ತಿಯಿಂದ ಪಿತೂರಿ ನಡೆದಿದೆಯೆಂದು ಗ್ರಹಿಸಿದನು. ತನ್ನ ಕುಟುಂಬವನ್ನೂ ಮಕ್ಕಳನ್ನೂ ಒಂದು ಗುಡಿಸಲಿನಲ್ಲಿ ಮರೆಯಾಗಿಡಿಸಿ, ಸೈನಿಕರಿಗೆ ಅಲ್ಲಲ್ಲಿ ಮರೆಯಾಗಿದ್ದು ಫಿರಂಗಿಗಳ ಹೊಡೆತಕ್ಕೆ ಸಿಕ್ಕದಂತಿರತಕ್ಕದ್ದೆಂದು ಎಚ್ಚ

ರಿಕೆ ಕೊಟ್ಟು, ನದಿಯನ್ನು ದಾಟಲು ಇತರರಾರಿಗೂ ಅನುಕೂಲ ವಾಗದಿರುವಂತೆ ತನ್ನವರನ್ನು ಕಳುಹಿಸಿ ಇದ್ದ ಹರಿಗೋಲುಗಳೆಲ್ಲ ವನ್ನೂ ಹಿಡತರಿಸಿ ಭದ್ರಪಡಿಸಿದನು. ಅತ್ತ ಖಂಡೇರಾಯನು ಫಿರಂಗಿ ಗಳನ್ನು ಹಾರಿಸಿದಮೇಲೆ ಮರಾಟೆಯವರ ಆಗಮನವನ್ನೆದುರು ನೋಡಿದನು; ಅವರು ಬರುವ ಸುಳಿವೇ ಕಾಣಲಿಲ್ಲ. ಆದ್ದರಿಂದ ಖಂಡೇರಾಯನು ಮತ್ತೇನನ್ನೂ ಮಾಡದೆ ಕಾಲ ಕಳೆಯಲು ಹೈದ ರನ ಬಳಿಗೆ ದೂತರನ್ನು ಸಂಧಿಗೆಂದು ಅಟ್ಟಿದನು. ಹೈದರನು ಇದ ನ್ನೂಹಿಸಿಕೊಂಡು ತನಗೂ ಕಾಲವು ಬೇಕಾಗಿದ್ದುದರಿಂದ ತಾನೂ ಸಂಧಿಯ ನಟನೆಯನ್ನು ತೋರಿದನು. ರಾತ್ರಿಯಾಗುವವರೆಗೂ ಈ ರೀತಿ ಕಳೆಯಿತು. ಹೈದರನಾಟವು ಮುಗಿಯಿತೆಂದು ಖಂಡೇ ರಾಯನು ತಿಳಿದು ಈ ಸಂದರ್ಭದಲ್ಲಿ ಹೈದರನು ಪ್ರಾಣಸಹಿತ ತಪ್ಪಿಸಿ ಕೊಂಡು ಹೋಗಲು ಅನುಕೂಲ ಮಾಡಿಕೊಟ್ಟನೆಂದು ಒಂದು ಹೇಳಿಕೆಯುಂಟು.

ಹೈದರನು ತನ್ನಲ್ಲಿದ್ದ ಹಣವೆಲ್ಲವನ್ನೂ ಒಟ್ಟುಗೂಡಿಸಿ ವಿಶ್ವಾ ಸಪಾತ್ರರಾಗಿದ್ದ ನೂರು ಸವಾರರು, ಇಬ್ಬರು ಅಧಿಕಾರಿಗಳು ಮತ್ತು ಇಬ್ಬರು ಪಾರಿಣಿಸವಾರರನ್ನು ಕರೆಸಿ ಅವರಲ್ಲಿ ಆ ಹಣವನ್ನು ಹಂಚಿ ದನು. ಕತ್ತಲಾದ ಕೂಡಲೆ ಎಲ್ಲರೂ ನದಿಯನ್ನು ಈಜಿಕೊಂಡು ದಾಟಿ ಉತ್ತರ ದಡವನ್ನು ಸೇರಿದರು. ಅಲ್ಲಿ ಎಲ್ಲರೂ ಸವಾರರಾಗಿ ಇಪ್ಪತ್ತು ಕುದುರೆಗಳನ್ನು ಬೇರೆಯಾಗಿ ಹಿಡಿಸಿಕೊಂಡು ದೌಡಾ ಯಿಸಿದರು. ಹೈದರನ ಹೆಂಡತಿ ಮಕ್ಕಳು ಮಹಾನವಮಿಯ ಮಂ ಟಪದ ಬಳಿಯ ಗುಡಿಸಲಿನಲ್ಲಿಯೇ ಇದ್ದುಬಿಟ್ಟರು. ಹೈದರನು ತನ್ನ ಪರಿವಾರದೊಡನೆ ಈಶಾನ್ಯ ಮಾರ್ಗವನ್ನು ಹಿಡಿದನು.

ಮರಾಟೆಯವರು ಸಕಾಲಕ್ಕೆ ಬಾರದಿದ್ದುದು ಖಂಡೇರಾಯನ ಪ್ರಯತ್ನಕ್ಕೆ ಅಡ್ಡಿಯಾಯಿತು. ಅಂದು ಬಾರದೆ ಮರಾಟೆಯವರು ವೇಳೆ ಮೀರಿ ಮರುದಿನ ಬಂದರು. ಖಂಡೇರಾಯನು ಬೆಳಗಾದ ಕೂಡಲೆ ಹೈದರನು ಮಾಯವಾದುದನ್ನು ತಿಳಿದು, ಆತನ ಬಿಡಾ

ರಕ್ಕೆ ಹೋಗಿ ಅಲ್ಲಿದ್ದ ಸಾಮಗ್ರಿಯೆಲ್ಲವನ್ನೂ ಕೋಟೆಯೊಳಕ್ಕೆ ಸಾಗಿಸಿ, ಆತನ ಹೆಂಡತಿ ಮಕ್ಕಳನ್ನು ಆದರದಿಂದ ಕೋಟೆಯೊಳಕ್ಕೆ ಕರೆಸಿಕೊಂಡು ಒಳ್ಳೆ ಮನೆಯೊಂದನ್ನು ಬಿಡಿಸಿ ಅಲ್ಲಿಳಿಸಿದನು. ಮತ್ತು ಹೈದರನು ಬೆಂಗಳೂರು ಕೋಟೆಯನ್ನು ಹಿಡಿಯಲು ಪ್ರಯತ್ನಿಸ ಬಹುದೆಂದು ಊಹಿಸಿ ಆ ಕೋಟೆಯು ರಾಜರಿಗೇ ಉಳಿಯುವಂತೆ ಅಲ್ಲಿಯ ಹಿಂದೂ ಸೈನಿಕರಿಗೆ ಎಚ್ಚರಿಕೆಯಿಂದಿದ್ದು ಅಲ್ಲಿಯ ಕಿಲ್ಲೇ ದಾರ ಕಬೀರ್ ಬೇಗನನ್ನು ಹಿಡಿದು ನಿರ್ಬಂಧದಲ್ಲಿಡಬೇಕೆಂದು ಆಜ್ಞೆಯನ್ನು ಕಳುಹಿಸಿದನು.

ಇತ್ತ ಹೈದರನು ರಾತ್ರಿಯೆಲ್ಲ ಸವಾರಿ ಮಾಡಿ ಅರವತ್ತು ಮೈಲಿ ದೂರ ಕಳೆದು ಅಲ್ಲಿ ಆನೆಕಲ್ಲಿನ ಕಡೆಗೆ ತಿರುಗಿದನು. ಆನೆ ಕಲ್ಲಿನಲ್ಲಿ ತನ್ನ ಬಂಧುವಾದ ಇಸ್ಮಾಯಿಲ್ ಬೇಗ್ ಇದ್ದನು ; ಆತ ನಲ್ಲಿ ಆನುವಾಸಕ್ಕೆ ಆಸ್ಪದವಿರಲಿಲ್ಲ - ಬೆಂಗಳೂರಿನಲ್ಲಿ ಅಧಿಕಾರಿ ಯಾಗಿದ್ದ ಕಬೀರಾ ಬೇಗನು ಸ್ನೇಹಿತನೇ ಆಗಿದ್ದರೂ ಹೈದರನಿಗೆ ಆನೆಕಲ್ಲೇ ಉತ್ತಮವೆಂದು ತೋರಿತು. ಅಲ್ಲದೆ ಆನೆಕಲ್ಲಿನ ಬಳಿ ಒಂದು ಸೈನ್ಯವು ಸಿಕ್ಕುವ ಸಂಭವವೂ ಇದ್ದಿತು. ಬೆಳಗಾಗುವುದ ರೊಳಗಾಗಿ ಹೈದರನು ಆನೆಕಲ್ಲನ್ನು ತಲುಪಿದನು ; ದಾರಿಯಲ್ಲಿ ನಲ ವತ್ತು ಕುದುರೆಗಳು ಆಯಾಸಪಟ್ಟು ಮಧ್ಯದಲ್ಲಿಯೇ ನಿಂತವು. ಎಂಭತ್ತು ಕುದುರೆಗಳೊಡನೆ ಆನೆಕಲ್ಲನ್ನು ಪ್ರವೇಶಮಾಡಿ ಇಸ್ಮಾ ಯಿಲ್ ಬೇಗನನ್ನು ಕಂಡು ಸಮಾಚಾರವನ್ನು ತಿಳಿಯಹೇಳಿ, ತಕ್ಷ ಣವೇ ಬೆಂಗಳೂರಿಗೆ ಹೊರಟು ಕಬೀರ್ ಬೇಗನ ಮನಸ್ಸನ್ನರಿತು ಅನುಕೂಲನಾಗಿದ್ದ ಪಕ್ಷದಲ್ಲಿ ಆತನು ಮಾಡಬೇಕಾದುದನ್ನು ಹೇಳ ಬರುವಂತೆ ಆತನನ್ನು ಕಳುಹಿಸಿದನು.

ಇಸ್ಮಾಯಿಲ್ ಬೇಗನು ಬೆಂಗಳೂರನ್ನು ಶೀಘ್ರವಾಗಿಯೇ ಸೇರಿದನು. ಕಬೀರ ಬೇಗನು ಹೈದರನ ಹಿತಚಿಂತಕನೇ ಆಗಿದ್ದನು. ಇಬ್ಬರೂ ಕರ್ತವ್ಯವೇನೆಂದು ಕೂಡಲೆ ನಿರ್ಧರಿಸಿದರು. ಅಲ್ಲಿದ್ದ ಸೈನಿಕರಲ್ಲಿ ಕೆಲವರು ಹಿಂದುಗಳೂ ಉಳಿದವರು ಮುಸಲ್ಮಾನ

ರಾಗಿಯೂ ಇದ್ದರು. ಹಿಂದೂ ಸೈನಿಕರು ಖಂಡೇರಾಯನ ಮಾತನ್ನು ವಿಚಾರತಕ್ಕವರಾಗಿರಲಿಲ್ಲ; ಆದ್ದರಿಂದ ಅವರನ್ನು ಕೋಟೆಯ ಕಾವಲಿನಿಂದ ತಪ್ಪಿಸಬೇಕೆಂದು ಆಲೋಚನೆ ನಡೆಯಿತು. ಸಮಯವೂ ಅನುಕೂಲವಾಗಿತ್ತು; ಪದ್ಧತಿಯಂತೆ ಅಂದು ಸೈನ್ಯಕ್ಕೆ ಬಟವಾಡೆಯಾಗಬೇಕಾಗಿತ್ತು. ಆಗ ಕಬೀರ ಬೇಗನು ಮುಸಲ್ಮಾನ ಸೈನಿಕರನ್ನು ಕಾವಲಿಗೆ ನಿಲ್ಲಿಸಿ, ಹಿಂದೂ ಸೈನಿಕರೆಲ್ಲರೂ ಬಟವಾಡೆಗಾಗಿ ಕೋಟೆಯಲ್ಲಿ ಸೇರಬೇಕೆಂದು ಆಜ್ಞೆ ಮಾಡಿದನು. ಯಾರಿಗೂ ಅನುಮಾನಪಡಲಿಕ್ಕಾಸ್ಪದವಿರಲಿಲ್ಲ. ಹಿಂದೂ ಸೈನಿಕರು ಈ ರೀತಿ ಕೋಟೆಯ ಬಾಗಿಲುಗಳನ್ನು ಕೊತ್ತಲಗಳನ್ನೂ ಬಿಟ್ಟು ಹೊರಟಕೂಡಲೆ ಖಂಡೇರಾಯನ ಆಜ್ಞೆಯನ್ನು ಹೊತ್ತುಕೊಂಡು ಒಬ್ಬ ಸವಾರನು ಬಂದನು. ಸಮಯ ಮೀರಿ ಹೋಗಿತ್ತು; ಹಿಂದೂ ಸೈನಿಕರು ನಿರ್ಬಂಧದಲ್ಲಿ ಸಿಕ್ಕವರಾಗಿದ್ದರು. ಇತ್ತ ಇಸ್ಮಾಯಿಲ್ ಬೇಗನು ಎಲ್ಲವೂ ಅನುಕೂಲವಾಗಿದೆಯೆಂದು ಹೈದರನಿಗೆ ಹೇಳಿಕಳುಹಿದನು; ಅದನ್ನೇ ಹೊಂಚುತ್ತಿದ್ದ ಹೈದರನು ಸೈನ್ಯದೊಡನೆ ಆನೆಕಲ್ಲಿನಿಂದ ಅಂದೇ ಹೊರಟು ಸಂಜೆಯಲ್ಲಿ ಬೆಂಗಳೂರನ್ನು ತಲಪಿದನು. ಆ ದಿನ ಹೈದರನು ಒಟ್ಟು ೯೪ ಮೈಲಿಗಳ ದೂರವನ್ನು ಕುದುರೆಯ ಮೇಲೆಯೇ ಕಳೆದನು.

ಅಪಾಯದಿಂದ ಪಾರಾಗಿದ್ದರೂ ಹೈದರನ ಸ್ಥಿತಿಯು ಕಠಿಣವಾಗಿಯೇ ಇತ್ತು. ಬೆಂಗಳೂರು, ದಿಂಡುಗಲ್ಲು ಮತ್ತು ಬಾರಾಮಹಲುಗಳು ಮಾತ್ರವೇ ಅಧೀನವಾಗಿದ್ದವು; ರಾಜ್ಯ ಕೋಶಗಳು ಖಂಡೇರಾಯನ ಅಧೀನವಾಗಿದ್ದುವು; ಸೈನ್ಯವನ್ನು ಕೂಡಿಸುವ ಆಸೆಯೆಲ್ಲವೂ ಪುದುಚೇರಿ ಪ್ರಾಂತ್ಯದಲ್ಲಿದ್ದ ಮೊಖದುಂ ಅಲ್ಲಿಯ ಮೇಲಿನ ಭರವಸೆಯಲ್ಲಿತ್ತು. ತಕ್ಷಣವೇ ಹೊರಟುಬರತಕ್ಕುದೆಂದು ಮೊಖದುಂ ಅಲ್ಲಿಗೆ ಆನೆಕಲ್ಲಿನಿಂದಲೇ ಹೈದರನು ಆಜ್ಞೆ ಕಳುಹಿದ್ದನು. ಆದರೆ ದೂರಪ್ರಯಾಣವಾಗಿತ್ತು; ಮೊಖದುಂ ಅಲ್ಲಿಯು ಬರುವುದರೊಳಗೆ ಏನಾದರೂ ಸಂಭವಿಸಬಹುದಾಗಿತ್ತು. ಆದರೂ ಹೈದ

ರನು ಎದೆಗೆಡಲಿಲ್ಲ. ಸಾಧ್ಯವಾದಷ್ಟು ಸೇನೆಯನ್ನು ಕೂಡಿಸಲು ತಕ್ಕ ಸನ್ನಾಹ ನಡೆಸಿದನು. ಬೆಂಗಳೂರಿನ ಸಾಹುಕಾರರಿಂದ ಹಣವನ್ನು ಸಾಲವಾಗಿ ತೆಗೆದುಕೊಂಡು ಸೈನಿಕರನ್ನು ಕೂಡಿ ಹಾಕಿದನು. ಹೈದರನು ಪ್ರಸಿದ್ಧ ದಳಪತಿಯಾಗಿದ್ದನು. ಸಣ್ಣವರೂ ದೊಡ್ಡವರೂ ಬಂದು ಸೈನ್ಯದಲ್ಲಿ ಸೇರಿದರು. ಒಂಟಿ ಕುದುರೆ ನಾಯಕನೆಂದು ಹೆಸರು ಪಡೆದ ಯಸೀನ್ ಖಾನನೂ, ಉತ್ತಮ ಕುಲಸ್ಥನೂ ಅನುಭವಶಾಲಿಯೂ ಆದ ಫಜಲುಲ್ಲಾಖಾನನೂ ಈ ಸಮಯದಲ್ಲಿಯೇ ಹೈದರನ ಒಳಗೆ ಒಂದು ಸೇರಿಕೊಂಡರು.

ಮೊಖದುಂ ಅಲ್ಲಿಯು ಪುದುಚೇರಿ ಪ್ರಾಂತ್ಯದಿಂದ ಹೊರಟು ಅಲ್ಲಿದ್ದ ಸೈನ್ಯಗಳನ್ನು ಕೂಡಿಹಾಕುತ್ತ ಬೆಂಗಳೂರಿಗೆ ಪ್ರಯಾಣ ಮಾಡುತ್ತಿದ್ದನು. ಖಂಡೇರಾಯನಿಗೆ ಇದು ತಿಳಿದಿತ್ತು. ಆತನು ಕಣಿವೆ ಕೆಳಗೆ ಪ್ರಬಲರಾಗಿದ್ದ ಇಂಗ್ಲೀಷರಿಗೂ ಫರಾನ್ಸಿಯವರಿಗೂ ರಾಜದ್ರೋಹಿಯಾದ ಹೈದರನು ರಾಜ್ಯಭ್ರಷ್ಟನಾದನೆಂಬ ಸಮಾಚಾರವನ್ನು ತಿಳುಹಿ, ಮೊಖದುಂ ಅಲ್ಲಿಯ ಸೈನ್ಯವು ಘಟ್ಟವನ್ನು ದಾಟಿ ಬಾರದಂತೆ ಮರಾಟೆಯವರ ದಳವನ್ನು ಕಳುಹಿಸಿದನು. ಮೊಖದುಂ ಅಲ್ಲಿಯು ಅಂಚೆಟ್ಟಿ ದುರ್ಗಕ್ಕೆ ಬಂದು ತಲುಪುವ ವೇಳೆಗೆ ಖಂಡೇರಾಯನ ಕಡೆಯವರಾದ ಮರಾಟೆಯವರು ಅಡ್ಡಿಯಾದರು. ಇದನ್ನು ತಿಳಿದು ಹೈದರನು ಫಜಲುಲ್ಲಾಖಾನನನ್ನು ಬೆಂಗಳೂರಿನಿಂದ ಸೈನ್ಯದೊಡನೆ ಕಳುಹಿಸಿದನು. ಫಜಲುಲ್ಲಾಖಾನನು ಆನೆಕಲ್ಲನ್ನು ತಲುಪಿ ಅಲ್ಲಿಂದ ಮರಾಟೆಯವರ ಮಧ್ಯೆ ನುಗ್ಗಿ ಮೊಖದುಂ ಅಲ್ಲಿಗೆ ಸಹಾಯ ಮಾಡಲು ಸಾಹಸಪಟ್ಟನು, ಆದರೆ ಮರಾಟೆಯವರು ಆತನಿಗೆ ಆಸ್ಪದ ಕೊಡಲಿಲ್ಲ. ಆತನ ಸೇನೆಯು ಭಂಗವಾಗಿ ಪ್ರಯತ್ನವು ನಿಷ್ಫಲವಾಯಿತು. ಅತ್ತ ಮೊಖದುಂ ಅಲ್ಲಿಯ ಪಾಡು ದಿನೇದಿನೇ ಕಷ್ಟವಾಗುತ್ತಿತ್ತು. ಹೈದರನಿಗೆ ಉಳಿಗಾಲವು ತೋರಲಿಲ್ಲ.

ಇಂತಹ ಸಮಯದಲ್ಲಿಯೇ ಹೈದರನ ಅದೃಷ್ಟಪರೀಕ್ಷೆಯೂ ದಂತಾಯಿತು. ಮರಾಟೆಯವರು ಹೇಗಾದರೂ ಹಣಕ್ಕಾಸೆ ಪಡ

ತಕ್ಕವರೆಂದುಕೊಂಡು ಹೈದರನು ವೀಸಾಜಿ ಪಂಡಿತನೊಡನೆ ಸಂಧಾನವನ್ನು ಮೊದಲಿಟ್ಟನು. ಸುಲಭವಾಗಿ ಮರಾಟೆಯವರು ಹೊರಟುಹೋಗುವರೆಂದು ಹೈದರನು ಸ್ವಪ್ನೇಪಿ ನೆನೆಸಿರಲಿಲ್ಲ. ಆದರೆ ಆಶ್ಚರ್ಯವೇ ನಡೆಯಿತು. ಮರಾಟೆಯವರು ಹೈದರನ ಮಾತಿಗೊಪ್ಪಿ ಪುಣೆಗೆ ಹೊರಡಲನುವಾದರು. ಇದರ ರಹಸ್ಯವೇನೆಂದರೆ ಪಾಣಿಪಟ ಕ್ಷೇತ್ರದಲ್ಲಿ ಅಹಮ್ಮದ್ ಷಹ ಅಬ್ದಾಲಿಯೊಡನೆ ಘೋರ ಸಂಗ್ರಾಮಕ್ಕೆ ಸಿದ್ಧರಾಗಿ ನಿಂತಿದ್ದ ಮರಾಟೆಯವರಿಗೆ ಎಲ್ಲ ಸೈನ್ಯಗಳೂ ಬೇಕಾಗಿದ್ದವು. ವೀಸಾಜಿ ಪಂಡಿತನು ಅದಕ್ಕಾಗಿಯೇ ಆತುರದಿಂದ ಪುಣೆಗೆ ಹೊರಡಲನುವಾಗಿದ್ದನು. ಮರಾಟೆಯವರು ಹೊರಟುಹೋದುದು ಹೈದರನಿಗೇ ಅಲ್ಲದೆ ಇತರರಿಗೂ ಆಶ್ಚರಿಯನ್ನುಂಟುಮಾಡಿತು. ಅಂತೂ ಹೈದರನು ಅದೃಷ್ಟಶಾಲಿಯೆನ್ನುವುದು ಇದರಿಂದ ಸ್ಪಷ್ಟವಾಯಿತು.

ಹೈದರನು ಮೊಖದುಂ ಅಲ್ಲಿಯನ್ನು ಸೇರಿಕೊಳ್ಳಲು ಅವಕಾಶವಾದಕೂಡಲೆ ಕೊಯಿಮುತ್ತೂರು ಶಾಲ್ಯಗಳು ತನ್ನ ಸ್ವಾಧೀನದಲ್ಲಿಯೇ ಇರುವಂತೆ ಏರ್ಪಾಟುಮಾಡಿ, ನೈರುತ್ಯ ದಿಕ್ಕಿಗೆ ಪ್ರಯಾಣಮಾಡಿ, ಸೋಸಲೆಯ ಬಳಿ ಕಾವೇರೀ ನದಿಯನ್ನು ದಾಟಿದನು. ಫರಾಸ್ಸಿ ಜನರ ಚಿಕ್ಕ ದಳವೊಂದು ಹೈದರನನ್ನು ಸೇರಿಕೊಂಡಿತು. ಖಂಡೇರಾಯನು ನಿದಾನ ಮಾಡಬಾರದೆಂದು ತನ್ನ ಸೈನ್ಯದೊಡನೆ ಹೊರಟು, ನಂಜನಗೂಡಿನ ಬಳಿ ಹೈದರನನ್ನು ಅಡ್ಡಿ ಮಾಡಿದನು. ಹೈದರನಲ್ಲಿ ೬೦೦೦ ಕುದುರೆ, ೫೦೦೦ ಕಾಲಾಳುಗಳು ಮತ್ತು ೨೦ ಫಿರಂಗಿಗಳೂ ಇದ್ದವು. ಖಂಡೇರಾಯನ ಸೈನ್ಯದಲ್ಲಿ ೭೦೦೦ ಕುದುರೆ, ೬೦೦೦ ಕಾಲಾಳುಗಳು ಮತ್ತು ೨೮ ಫಿರಂಗಿಗಳೂ ಇದ್ದವು. ಸಂಖ್ಯೆಯಲ್ಲಿ ಖಂಡೇರಾಯನ ಸೈನ್ಯವು ದೊಡ್ಡದಾಗಿದ್ದರೂ ಶಿಕ್ಷೆಯಲ್ಲಿ ಹೈದರನ ಸೈನ್ಯವು ಮೇಲಾಗಿತ್ತು. ಹೈದರನು ಕದನಕ್ಕೆ ಸಿಕ್ಕಬಾರದೆಂದು ಕಾಲ ತಳ್ಳುತ್ತಿದ್ದನು. ಆದರೆ ಖಂಡೇರಾಯನು ಮುಂದಾಗಿ ಕದನವನ್ನು ಹೂಡಿ ಹೈದರನನ್ನು

ಚನ್ನಾಗಿ ಸೋಲಿಸಿಬಿಟ್ಟನು. ಹೈದರನು ಮಾಡಿದ ಪ್ರಯತ್ನವೆಲ್ಲವೂ ವ್ಯರ್ಥವಾದಂತೆ ತೋರಿತು.

ಆಗ ಹೈದರನ ಜಾಣತನದ ಪರೀಕ್ಷೆಯೊದಗಿತು. ಉಪಾಯ ಗಾರನಾದ ಹೈದರನು ಯಾರಿಗೂ ಏನನ್ನೂ ಹೇಳದೆ ಇನ್ನೂರು ಸೈನಿಕರನ್ನು ಸೇರಿಸಿ ಕರೆದುಕೊಂಡು ರಾತ್ರಿಯಲ್ಲಿ ಶಿಬಿರವನ್ನು ಬಿಟ್ಟು, ಬಳಸಿಕೊಂಡು ಪ್ರಯಾಣಮಾಡಿ, ಮರುದಿನ ಬೆಳಿಗ್ಗೆ ಕೋಣ ನೂರನ್ನು ತಲುಪಿ, ಅಲ್ಲಿದ್ದ ಕರಾಚೂರಿ ನಂಜರಾಜಯ್ಯನ ಮನೆ ಬಾಗಲಿಗೆ ಬಂದು ಅವರನ್ನು ಕಾಣಬೇಕೆಂದು ಪ್ರಾರ್ಥಿಸಿದನು. ನಂಜ ರಾಜಯ್ಯನು ಒಳಗೆ ಬರಮಾಡಿಕೊಂಡ ಕೂಡಲೆ ಹೈದರನು ಆತನಿಗೆ ಅಡ್ಡಬಿದ್ದು, ಆತನ ಕಾಲುಗಳನ್ನು ಹಿಡಿದು, "ತಮ್ಮ ಉಪ್ಪು ತಿಂದು ಬೆಳೆದು ತಮಗೆ ಕೇಡನ್ನು ಬಗೆದುದಕ್ಕಾಗಿ ನನ್ನ ಗತಿ ಹೀಗಾಯಿತು. ಈಗ ಬುದ್ಧಿ ಬಂತು. ನಾನು ಹಿಂದೆ ಮಾಡಿದ ಅಪರಾಧಗಳನ್ನು ಮನ್ನಿಸಬೇಕು. ನನ್ನ ದುರದೃಷ್ಟಕ್ಕೆ ನನ್ನ ದ್ರೋಹವೇ ಕಾರಣ. ತಾವು ದೊಡ್ಡ ಮನಸ್ಸು ಮಾಡಬೇಕು, ಈ ದೀನದರಿದ್ರನನ್ನು ಉದ್ಧಾರ ಮಾಡಬೇಕು. ತಾವು ರಾಜಧಾ ನಿಗೆ ಹಿಂತಿರುಗಿ ಬರುವಿರಾದರೆ ಆ ಕಳ್ಳ ಖಂಡೇರಾಯನ ಆಟವು ಮುಗಿಯುವುದು. ರಾಜ್ಯವೂ ಉದ್ಧಾರವಾಗುವುದು" ಎಂದು ಅತಿ ದೈನ್ಯವನ್ನು ನಟಿಸಿ ಮೊರೆಯಿಟ್ಟನು. ನಂಜರಾಜಯ್ಯನೆಂದೂ ಚತುರನೆಂದೆನಿಸಿರಲಿಲ್ಲ; ಹೈದರನ ಉಪಾಯವನ್ನು ಭೇದಿಸುವ ಚಾತುರ್ಯವು ಆತನಲ್ಲಿರಲಿಲ್ಲ. ಆತನು ಹೈದರನ ಮಾತಿಗೆ ಮರು ಳಾಗಿ ಆತನ ಜತೆಯಲ್ಲಿ ಸೇರಿ ರಾಜಧಾನಿಗೆ ಹೊರಡಲೊಪ್ಪಿದನು. ನಂಜರಾಜಯ್ಯನ ೩೦೦೦ ಸೇನೆಯು ಹೈದರನನ್ನು ಸೇರಿತು. ಮತ್ತು ಮುಖ್ಯಸ್ಥರೆಲ್ಲರಿಗೂ "ಸರ್ವಾಧಿಕಾರಿ ಪದವಿಯಲ್ಲಿರುವ ನಾವು ರಾಜಧಾನಿಗೆ ಹೊರಟು ನಮ್ಮ ಅಧಿಕಾರವನ್ನು ಪೂರ್ವದಂತೆ ಮಾಡಲು ನಿಶ್ಚಯಿಸಿರುತ್ತೇವೆ. ಹೈದರಲ್ಲಿಯು ನಮ್ಮ ದಳವಾ ಯಿಯಾಗಿರುತ್ತಾನೆ. ಎಲ್ಲರೂ ನಮ್ಮ ಆಜ್ಞಾನುವರ್ತಿಗಳಾಗಿ

ಹೈದರನಿಗೆ ಅನುಕೂಲರಾಗಿರತಕ್ಕದ್ದು" ಎಂಬ ಒಕ್ಕಣಿಕೆಯು ನಂಜರಾಜಯ್ಯನ ಹೆಸರಿನಲ್ಲಿ ಎಲ್ಲ ದಿಕ್ಕುಗಳಿಗೂ ಹೊರಟಿತು ಹೈದರನು ಕೊಣನೂರಿಗೆ ಹೋಗಿ ತನ್ನ ಉಪಾಯವನ್ನು ಸಮಗ್ರವಾಗಿ ಸಾಧಿಸಿಯೇ ಬಿಟ್ಟನು.

ಆದರೆ ಖಂಡೇರಾಯನು ದಡ್ಡನಾಗಿರಲಿಲ್ಲ. ಹೊರಟು ಹೋಗುವಾಗ ಹೈದರನು ತನ್ನ ಸೈನಿಕರು ಖಂಡೇರಾಯನ ಕೈಗೆ ಸಿಕ್ಕದಂತಿದ್ದು ಆತನ ಸೈನ್ಯದ ಹಿಂದೆಯೇ ಇರುತ್ತ ಆದಷ್ಟು ಧ್ವಂಸವನ್ನು ಮಾಡುತ್ತಿರಬೇಕೆಂದು ಹೇಳಿಹೋಗಿದ್ದನು. ಸೈನಿಕರು ಅದರಂತೆಯೇ ವರ್ತಿಸುತ್ತಿದ್ದರು. ಹೈದರನು ಕೊಣನೂರಿಗೆ ಹೋದ ಸುದ್ದಿಯನ್ನು ತಿಳಿಯುತ್ತಲೇ ಖಂಡೇರಾಯನು ಹೈದರನ ಆಲೋಚನೆಯನ್ನು ಊಹಿಸಿಕೊಂಡು ಹೈದರನ ಸೇನೆಯು ಹೈದರನನ್ನು ಸೇರದಂತೆ ತನ್ನ ಸೇನೆಯನ್ನು ಇಬ್ಬರ ಮಧ್ಯೆ ನಡಸುತ್ತ ಹೈದರನನ್ನು ನಾಶಗೊಳಿಸಲು ಸನ್ನದ್ಧನಾಗಿದ್ದನು. ಖಂಡೇರಾಯನ ಚಾತುರ್ಯವು ಹೈದರನ ಉಪಾಯವನ್ನು ಸೋಲಿಸಿತು. ಹೈದರನ ಅವಸ್ಥೆ ಪುನಃ ದುರವಸ್ಥೆಯೇ ಆಯಿತು. ಅಂತಹ ವೇಳೆಯಲ್ಲಿಯೂ ಹೈದರನು ಮತ್ತೊಂದು ತಂತ್ರವನ್ನು ನಡೆಸಿದನು.

ಖಂಡೇರಾಯನು ಸೈನ್ಯದೊಡನೆ ಸಂಚರಿಸುತ್ತ ಶ್ರೀರಂಗಪಟ್ಟಣಕ್ಕೆ ೨೬ ಮೈಲಿ ದೂರದಲ್ಲಿರುವ ಕಟ್ಟೆ ಮಳಲವಾಡಿಯ ಬಳಿ ಬಂದಿದ್ದನು. ಆತನ ಶಿಬಿರದಿಂದ ಹೈದರನು ಹತ್ತು ಮೈಲಿ ಮುಂದಿದ್ದನು. ಹೀಗಿರಲು ಹೈದರನು ನಂಜರಾಜಯ್ಯನ ಹೆಸರನ್ನೂ ಮೊಹರನ್ನೂ ಉಪಯೋಗಿಸಿ, ಖಂಡೇರಾಯನ ಸೈನ್ಯದಲ್ಲಿದ್ದ ಅಧಿಕಾರಿಗಳಿಗೆ ಕಾಗದಗಳನ್ನು ಈ ರೀತಿಯಾಗಿ ಬರೆಸಿದನು. "ನೀವೆಲ್ಲರೂ ಸ್ವಾಮಿ ಸೇವಾಪರರಾಗಿ ನಮ್ಮಾಜ್ಞೆಯನ್ನು ಪಾಲಿಸಲು ಕುತೂಹಲಿಗಳಾಗಿರುವಿರೆಂಬುದನ್ನು ತಿಳಿದು ಸಂತೋಷಪಟ್ಟಿದ್ದೇವೆ. ಆಗಲೇ ಗೊತ್ತುಮಾಡಿಕೊಂಡಂತೆ ನೀವೆಲ್ಲರೂ ಒಟ್ಟುಸೇರಿ, ರಹಸ್ಯವಾಗಿ ಖಂಡೇರಾಯನನ್ನು ಸೆರೆಹಿಡಿದು ನಮಗೊಪ್ಪಿಸಿದ ಕೂಡಲೆ

ನಿಮ್ಮ ಬಹುಮಾನಗಳು ನಿಮಗೆ ಸಲ್ಲುತ್ತವೆ. ನಿಮ್ಮ ಕ್ಷಿಪ್ರತೆಯನ್ನೇ ಎದುರುನೋಡುತ್ತಿದ್ದೇವೆ.'' ಈ ಕಾಗದಗಳನ್ನು ಹೈದರನು ಒಬ್ಬ ಬೇಹುಗಾರನಿಗೆ ಕೊಟ್ಟು, ಕಾಗದಗಳು ಖಂಡೇರಾಯನ ಕೈಗೆ ಬೀಳುವಂತೆ ಹೇಗೆ ನಟಿಸಬೇಕಾಗಿದ್ದಿತೋ ಅದನ್ನು ಹೇಳಿಕೊಟ್ಟನು.

ಕಾಗದಗಳನ್ನು ಹೊತ್ತ ಬೇಹಿನವನು ಅದರಂತೆಯೇ ಆಚರಿಸಿದನು. ಕಾಗದಗಳನ್ನು ಓದಿದೊಡನೆಯೇ ಖಂಡೇರಾಯನು ದಿಕ್ಕೆಟ್ಟು, ವಿಚಾರಶೂನ್ಯನಾಗಿ ಹಿಂದುಮುಂದು ನೋಡದೆ, ಯಾರೊಡನೆಯೂ ಆಲೋಚನೆ ಮಾಡದೆ, ತನ್ನ ಕುದುರೆಯನ್ನೇರಿ ಶ್ರೀರಂಗಪಟ್ಟಣಕ್ಕೆ ಓಡಿದನು. ಸ್ವಲ್ಪಹೊತ್ತಿನ ಮೇಲೆ ಸೇನೆಯಲ್ಲಿ ಖಂಡೇರಾಯನು ಮಾಯವಾದುದು ತಿಳಿದು ಮಹಾ ಕೋಲಾಹಲವೆದ್ದಿತು. ಸಮಾಚಾರವೇನೆಂದು ಯಾರಿಗೂ ತಿಳಿದಿರಲಿಲ್ಲವಾಗಿ ಒಬ್ಬೊಬ್ಬರೊಂದೊಂದು ಬಗೆಯಾಗಿ ಅನುಮಾನಪಟ್ಟು, ಏನೋ ಸರ್ವನಾಶವೇ ಆಗಬೇಕೆಂದು ಭಯಪಟ್ಟು, ಅನ್ಯರಿಗೆ ತಿಳಿಯದ ಹಾಗೆ ಪ್ರತಿಯೊಬ್ಬರೂ ಸ್ವಕ್ಷೇಮಚಿಂತನೆಯನ್ನು ಮಾಡಲಾರಂಭಿಸಿದರು. ಈ ಸ್ಥಿತಿಯು ಹೈದರನಿಗೆ ತಿಳಿದಕೂಡಲೆ ಹಿಂದುಮುಂದು ಎರಡು ಕಡೆಗಳಲ್ಲಿಯೂ ಇದ್ದ ತನ್ನ ಸೈನ್ಯವನ್ನು ಅನಾಯಕವಾಗಿದ್ದ ಆ ಸೈನ್ಯದ ಮೇಲೆ ಬೀಳುವಂತೆ ಆಜ್ಞೆಕೊಟ್ಟನು. ಅತಿಸ್ವಲ್ಪಕಾಲದಲ್ಲಿಯೇ ಖಂಡೇರಾಯನ ದಿಕ್ಕೆಟ್ಟ ಸೈನ್ಯವು ಚೆದರಿ, ಪಲಾಯನ ಶಕ್ತರಾದವರು ಪಲಾಯನಪರರಾಗಿಯೂ, ಉಳಿದವರು ಶರಣಾಗತರಾಗಿಯೂ ಆದರು. ಹೈದರನ ಉಪಾಯವು ಕ್ಷಿಪ್ರವಾಗಿ ಫಲದಾಯಕವಾಯಿತು. ಖಂಡೇರಾಯನ ಯುದ್ಧಸಾಮಗ್ರಿಯೆಲ್ಲವೂ ಲಭಿಸಿದ್ದಲ್ಲದೆ ಆತನಿಗಿದ್ದ ಸೇನೆಯು ಚದರಿಹೋಯಿತು.

ತಕ್ಷಣವೇ ರಾಜಧಾನಿಗೆ ಹೈದರನು ಹೊರಡಲಿಲ್ಲ. ಚತುರಪಟ್ಟರಿ ಕೆಲಸ ಕೆಟ್ಟೀತೆಂದು ಯೋಚಿಸಿ ಹೈದರನು ಅಲ್ಲಿಯೇ ನಾಲ್ಕೈದು ದಿನಗಳು ನಿಂತನು. ಅತ್ತ ಕುದುರೆಗಳನ್ನು ಹತ್ತಿ

ಪಲಾಯನಮಾಡಿದವರು ತಮ್ಮನ್ನು ಯಾರೂ ಹಿಂಬಾಲಿಸದಿರಲು ಸ್ವಲ್ಪ ಎಚ್ಚರತಪ್ಪಿ ಶ್ರೀರಂಗಪಟ್ಟಣದ ಕೋಟೆಯೊಳಕ್ಕೆ ಹೋಗದೆ ಹೊರಗಡೆಯೇ ಇರುತ್ತಲಿದ್ದರು. ಹೈದರನು ನಾಲ್ಕೈದು ದಿನಗಳು ಕಳೆದಕೂಡಲೆ ಯಾರಿಗೂ ತಿಳಿಯದಂತೆ ಸಂಜೆಯಲ್ಲಿ ಹೊರಟು, ಮಧ್ಯರಾತ್ರಿ ವೇಳೆಗೆ ಸರಿಯಾಗಿ ಅಲ್ಲಿಗೆ ಬಂದು, ಅವರನ್ನು ಧ್ವಂಸ ಮಾಡಿ, ಕೋಟೆಯೊಳಗಿದ್ದವರು ಪ್ರತೀಕಾರವಮಾಡುವ ಮೊದಲೇ ಅಲ್ಲಿಂದ ಮಾಯವಾಗಿ ಬಿಟ್ಟನು. ಖಂಡೇರಾಯನ ಸೈನ್ಯವೆಲ್ಲವೂ ಈ ರೀತಿಯಲ್ಲಿ ದಿಕ್ಕಾಪಾಲಾಯಿತು.

ಈ ಸಮಯದಲ್ಲಿಯೂ ಹೈದರನು ಆತುರಪಡಲಿಲ್ಲ. ಘಟ್ಟದ ಕೆಳಗಣ ಪ್ರಾಂತ್ಯಗಳೆಲ್ಲವನ್ನೂ ಸ್ವಾಧೀನಪಡಿಸಿಕೊಂಡ ಹೊರತು ಖಂಡೇರಾಯನೊಡನೆ ಪುನಃ ದ್ವಂದ್ವ ಪ್ರಯತ್ನಮಾಡಬಾರದೆಂದು ಗಜ್ಜಲಹಟ್ಟಿ ಕಣಿವೆಯ ಮಾರ್ಗವಾಗಿ ಹೊರಟು ಹೈದರನು ಈರೋಡನ್ನು ಹಿಡಿದು ಆ ಪ್ರಾಂತ್ಯದಲ್ಲಿ ತನ್ನ ಅಧಿಕಾರವನ್ನು ಭದ್ರಗೊಳಿಸಿಕೊಂಡನು. ತರುವಾಯ ಮೇ ತಿಂಗಳಲ್ಲಿ ಪ್ರಯಾಣಮಾಡಿ ತನ್ನ ಸಮಸ್ತ ಸೈನ್ಯದೊಡನೆ ರಾಜಧಾನಿಯ ಬಳಿ ಬಂದು, ನದಿಯ ದಕ್ಷಿಣ ದಡದಲ್ಲಿ ಬೀಡನ್ನು ಬಿಟ್ಟು ಕೆಲಕಾಲ ಖಂಡೇರಾಯನೊಡನೆ ಸಂಧಾನಮಾತ್ರವನ್ನು ನಡೆಸುವವನಾಗಿ ನಟಿಸಿದನು. ಪ್ರತಿ ಸಾಯಂಕಾಲವೂ ತನ್ನ ಸೈನ್ಯಕ್ಕೆ ದಡದ ಅಂಚಿನಲ್ಲಿ ಕವಾಯತು ಮಾಡಿಸುತ್ತ ಏಳು ದಿನಗಳನ್ನು ಕಳೆದನು. ಆತನೆದುರಿಗೇ ನದಿಯ ಆಚೆಯ ದಡದಲ್ಲಿದ್ದ ಖಂಡೇರಾಯನ ಸೈನ್ಯದವರು ಈ ಉಪಾಯದಿಂದ ಮೋಸಹೋಗಿ ಎಚ್ಚರವಿಲ್ಲದಿದ್ದರು. ಎಂಟನೆ ದಿನ ಹೈದರನು ಕವಾಯತನ್ನು ಮಾಡಿಸುತ್ತಿದ್ದ ಹಾಗೆಯೇ ತಟಕ್ಕನೆ ಸೈನ್ಯಗತಿಯನ್ನು ಬದಲಾಯಿಸಿ, ಹೊಳೆಯನ್ನು ದಾಟಿಸಿ, ಖಂಡೇರಾಯನ ಸೈನ್ಯದ ಮೇಲೆ ಬಿದ್ದು ಅವರನ್ನು ದಿಕ್ಕಾಪಾಲಾಗಿ ಓಡಿಸಿ, ತನ್ನ ಸೈನ್ಯವನ್ನು ಕರೆದುಕೊಂಡು ಈಗ ಗಂಜಾಂ ಇರುವ ಎಡೆಯಲ್ಲಿ ಶಿಬಿರವನ್ನು ಸ್ಥಾಪಿಸಿದನು.

ಅಲ್ಲಿಂದ ಹೈದರನು ರಾಜರಿಗೆ "ಖಂಡೇರಾಯನು ನನ್ನ ಸೇವಕನಾದಾತನು. ಆತನನ್ನು ನನಗೆ ಬಿಟ್ಟುಕೊಡಬೇಕು. ಮತ್ತು ರಾಜ್ಯದಿಂದ ನನಗೆ ಸಲ್ಲಬೇಕಾದ ಹಣವು ವಿಶೇಷವಾಗಿರುತ್ತದೆ. ಅದನ್ನು ಸಲ್ಲಿಸಿ ಬಿಟ್ಟರೆ ನಾನು ಪೂರ್ವದಂತೆ ತಮ್ಮ ಸೇವಕನಾಗಿರುತ್ತೇನೆ. ಅದು ತಮಗಿಷ್ಟವಿಲ್ಲದಿದ್ದರೆ ಮತ್ತೆಲ್ಲಿಯಾದರೂ ಉದ್ಯೋಗವನ್ನು ಸಂಪಾದಿಸಿಕೊಳ್ಳುತ್ತೇನೆ. ರಾಜರ ಚಿತ್ತ" ಎಂದು ಹೇಳಿಕಳುಹಿಸಿದನು. ಅಧಿಕಾರಿವರ್ಗದವರಿಗೆ ಇದರ ಸಾರಾಂಶದೊಂದಿಗೆ ತನ್ನ ಇಷ್ಟ ಪೂರ್ತಿಯಾಗದಿದ್ದರೆ ಮುಂದೆ ತಾನು ಮಾಡತಕ್ಕದ್ದನ್ನು ತಿಳಿಯಪಡಿಸಿದನು. ಅಧಿಕಾರಿಗಳು ಸ್ವಾರ್ಥಪರರಾಗಿಯೂ ಹೇಡಿಗಳಾಗಿಯೂ ಇದ್ದುದರಿಂದ ಅನ್ಯಾಯದಿಂದಲೂ ಅಕ್ರಮದಿಂದಲೂ ಸಂಪಾದಿಸಿಕೊಂಡಿದ್ದ ತಮ್ಮ ಸ್ವಂತ ಆಸ್ತಿಪಾಸ್ತಿಗಳು ಉಳಿಯುವ ಮಾರ್ಗವನ್ನೇ ಆಲೋಚಿಸಿ ರಾಜರಿಗೆ ಇದ್ದ ಭಯವನ್ನು ಹೆಚ್ಚಿಸಿದರು. ರಾಜ್ಯವನ್ನಪಹಾರಮಾಡಿದರೂ ಹೈದರನು ರಾಜರ ಹೇಳಿಕೆಯಂತೆ ಅಪಹಾರಮಾಡಿದವನೆಂದು ಸಿದ್ಧವಾಗುವಂತೆ ಸಂಧಾನಮಾಡಿದ್ದ ಹೈದರನ ಯುಕ್ತಿಯನ್ನೂ ಬಲವನ್ನೂ ಕಂಡು ಎಲ್ಲರೂ ನಿಶ್ಚೇಷ್ಟರಾದರು. ಹೈದರನ ಕಾಗದಕ್ಕೆ ಪ್ರತಿಯಾಗಿ ರಾಜರು "ನಮ್ಮ ಸ್ವಂತ ವೆಚ್ಚಕ್ಕೆ ಮೂರು ಲಕ್ಷ ಆದಾಯವನ್ನೂ, ಕರಾಚೂರಿ ನಂಜರಾಜಯ್ಯನಿಗೆ ಒಂದು ಲಕ್ಷ ಆದಾಯವನ್ನೂ ಬಿಟ್ಟು ಉಳಿದುದನ್ನು ಹೈದರನೇ ಹೊತ್ತು ರಾಜ್ಯಾಡಳಿತವನ್ನು ತಾಳಬೇಕೆಂದೂ ಖಂಡೇರಾಯನನ್ನು ಒಪ್ಪಿಸಲಾಗುವುದೆಂದೂ ಹೇಳಿ ಕಳುಹಿಸಲೊಪ್ಪಿದರು.

ಹೈದರನು ಇವುಗಳನ್ನು ರಾಜಾಜ್ಞೆಯೆಂದೂ ತಾನು ರಾಜಾಜ್ಞೆಯನ್ನು ಶಿರಸಾವಹಿಸತಕ್ಕವನೆಂದೂ ಪ್ರಕಟಿಸಿ, ದೈನ್ಯವನ್ನೂ ವಿನಯವನ್ನೂ ನಟಿಸಿ ರಾಜಧಾನಿಯನ್ನು ಹೊಕ್ಕು, ತನ್ನ ಅಧಿಕಾರವನ್ನು ಮೊದಲಿಟ್ಟನು. ಆಗ ರಾಜರೂ ರಾಣಿವಾಸದವರೂ ಖಂಡೇರಾಯನನ್ನು ಉಳಿಸಬೇಕೆಂದು ಹೈದರನನ್ನು ಕೇಳಿಕೊಂಡರು.

ಹೈದರನು "ಖಂಡೇರಾಯನು ನನ್ನ ಪೂರ್ವದ ಮಿತ್ರ, ಆಪ್ತನಾದ ಗೆಳೆಯನು. ಆತನನ್ನು ನಾನು ಗಿಣಿಯಂತೆ ಸಾಕುತ್ತೇನೆ" ಎಂದು ಹೇಳಿ ಕಳುಹಿಸಿದನು. ತರುವಾಯ ಹೈದರನು ಆತನ ಆಸ್ತಿಪಾಸ್ತಿಗಳೆಲ್ಲವನ್ನೂ ಜಪ್ತಿಮಾಡಿಸಿ, ಆತನ ಅನುಚರರನ್ನು ಬಂಧಿಸಿ, ಆತನನ್ನು ಒಂದು ಕಬ್ಬಿಣದ ಪಂಚರದಲ್ಲಿಡಿಸಿ ಗಿಣಿಗೆ ಹಾಕುವಷ್ಟು ಹಾಲನ್ನೂ ಅನ್ನವನ್ನೂ ಕೊಡಿಸುವ ಹಾಗೆ ಅಪ್ಪಣೆಮಾಡಿದನು. ಖಂಡೇರಾಯನು ಪಂಜರದಲ್ಲಿಯೇ ಸತ್ತನು. ಹೈದರನನ್ನು ಯಾರಾದರೂ "ಖಂಡೇರಾಯನಲ್ಲಿ ತಾವು ಬಹಳ ಕ್ರೌರ್ಯವನ್ನು ತೋರಿಸಿದಿರಿ" ಎಂದರೆ "ಏಕೆ, ನಾನು ಅವನನ್ನು ಗಿಣಿಯಂತೆ ಸಾಕಲಿಲ್ಲವೇ" ಎನ್ನುತ್ತಿದ್ದನು.

ವಿಶ್ವಕರ್ಣಾಟಕ ಮುದ್ರಣಾಲಯ, ಬೆಂಗಳೂರು ನಗರ.